YK

ಪರಿಷ್ಕೃತ ಪಠ್ಯ

# ಗಣಿತ

# Mathematics

## ಕನ್ನಡ ಮಾಧ್ಯಮ

## ಭಾಗ–2

## ಅಧ್ಯಾಯ 1

# ಘನಗಳು ಮತ್ತು ಘನಮೂಲಗಳು

# Cubes and Cube Roots

Attractive Maths Solution

Copy rights reserved

# ಅಧ್ಯಾಯ 1
# ಘನಗಳು ಮತ್ತು ಘನಮೂಲಗಳು

**ಕಲಿಕಾಂಶಗಳು:**

- ಪೀಠಿಕೆ
- ಘನಗಳು
- ಕೆಲವು ಆಸಕ್ತಿದಾಯಕ ಮಾದರಿಗಳು
- ಘನಗಳು ಮತ್ತು ಅವುಗಳ ಅವಿಭಾಜ್ಯ ಅಪವರ್ತನಗಳು
- ಪೂರ್ಣ ಘನವಾಗಿಸಲು ಗುಣಿಸಬೇಕಾದ ಕನಿಷ್ಠ ಸಂಖ್ಯೆ
- ಘನಮೂಲಗಳು
- ಅವಿಭಾಜ್ಯ ಅಪವರ್ತನ ವಿಧಾನದ ಮೂಲಕ ಘನಮೂಲ ಕಂಡುಹಿಡಿಯುವುದು
- ಘನಸಂಖ್ಯೆಗಳ ಘನಮೂಲ

1729 ಒಂದು ವಿಶಿಷ್ಟ ಸಂಖ್ಯೆಯಾಗಿದೆ ಮತ್ತು ಇದು ಎರಡು ವಿಭಿನ್ನ ಸಂಖ್ಯೆಯ ಘನಗಳ ಮೊತ್ತವನ್ನಾಗಿ ಎರಡು ರೀತಿಯಲ್ಲಿ ವ್ಯಕ್ತಪಡಿಸಬಹುದಾದ ಕನಿಷ್ಠ ಸಂಖ್ಯೆಯಾಗಿದೆ.

$1729 = 1728 + 1 = 12^3 + 1^3$

$1729 = 1000 + 729 = 10^3 + 9^3$

ಇದನ್ನು ಹಾರ್ಡಿ–ರಾಮಾನುಜನ್ ಸಂಖ್ಯೆ ಎನ್ನುವರು.

**ಘನಗಳು**

ಒಂದು ಪೂರ್ಣ ಸಂಖ್ಯೆಯನ್ನು ಅದೇ ಸಂಖ್ಯೆಗೆ 3 ಬಾರಿ ಗುಣಿಸಿದಾಗ ಬರುವ ಗುಣಲಬ್ಧ ಸಂಖ್ಯೆಯೇ ಪೂರ್ಣ ಘನ ಸಂಖ್ಯೆ.

ಉದಾಹರಣೆ:

$1 = 1 \times 1 \times 1 = 1^3$,

$8 = 2 \times 2 \times 2 = 2^3$,

$27 = 3 \times 3 \times 3 = 3^3$

$125 = 5 \times 5 \times 5 = 5^3$ ...ಇತ್ಯಾದಿ.

ಸಮ ಸಂಖ್ಯೆಗಳ ಘನಗಳು ಸಮಸಂಖ್ಯೆಗಳಾಗಿರುತ್ತವೆ ಹಾಗೂ ಬೆಸ ಸಂಖ್ಯೆಗಳ ಘನಗಳು ಬೆಸ ಸಂಖ್ಯೆಗಳಾಗಿರುತ್ತವೆ.

ಉದಾಹರಣೆ:

$11^3 = 1331$

$12^3 = 1728$

$13^3 = 2197$

$14^3 = 2744$

$15^3 = 3375$

$16^3 = 4096$

$17^3 = 4913$

| ಸಂಖ್ಯೆ | ಸಂಖ್ಯೆಯ ಬಿಡಿಸ್ಥಾನ | ಘನ | ಘನದ ಬಿಡಿಸ್ಥಾನ |
|---|---|---|---|
| 1 | 1 | 1 | 1 |
| 2 | 2 | 8 | 8 |
| 3 | 3 | 27 | 7 |
| 4 | 4 | 64 | 4 |
| 5 | 5 | 125 | 5 |
| 6 | 6 | 216 | 6 |
| 7 | 7 | 343 | 3 |
| 8 | 8 | 512 | 2 |
| 9 | 9 | 729 | 9 |
| 10 | 0 | 1000 | 0 |

**ಕೆಲವು ಆಸಕ್ತಿದಾಯಕ ಮಾದರಿಗಳು:**

**1.ಕ್ರಮಾನುಗತ ಬೆಸಸಂಖ್ಯೆಗಳನ್ನು ಸಂಕಲನ ಮಾಡುವುದು.**

ಕೆಳಗಿನ ಬೆಸ ಸಂಖ್ಯೆಗಳ ಮೊತ್ತದ ಮಾದರಿಯನ್ನು ಗಮನಿಸಿ.

| | | |
|---|---|---|
| 1 | 1 | $1^3$ |
| 3+5 | 8 | $2^3$ |
| 7+9=11 | 27 | $3^3$ |
| 13+15+17+19 | 64 | $5^3$ |
| 21+23+25+27+29 | 125 | $5^3$ |

**2.ಘನಗಳು ಮತ್ತು ಅವುಗಳ ಅವಿಭಾಜ್ಯ ಅಪವರ್ತನಗಳು:**

ಕೆಳಗಿನ ಸಂಖ್ಯೆಗಳ ಮತ್ತು ಅವುಗಳ ಘನಗಳ ಅವಿಭಾಜ್ಯ ಅಪವರ್ತನಗಳನ್ನು ಪರಿಗಣಿಸಿ.

ಯಾವುದೇ ಸಂಖ್ಯೆಯ ಪ್ರತಿಯೊಂದು ಅವಿಭಾಜ್ಯ ಅಪವರ್ತನವು ಅದರ ಘನದ ಅವಿಭಾಜ್ಯ ಅಪವರ್ತಿಸುವಿಕೆಯಲ್ಲಿ 3ಸಲ ಬರುತ್ತದೆ ಎಂಬುದನ್ನು ಗಮನಿಸಿ.

ಒಂದು ಸಂಖ್ಯೆಯ ಎಲ್ಲಾ ಅವಿಭಾಜ್ಯ ಅಪವರ್ತನಗಳು 3 ಬಾರಿ, (ಅಥವಾ 3 ರ ಗುಣಕದಲ್ಲಿದ್ದರೆ) ಅದು ಪೂರ್ಣ ಘನಸಂಖ್ಯೆಯಾಗಿರುತ್ತದೆ.

**ಉದಾಹರಣೆ 1: 243 ಪೂರ್ಣ ಘನವೇ?**

**ಪರಿಹಾರ:**

$243 = 3 \times 3 \times 3 \times 3 \times 3$

ಮೇಲಿನ ಅಪವರ್ತಿಸುವಿಕೆಯಲ್ಲಿ 3ರ ತ್ರಿವಳಿಗಳ ಗುಂಪುಗಳನ್ನು ಮಾಡಿದ ನಂತರ $3 \times 3$ ಹಾಗೆ ಉಳಿಯುತ್ತದೆ. ಆದ್ದರಿಂದ 243 ಪೂರ್ಣ ಘನವಲ್ಲ.

**ಪೂರ್ಣ ಘನವನ್ನಾಗಿಸಲು ಗುಣಿಸಬೇಕಾದ ಕನಿಷ್ಠ ಸಂಖ್ಯೆ.**

**ಉದಾಹರಣೆ 2: 392 ಪೂರ್ಣ ಘನವೇ? ಆಗಿಲ್ಲದಿದ್ದರೆ 392ನ್ನು ಕನಿಷ್ಠ ಯಾವ ಸ್ವಾಭಾವಿಕ ಸಂಖ್ಯೆಯಿಂದ ಗುಣಿಸಿದರೆ ಅದು ಪೂರ್ಣ ಘನವಾಗುತ್ತದೆ?**

**ಪರಿಹಾರ:**

$392 = 2 \times 2 \times 2 \times 7 \times 7$

ಇಲ್ಲಿ ಅವಿಭಾಜ್ಯ ಅಪವರ್ತನ 7 ಮೂರು ಸಲ ಇಲ್ಲ. ಆದ್ದರಿಂದ 392 ಪೂರ್ಣಘನವಲ್ಲ. ಇದನ್ನು ಪೂರ್ಣ ಘನವನ್ನಾಗಿಸಲು ನಮಗೆ ಇನ್ನೂ ಒಂದು 7 ಬೇಕು.

$392 \times 7 = 2 \times 2 \times 2 \times 7 \times 7 \times 7 = 2744$

ಇದು ಪೂರ್ಣ ಘನವಾಗಿದೆ. ಆದ್ದರಿಂದ 392 ಪೂರ್ಣ ಘನವನ್ನಾಗಿಸಲು ಗುಣಿಸಬೇಕಾದ ಕನಿಷ್ಠ ಸ್ವಾಭಾವಿಕ ಸಂಖ್ಯೆ 7.

**ಉದಾಹರಣೆ 3: 53240 ಪೂರ್ಣ ಘನವೇ? ಆಗಿಲ್ಲದಿದ್ದರೆ ಅದನ್ನು ಕನಿಷ್ಠ ಯಾವ ಸ್ವಾಭಾವಿಕ ಸಂಖ್ಯೆಯಿಂದ ಭಾಗಿಸಿದರೆ ಭಾಗಲಬ್ಧವು ಪೂರ್ಣ ಘನವಾಗುತ್ತದೆ?**

**ಪರಿಹಾರ:**

$53240 = 2 \times 2 \times 2 \times 11 \times 11 \times 11 \times 5$

ಅವಿಭಾಜ್ಯ ಅಪವರ್ತನ 5 ಮೂರು ಸಲ ಇಲ್ಲ. ಆದ್ದರಿಂದ 53240 ಪೂರ್ಣಘನವಲ್ಲ.

ಅವಿಭಾಜ್ಯ ಅಪವರ್ತನಗಳಲ್ಲಿ 5 ಒಂದು ಸಲ ಮಾತ್ರ ಇದೆ. ನಾವು ದತ್ತ ಸಂಖ್ಯೆಯನ್ನು 5 ರಿಂದ ಭಾಗಿಸಿದರೆ ಭಾಗಲಬ್ಧದ ಅವಿಭಾಜ್ಯ ಅಪವರ್ತಿಸುವಿಕೆಯಲ್ಲಿ 5 ಇರುವುದಿಲ್ಲ.

ಆದ್ದರಿಂದ,

$53240 \div 5$

$= 2 \times 2 \times 2 \times 11 \times 11 \times 11 = 10648.$

53240 ನ್ನು ಪೂರ್ಣ ಘನವನ್ನಾಗಿಸಲು ಭಾಗಿಸಬೇಕಾದ ಕನಿಷ್ಠ ಸಂಖ್ಯೆ 5. ಇಲ್ಲಿ ಪೂರ್ಣಘನ 10648.

**ಉದಾಹರಣೆ 4: 1188 ಪೂರ್ಣ ಘನವೇ? ಇಲ್ಲವಾದಲ್ಲಿ ಅದನ್ನು ಕನಿಷ್ಠ ಯಾವ ಸ್ವಾಭಾವಿಕ ಸಂಖ್ಯೆಯಿಂದ ಭಾಗಿಸಿದರೆ ಭಾಗಲಬ್ಧವು ಪೂರ್ಣ ಘನವಾಗುತ್ತದೆ?**

**ಪರಿಹಾರ:**

$1188 = 2 \times 2 \times 3 \times 3 \times 3 \times 11$

ಇಲ್ಲಿ ಅವಿಭಾಜ್ಯ ಅಪವರ್ತನಗಳಾದ 2 ಮತ್ತು 11 ಮೂರು ಸಲ ಇಲ್ಲ. ಆದ್ದರಿಂದ 1180 ಪೂರ್ಣ ಘನವಲ್ಲ.

1188ರ ಅವಿಭಾಜ್ಯ ಅಪವರ್ತನಗಳಲ್ಲಿ 2 ಎರಡು ಸಲ ಮತ್ತು 11 ಒಂದು ಸಲ ಇದೆ. ಆದ್ದರಿಂದ ನಾವು ದತ್ತ ಸಂಖ್ಯೆಯನ್ನು $2 \times 2 \times 11 = 44$ ರಿಂದ ಭಾಗಿಸಿದರೆ ಭಾಗಲಬ್ಧದ ಅವಿಭಾಜ್ಯ ಅಪವರ್ತಿಸುವಿಕೆಯಲ್ಲಿ 2 ಮತ್ತು 11 ಇರುವುದಿಲ್ಲ.

ಆದ್ದರಿಂದ 1188ನ್ನು ಪೂರ್ಣ ಘನವನ್ನಾಗಿಸಲು ಭಾಗಿಸಬೇಕಾದ ಕನಿಷ್ಠ ಸಂಖ್ಯೆ 44.

ಇದರಿಂದ ದೊರಕುವ ಪೂರ್ಣ ಘನ ಸಂಖ್ಯೆ

$= 1188 \div 44 = 27 \ (=3^3).$

**ಉದಾಹರಣೆ 5: 68600 ಪೂರ್ಣ ಘನವೇ? ಇಲ್ಲವಾದಲ್ಲಿ ಅದನ್ನು ಕನಿಷ್ಠ ಯಾವ ಸ್ವಾಭಾವಿಕ ಸಂಖ್ಯೆಯಿಂದ ಗುಣಿಸಿದರೆ ಅದು ಪೂರ್ಣ ಘನವಾಗುತ್ತದೆ?**

**ಪರಿಹಾರ:**

$68600 = 2 \times 2 \times 2 \times 5 \times 5 \times 7 \times 7 \times 7$

ಅವಿಭಾಜ್ಯ ಅಪವರ್ತನ 5 ಮೂರು ಸಲ ಇಲ್ಲ. ಆದ್ದರಿಂದ 68600 ಪೂರ್ಣ ಘನವಲ್ಲ. ಇದನ್ನು ಪೂರ್ಣ ಘನವನ್ನಾಗಿಸಲು 5ರಿಂದ ಗುಣಿಸಬೇಕು.

ಆದ್ದರಿಂದ,

$68600 \times 5 = 2 \times 2 \times 2 \times 5 \times 5 \times 5 \times 7 \times 7 \times 7$

$= 343000$ ಇದು ಪೂರ್ಣ ಘನ.

**ಘನಮೂಲಗಳು:**

ಘನಮೂಲ ಕಂಡುಹಿಡಿಯುವುದು ಘನವನ್ನು ಕಂಡುಹಿಡಿಯುವುದರ ವಿಲೋಮ ಕ್ರಿಯೆಯಾಗಿದೆ.

**$\sqrt[3]{}$ ಚಿಹ್ನೆಯು ಘನಮೂಲವನ್ನು ಸೂಚಿಸುತ್ತದೆ.**

ಉದಾಹರಣೆ:

$\sqrt[3]{1} = 1; \sqrt[3]{8} = 2; \ \sqrt[3]{729} = 9; \sqrt[3]{1000} = 10$

**ಅವಿಭಾಜ್ಯ ಅಪವರ್ತನ ವಿಧಾನದ ಮೂಲಕ ಘನಮೂಲ ಕಂಡುಹಿಡಿಯುವುದು.**

**ಉದಾಹರಣೆ 6: 8000 ದ ಘನಮೂಲವನ್ನು ಕಂಡುಹಿಡಿಯಿರಿ.**

**ಪರಿಹಾರ:**

8000 ದ ಅವಿಭಾಜ್ಯ ಅಪವರ್ತಿಸುವಿಕೆ

$8000 = 2 \times 2 \times 2 \times 2 \times 2 \times 2 \times 5 \times 5 \times 5$

$\sqrt[3]{8000} = 2 \times 2 \times 5 = 20$

**ಉದಾಹರಣೆ 7: ಅವಿಭಾಜ್ಯ ಅಪವರ್ತನ ವಿಧಾನದಿಂದ 13824ರ ಘನಮೂಲವನ್ನು ಕಂಡುಹಿಡಿಯಿರಿ**

**ಪರಿಹಾರ:**

13824 = $\underline{2 \times 2 \times 2} \times \underline{2 \times 2 \times 2} \times \underline{2 \times 2 \times 2} \times \underline{3 \times 3 \times 3}$

$= 2^3 \times 2^3 \times 2^3 \times 3^3$

ಆದ್ದರಿಂದ

$\sqrt[3]{13824} = 2 \times 2 \times 2 \times 3 = 24$

**ಘನಸಂಖ್ಯೆಗಳ ಘನಮೂಲ**

**ಉದಾಹರಣೆ 8: ಅಂದಾಜು ವಿಧಾನದಿಂದ 17576 ರ ಘನಮೂಲವನ್ನು ಕಂಡುಹಿಡಿಯಿರಿ.**

**ಪರಿಹಾರ:**

ಕೊಟ್ಟ ಸಂಖ್ಯೆ 17576 ಆಗಿದೆ.

**ಹಂತ 1:**

17576 ಇದರ ಅಂಕಿಗಳನ್ನು ಬಲತುದಿಯಿಂದ ಆರಂಭಿಸಿ ಮೂರು ಅಂಕಿಗಳ ಗುಂಪುಗಳಾಗಿ ಮಾಡಿ.

17 $\underline{576}$

**ಹಂತ 2:**

ಮೊದಲನೆ ಗುಂಪು 576 ಇದರ ಬಿಡಿಸ್ಥಾನದ ಅಂಕಿ 6. ಆದ್ದರಿಂದ ಕೊಟ್ಟ ಸಂಖ್ಯೆಯ ಘನಮೂಲದ ಬಿಡಿ ಸ್ಥಾನದಲ್ಲಿ 6 ಬರುತ್ತದೆ.

**ಹಂತ 3:**

ಈಗ ಎರಡನೆ ಗುಂಪು 17ನ್ನು ತೆಗೆದುಕೊಂಡಾಗ,

$2^3$ (=8) < 17 < $3^3$ (=27)

ಸಣ್ಣ ಸಂಖ್ಯೆ 2ನ್ನು ಬೇಕಾದ ಘನಮೂಲದ ಹತ್ತನೇ ಸ್ಥಾನದಲ್ಲಿ ತೆಗೆದುಕೊಳ್ಳುತ್ತೇವೆ.

ಆದ್ದರಿಂದ, $\sqrt[3]{17576} = 26$

## ಅಭ್ಯಾಸ 1

**1. ಈ ಕೆಳಗಿನ ಸಂಖ್ಯೆಗಳಲ್ಲಿ ಯಾವುವು ಪೂರ್ಣ ಘನಗಳಲ್ಲ?**

**(i) 216 (ii) 128 (iii) 1000 (iv) 100 (v) 46656**

**ಪರಿಹಾರ:**

| | |
|---|---|
| **2** | **216** |
| **2** | 108 |
| **2** | 54 |
| **3** | 27 |
| **3** | 9 |
| **3** | 3 |
| | 1 |

216 = $\underline{2 \times 2 \times 2} \times \underline{3 \times 3 \times 3}$

216ರಲ್ಲಿ 2 ಮತ್ತು 3 ಇವುಗಳು 3 ಬಾರಿ ಗುಣಿಸಿಕೊಂಡಿವೆ.

ಆದ್ದರಿಂದ 216 ಪೂರ್ಣ ಘನ ಸಂಖ್ಯೆ

$\sqrt[3]{216} = 2 \times 3 = 6$

**(ii) 128**

| | |
|---|---|
| **2** | **128** |
| **2** | 64 |
| **2** | 32 |
| **2** | 16 |
| **2** | 8 |
| **2** | 4 |
| **2** | 2 |
| | 1 |

128 = $\underline{2 \times 2 \times 2} \times \underline{2 \times 2 \times 2} \times 2$

128ರಲ್ಲಿ ಒಂದು ಗುಂಪಿನಲ್ಲಿ 2 ಬಿಡಿಯಾಗಿದ್ದು 3 ಬಾರಿ ಗುಣಿಸಿಕೊಂಡಿಲ್ಲ

ಆದ್ದರಿಂದ 128 ಪೂರ್ಣ ಘನ ಸಂಖ್ಯೆ ಅಲ್ಲ

**(iii) 1000**

| | |
|---|---|
| **2** | **1000** |
| **2** | 500 |
| **2** | 250 |
| **5** | 125 |
| **5** | 25 |
| **5** | 5 |
| | 1 |

1000 = $\underline{2 \times 2 \times 2} \times \underline{5 \times 5 \times 5}$

1000 ರಲ್ಲಿ 2 ಮತ್ತು 5 ಇವುಗಳು 3 ಬಾರಿ ಗುಣಿಸಿಕೊಂಡಿವೆ.

ಆದ್ದರಿಂದ 1000 ಪೂರ್ಣ ಘನ ಸಂಖ್ಯೆ

$\sqrt[3]{1000} = 2 \times 5 = 10$

**(iv) 100**

| | |
|---|---|
| **2** | **100** |
| **2** | 50 |
| **5** | 25 |
| **5** | 5 |
| | 1 |

100 = $2 \times 2 \times 5 \times 5$

100 ರಲ್ಲಿ 2 ಮತ್ತು 3 ಇವುಗಳು 3 ಬಾರಿ ಗುಣಿಸಿಕೊಂಡಿಲ್ಲ

ಆದ್ದರಿಂದ 100 ಪೂರ್ಣ ಘನ ಸಂಖ್ಯೆ ಅಲ್ಲ

**(v) 46656**

| **2** | **46656** |
|---|---|
| **2** | 23328 |
| **2** | 11664 |
| **2** | 5832 |
| **2** | 2916 |
| **2** | 1458 |
| **3** | 729 |
| **3** | 243 |
| **3** | 81 |
| **3** | 9 |
| **3** | 3 |
| | 1 |

$46656 = \underline{2 \times 2 \times 2} \times \underline{2 \times 2 \times 2} \times \underline{3 \times 3 \times 3} \times \underline{3 \times 3}$

ಇಲ್ಲಿ ಒಂದು ಗುಂಪಿನಲ್ಲಿ 3, ಮೂರು ಬಾರಿ ಗುಣಿಸಿಕೊಂಡಿಲ್ಲ.

ಆದ್ದರಿಂದ 46656 ಪೂರ್ಣಘನ ಅಲ್ಲ

**2. ಕೆಳಗಿನ ಸಂಖ್ಯೆಗಳನ್ನು ಪೂರ್ಣ ಘನಗಳನ್ನಾಗಿ ಮಾಡಲು ಕನಿಷ್ಠ ಯಾವ ಸಂಖ್ಯೆಯಿಂದ ಗುಣಿಸಬೇಕು ಎಂದು ಕಂಡುಹಿಡಿಯಿರಿ.**

**(i) 243 (ii) 256 (iii) 72 (iv) 675 (v) 100**

**ಪರಿಹಾರ:**

**(i) 243**

| **3** | **243** |
|---|---|
| **3** | 81 |
| **3** | 9 |
| **3** | 3 |
| **3** | 1 |

$243 = \underline{3 \times 3 \times 3} \times 3 \times 3$

ಇಲ್ಲಿ ಅವಿಭಾಜ್ಯ ಅಪವರ್ತನ 3 ಒಂದು ಗುಂಪಿನಲ್ಲಿ ಮೂರು ಸಲ ಇಲ್ಲ. ಆದ್ದರಿಂದ 243 ಪೂರ್ಣಘನವಲ್ಲ. ಇದನ್ನು ಪೂರ್ಣ ಘನವನ್ನಾಗಿಸಲು ನಮಗೆ ಇನ್ನೂ ಒಂದು 3 ಬೇಕು.

$243 \times 3 = \underline{3 \times 3 \times 3} \times \underline{3 \times 3 \times 3} = 729$

ಇದು ಪೂರ್ಣ ಘನವಾಗಿದೆ.

ಆದ್ದರಿಂದ 243 ಪೂರ್ಣ ಘನವನ್ನಾಗಿಸಲು ಗುಣಿಸಬೇಕಾದ ಕನಿಷ್ಠ ಸ್ವಾಭಾವಿಕ ಸಂಖ್ಯೆ 3.

**(ii) 256**

| **2** | **256** |
|---|---|
| **2** | 128 |
| **2** | 64 |
| **2** | 32 |
| **2** | 16 |
| **2** | 8 |
| **2** | 4 |
| **2** | 2 |
| | 1 |

$256 = \underline{2 \times 2 \times 2} \times \underline{2 \times 2 \times 2} \times 2 \times 2$

ಇಲ್ಲಿ ಅವಿಭಾಜ್ಯ ಅಪವರ್ತನ 2 ಒಂದು ಗುಂಪಿನಲ್ಲಿ ಮೂರು ಸಲ ಇಲ್ಲ. ಆದ್ದರಿಂದ 256 ಪೂರ್ಣಘನವಲ್ಲ. ಇದನ್ನು ಪೂರ್ಣ ಘನವನ್ನಾಗಿಸಲು ನಮಗೆ ಇನ್ನೂ ಒಂದು 2 ಬೇಕು.

$256 \times 2 = \underline{2 \times 2 \times 2} \times \underline{2 \times 2 \times 2} \times \underline{2 \times 2 \times 2}$ $= 512$ ಇದು ಪೂರ್ಣ ಘನವಾಗಿದೆ.

ಆದ್ದರಿಂದ 256 ಪೂರ್ಣ ಘನವನ್ನಾಗಿಸಲು ಗುಣಿಸಬೇಕಾದ ಕನಿಷ್ಠ ಸ್ವಾಭಾವಿಕ ಸಂಖ್ಯೆ 2.

**(iii) 72**

| **2** | **72** |
|---|---|
| **2** | 36 |
| **2** | 18 |
| **3** | 9 |
| **3** | 3 |
| | 1 |

$72 = \underline{2 \times 2 \times 2} \times 3 \times 3$

ಇಲ್ಲಿ ಅವಿಭಾಜ್ಯ ಅಪವರ್ತನ 3 ಮೂರು ಸಲ ಇಲ್ಲ. ಆದ್ದರಿಂದ 72 ಪೂರ್ಣ ಘನವಲ್ಲ. ಇದನ್ನು ಪೂರ್ಣ ಘನವನ್ನಾಗಿಸಲು ನಮಗೆ ಇನ್ನೂ ಒಂದು 3 ಬೇಕು.

$72 \times 3 = \underline{2 \times 2 \times 2} \times \underline{3 \times 3 \times 3} = 216$

ಇದು ಪೂರ್ಣ ಘನವಾಗಿದೆ.

ಆದ್ದರಿಂದ 72 ಪೂರ್ಣ ಘನವನ್ನಾಗಿಸಲು ಗುಣಿಸಬೇಕಾದ ಕನಿಷ್ಠ ಸ್ವಾಭಾವಿಕ ಸಂಖ್ಯೆ 3.

**(iv) 675**

| **3** | **675** |
|---|---|
| **3** | 225 |
| **3** | 75 |
| **5** | 25 |
| **5** | 5 |
| | 1 |

$675 = \underline{3 \times 3 \times 3} \times 5 \times 5$

ಇಲ್ಲಿ ಅವಿಭಾಜ್ಯ ಅಪವರ್ತನ 5 ಮೂರು ಸಲ ಇಲ್ಲ. ಆದ್ದರಿಂದ 675 ಪೂರ್ಣ ಘನವಲ್ಲ. ಇದನ್ನು ಪೂರ್ಣ ಘನವನ್ನಾಗಿಸಲು ನಮಗೆ ಇನ್ನೂ ಒಂದು 5 ಬೇಕು.

$675 \times 5 = \underline{3 \times 3 \times 3} \times \underline{5 \times 5 \times 5} = 3375$

ಇದು ಪೂರ್ಣ ಘನವಾಗಿದೆ.

ಆದ್ದರಿಂದ 675 ಪೂರ್ಣ ಘನವನ್ನಾಗಿಸಲು ಗುಣಿಸಬೇಕಾದ ಕನಿಷ್ಠ ಸ್ವಾಭಾವಿಕ ಸಂಖ್ಯೆ 5.

**(v) 100**

| 2 | 100 |
|---|---|
| 2 | **50** |
| 5 | **25** |
| 5 | **5** |
| | **1** |

$100 = 2 \times 2 \times 5 \times 5$

100 ರಲ್ಲಿ 2 ಮತ್ತು 3 ಇವುಗಳು 3 ಬಾರಿ ಗುಣಿಸಿಕೊಂಡಿಲ್ಲ

ಆದ್ದರಿಂದ 100 ಪೂರ್ಣ ಘನ ಸಂಖ್ಯೆ ಅಲ್ಲ

ಇದನ್ನು ಪೂರ್ಣ ಘನವನ್ನಾಗಿಸಲು ನಮಗೆ ಇನ್ನೂ ಒಂದು 2 ಮತ್ತು 5 ಬೇಕು.

$100 \times 2 \times 5 = 1000$

ಇದು ಪೂರ್ಣ ಘನವಾಗಿದೆ.

ಆದ್ದರಿಂದ 675 ಪೂರ್ಣ ಘನವನ್ನಾಗಿಸಲು ಗುಣಿಸಬೇಕಾದ ಕನಿಷ್ಠ ಸ್ವಾಭಾವಿಕ ಸಂಖ್ಯೆ $2 \times 5 = 10$.

**3. ಕೆಳಗಿನ ಸಂಖ್ಯೆಗಳನ್ನು ಪೂರ್ಣ ಘನಗಳನ್ನಾಗಿ ಮಾಡಲು ಕನಿಷ್ಠ ಯಾವ ಸಂಖ್ಯೆಯಿಂದ ಭಾಗಿಸಬೇಕು ಎಂದು ಕಂಡುಹಿಡಿಯಿರಿ.**

**(i) 81 (ii) 128 (iii) 135 (iv) 192 (v) 704**

**ಪರಿಹಾರ:**

**(i) 81**

| **3** | **81** |
|---|---|
| **3** | 27 |
| **3** | 9 |
| **3** | 3 |
| | 1 |

$81 = \underline{3 \times 3 \times 3} \times 3$

ಇಲ್ಲಿ ಅವಿಭಾಜ್ಯ ಅಪವರ್ತನ 3 ಒಂದು ಗುಂಪಿನಲ್ಲಿ ಮೂರು ಸಲ ಇಲ್ಲ. ಆದ್ದರಿಂದ 81 ಪೂರ್ಣಘನವಲ್ಲ. ಇದನ್ನು ಪೂರ್ಣ ಘನವನ್ನಾಗಿಸಲು ನಾವು ಒಂದು 3ನ್ನು ಇಲ್ಲವಾಗಿಸಬೇಕು.

81ನ್ನು 3ರಿಂದ ಭಾಗಿಸಿದರೆ ಒಂದು 3 ಇರುವುದಿಲ್ಲ.

$81 \div 3 = \underline{3 \times 3 \times 3} = 27$

ಇದು ಪೂರ್ಣ ಘನವಾಗಿದೆ.

ಆದ್ದರಿಂದ 81 ಪೂರ್ಣ ಘನವನ್ನಾಗಿಸಲು ಭಾಗಿಸಬೇಕಾದ ಕನಿಷ್ಠ ಸ್ವಾಭಾವಿಕ ಸಂಖ್ಯೆ 3.

**(ii) 128**

| **2** | **128** |
|---|---|
| **2** | 64 |
| **2** | 32 |
| **2** | 16 |
| **2** | 8 |
| **2** | 4 |
| **2** | 2 |
| | 1 |

$128 = \underline{2 \times 2 \times 2} \times \underline{2 \times 2 \times 2} \times 2$

ಇಲ್ಲಿ ಅವಿಭಾಜ್ಯ ಅಪವರ್ತನ 2 ಒಂದು ಗುಂಪಿನಲ್ಲಿ ಮೂರು ಸಲ ಇಲ್ಲ. ಆದ್ದರಿಂದ 128 ಪೂರ್ಣಘನವಲ್ಲ. ಇದನ್ನು ಪೂರ್ಣ ಘನವನ್ನಾಗಿಸಲು ನಾವು ಒಂದು 2ನ್ನು ಇಲ್ಲವಾಗಿಸಬೇಕು.

128 ನ್ನು 2 ರಿಂದ ಭಾಗಿಸಿದರೆ ಒಂದು 2 ಇರುವುದಿಲ್ಲ.

$128 \div 2 = \underline{2 \times 2 \times 2} \times \underline{2 \times 2 \times 2} = 64$

ಇದು ಪೂರ್ಣ ಘನವಾಗಿದೆ.

ಆದ್ದರಿಂದ 128 ಪೂರ್ಣ ಘನವನ್ನಾಗಿಸಲು ಭಾಗಿಸಬೇಕಾದ ಕನಿಷ್ಠ ಸ್ವಾಭಾವಿಕ ಸಂಖ್ಯೆ 2.

**(iii) 135**

| **3** | **135** |
|---|---|
| **3** | 45 |
| **3** | 15 |
| **5** | 5 |
| | 1 |

$135 = \underline{3 \times 3 \times 3} \times 5$

ಇಲ್ಲಿ ಅವಿಭಾಜ್ಯ ಅಪವರ್ತನ 5 ಮೂರು ಸಲ ಇಲ್ಲ. ಆದ್ದರಿಂದ 135 ಪೂರ್ಣಘನವಲ್ಲ. ಇದನ್ನು ಪೂರ್ಣ ಘನವನ್ನಾಗಿಸಲು ನಾವು ಒಂದು 5 ನ್ನು ಇಲ್ಲವಾಗಿಸಬೇಕು.

135 ನ್ನು 5 ರಿಂದ ಭಾಗಿಸಿದರೆ ಒಂದು 5 ಇರುವುದಿಲ್ಲ.

$135 \div 5 = \underline{3 \times 3 \times 3} = 27$

ಇದು ಪೂರ್ಣ ಘನವಾಗಿದೆ.

ಆದ್ದರಿಂದ 135 ಪೂರ್ಣ ಘನವನ್ನಾಗಿಸಲು ಭಾಗಿಸಬೇಕಾದ ಕನಿಷ್ಠ ಸ್ವಾಭಾವಿಕ ಸಂಖ್ಯೆ 5.

**(iv) 192**

| 2 | 192 |
|---|---|
| 2 | 96 |
| 2 | 48 |
| 2 | 24 |
| 2 | 12 |
| 2 | 6 |
| 3 | 3 |
| | 1 |

$192 = \underline{2 \times 2 \times 2} \times \underline{2 \times 2 \times 2} \times 3$

ಇಲ್ಲಿ ಅವಿಭಾಜ್ಯ ಅಪವರ್ತನ 3 ಮೂರು ಸಲ ಇಲ್ಲ. ಆದ್ದರಿಂದ 192 ಪೂರ್ಣಘನವಲ್ಲ. ಇದನ್ನು ಪೂರ್ಣ ಘನವನ್ನಾಗಿಸಲು ನಾವು ಒಂದು 3 ನ್ನು ಇಲ್ಲವಾಗಿಸಬೇಕು.

192 ನ್ನು 3 ರಿಂದ ಭಾಗಿಸಿದರೆ ಒಂದು 3 ಇರುವುದಿಲ್ಲ.

$192 \div 3 = \underline{2 \times 2 \times 2} \times \underline{2 \times 2 \times 2} = 64$

ಇದು ಪೂರ್ಣ ಘನವಾಗಿದೆ.

ಆದ್ದರಿಂದ 192 ಪೂರ್ಣ ಘನವನ್ನಾಗಿಸಲು ಭಾಗಿಸಬೇಕಾದ ಕನಿಷ್ಠ ಸ್ವಾಭಾವಿಕ ಸಂಖ್ಯೆ 3.

**(v) 704**

| 2 | 704 |
|---|---|
| 2 | 352 |
| 2 | 176 |
| 2 | 88 |
| 2 | 44 |
| 2 | 22 |
| 11 | 11 |
| | 1 |

$704 = \underline{2 \times 2 \times 2} \times \underline{2 \times 2 \times 2} \times 11$

ಇಲ್ಲಿ ಅವಿಭಾಜ್ಯ ಅಪವರ್ತನ 11 ಮೂರು ಸಲ ಇಲ್ಲ. ಆದ್ದರಿಂದ 704 ಪೂರ್ಣಘನವಲ್ಲ. ಇದನ್ನು ಪೂರ್ಣ ಘನವನ್ನಾಗಿಸಲು ನಾವು ಒಂದು 11 ನ್ನು ಇಲ್ಲವಾಗಿಸಬೇಕು.

704 ನ್ನು 11 ರಿಂದ ಭಾಗಿಸಿದರೆ ಒಂದು 3 ಇರುವುದಿಲ್ಲ.

$704 \div 11 = \underline{2 \times 2 \times 2} \times \underline{2 \times 2 \times 2} = 64$

ಇದು ಪೂರ್ಣ ಘನವಾಗಿದೆ.

ಆದ್ದರಿಂದ 704 ಪೂರ್ಣ ಘನವನ್ನಾಗಿಸಲು ಭಾಗಿಸಬೇಕಾದ ಕನಿಷ್ಠ ಸ್ವಾಭಾವಿಕ ಸಂಖ್ಯೆ 11.

4. ಪರೀಕ್ಷಿತ್ ಪ್ಲಾಸ್ಟಿಕ್‌ನಿಂದ 5 ಸೆಂ.ಮೀ, 2 ಸೆಂ.ಮೀ ಮತ್ತು 5 ಸೆಂ.ಮೀಗಳಷ್ಟು ಉದ್ದದ ಅಂಚುಗಳುಳ್ಳ ಒಂದು ಆಯತ ಘನವನ್ನು ಮಾಡಿದನು. ಹಾಗಾದರೆ ಒಂದು ಘನವನ್ನು ಮಾಡಲು ಇಂತಹ ಎಷ್ಟು ಆಯತ ಘನಗಳು ಬೇಕಾಗುತ್ತವೆ?

**ಪರಿಹಾರ:**

ಆಯತದ ಘನದ ಅಂಚುಗಳು: 5, 2, 5

$5 \times 5 \times 2$ ಇಲ್ಲಿ ಅಪವರ್ತನಗಳಾದ 5 ಮತ್ತು 3 ಮೂರು ಬಾರಿ ಗುಣಿಸಲ್ಪಟ್ಟಿಲ್ಲ. ಆದ್ದರಿಂದ ಇದನ್ನು ಪೂರ್ಣ ಘನ ಮಾಡಲು

$5 \times 2 \times 2 = 20$ ರಿಂದ ಗುಣಿಸಬೇಕು.

ಆದ್ದರಿಂದ ಒಂದು ಘನವನ್ನಾಗಿ ಮಾಡಲು ಪರೀಕ್ಷಿತನಿಗೆ 20 ಆಯತ ಘನಗಳು ಬೇಕು.

## ಅಭ್ಯಾಸ 1.2

**1. ಕೆಳಗಿನ ಸಂಖ್ಯೆಗಳ ಘನಮೂಲವನ್ನು ಅವಿಭಾಜ್ಯ ಅಪವರ್ತನ ವಿಧಾನದಿಂದ ಕಂಡುಹಿಡಿಯಿರಿ.**

**(i) 64 (ii) 512 (iii) 10648 (iv) 27000 (v) 15625 (vi) 13824 (vii) 110592 (viii) 46656 (ix) 175616 (x) 91125**

**ಪರಿಹಾರ:**

**(v) 64**

| 2 | 64 |
|---|---|
| 2 | 32 |
| 2 | 16 |
| 2 | 8 |
| 2 | 4 |
| 2 | 2 |
| | 1 |

$64 = \underline{2 \times 2 \times 2} \times \underline{2 \times 2 \times 2}$

$64 = 2^3 \times 2^3$

$\sqrt[3]{64} = 2 \times 2 = 4$

**(v) 512**

| 2 | 512 |
|---|---|
| 2 | 256 |
| 2 | 128 |
| 2 | 64 |
| 2 | 32 |
| 2 | 16 |
| 2 | 8 |
| 2 | 4 |
| 2 | 2 |
| | 1 |

$512 = \underline{2 \times 2 \times 2} \times \underline{2 \times 2 \times 2} \times \underline{2 \times 2 \times 2}$

$512 = 2^3 \times 2^3 \times 2^3$

$\sqrt[3]{512} = 2 \times 2 \times 2 = 8$

**(iii) 10648**

| 2 | 10648 |
|---|---|
| 2 | 5324 |
| 2 | 2662 |
| 11 | 1331 |
| 11 | 121 |
| 11 | 11 |
| | 1 |

$10648 = \underline{2 \times 2 \times 2} \times \underline{11 \times 11 \times 11}$

$10648 = 2^3 \times 11^3$

$\sqrt[3]{10648} = 2 \times 11 = 22$

**(iv) 27000**

| 2 | 27000 |
|---|---|
| 2 | 13500 |
| 2 | 6750 |
| 3 | 3375 |
| 3 | 1125 |
| 3 | 375 |
| 5 | 125 |
| 5 | 25 |
| 5 | 5 |
| | 1 |

$27000 = \underline{2 \times 2 \times 2} \times \underline{3 \times 3 \times 3} \times \underline{3 \times 3 \times 3}$

$27000 = 2^3 \times 3^3 \times 3^3$

$\sqrt[3]{27000} = 2 \times 3 \times 5 = 30$

**(v) 15625**

| 5 | 15625 |
|---|---|
| 5 | 3125 |
| 5 | 625 |
| 5 | 125 |
| 5 | 25 |
| 5 | 5 |
| | 1 |

$15625 = \underline{5 \times 5 \times 5} \times \underline{5 \times 5 \times 5}$

$15625 = 5^3 \times 5^3$

$\sqrt[3]{15625} = 5 \times 5 = 25$

**(vi) 13824**

| 2 | 13824 |
|---|---|
| 2 | 6912 |
| 2 | 3456 |
| 2 | 1728 |
| 2 | 864 |
| 2 | 432 |
| 2 | 216 |
| 2 | 108 |
| 2 | 54 |
| 3 | 27 |
| 3 | 9 |
| 3 | 3 |
| | 1 |

$13824 = \underline{2 \times 2 \times 2} \times \underline{2 \times 2 \times 2} \times \underline{2 \times 2 \times 2} \times \underline{3 \times 3 \times 3}$

$13824 = 2^3 \times 2^3 \times 2^3 \times 3^3$

$\sqrt[3]{13824} = 2 \times 2 \times 2 \times 3 = 24$

**(vii) 110592**

| 2 | 110592 |
|---|---|
| 2 | 55296 |
| 2 | 27648 |
| 2 | 13824 |
| 2 | 6912 |
| 2 | 3456 |
| 2 | 1728 |
| 2 | 864 |
| 2 | 432 |
| 2 | 216 |
| 2 | 108 |
| 2 | 54 |
| 3 | 27 |
| 3 | 9 |
| 3 | 3 |
| | 1 |

$110592 = \underline{2 \times 2 \times 2} \times \underline{2 \times 2 \times 2} \times \underline{2 \times 2 \times 2} \times \underline{2 \times 2 \times 2} \times \underline{3 \times 3 \times 3}$

$110592 = 2^3 \times 2^3 \times 2^3 \times 2^3 \times 3^3$

$\sqrt[3]{110592} = 2 \times 2 \times 2 \times 2 \times 3 = 48$

**(viii) 46656**

| 2 | 46656 |
|---|---|
| 2 | 23328 |
| 2 | 11664 |
| 2 | 5832 |
| 2 | 2916 |
| 2 | 1458 |
| 3 | 729 |
| 3 | 243 |
| 3 | 81 |
| 3 | 27 |
| 3 | 9 |
| 3 | 3 |
| | 1 |

$46656 = \underline{2 \times 2 \times 2} \times \underline{2 \times 2 \times 2} \times \underline{3 \times 3 \times 3} \times \underline{3 \times 3 \times 3}$

$46656 = 2^3 \times 2^3 \times 3^3 \times 3^3$

$\sqrt[3]{46656} = 2 \times 2 \times 3 \times 3 = 36$

**(ix) 175616**

| 2 | 175616 |
|---|---|
| 2 | 87808 |
| 2 | 43904 |
| 2 | 21952 |
| 2 | 10976 |
| 2 | 5488 |
| 2 | 2744 |
| 2 | 1372 |
| 2 | 686 |
| 7 | 343 |
| 7 | 49 |
| 7 | 7 |
| | 1 |

$175616 = \underline{2 \times 2 \times 2} \times \underline{2 \times 2 \times 2} \times \underline{2 \times 2 \times 2} \times \underline{7 \times 7 \times 7}$

$175616 = 2^3 \times 2^3 \times 2^3 \times 7^3$

$\sqrt[3]{175616} = 2 \times 2 \times 2 \times 7 = 56$

**(x) 91125**

| 3 | 91125 |
|---|---|
| 3 | 30375 |
| 3 | 10125 |
| 3 | 3375 |
| 3 | 1125 |
| 3 | 375 |
| 5 | 125 |
| 5 | 25 |
| 5 | 5 |
| | 1 |

$91125 = \underline{3 \times 3 \times 3} \times \underline{3 \times 3 \times 3} \times \underline{5 \times 5 \times 5}$

$91125 = 3^3 \times 3^3 \times 5^3$

$\sqrt[3]{91125} = 3 \times 3 \times 5 = 45$

**2. ಸರಿ ಅಥವಾ ತಪ್ಪು ಎಂದು ಹೇಳಿರಿ.**

**ಪರಿಹಾರ:**

**(i) ಒಂದು ಬೆಸ ಸಂಖ್ಯೆಯ ಘನವು ಸಮಸಂಖ್ಯೆ.**

ತಪ್ಪು – ಬೆಸ ಸಂಖ್ಯೆಯ ಘನವು ಬೆಸ ಸಂಖ್ಯೆಯಾಗಿರುತ್ತದೆ.

**(ii) ಪೂರ್ಣ ಘನವು ಎರಡು ಸೊನ್ನೆಗಳಿಂದ ಅಂತ್ಯಗೊಳ್ಳುವುದಿಲ್ಲ.**

ಸರಿ – ಪೂರ್ಣ ಘನವು ಮೂರು ಸೊನ್ನೆಗಳಿಂದ ಕೊನೆಯಾಗುತ್ತದೆ.

**(iii) ಒಂದು ಸಂಖ್ಯೆಯ ವರ್ಗವು 5 ರಿಂದ ಕೊನೆಗೊಂಡರೆ ಅದರ ಘನವು 25 ರಿಂದ ಕೊನೆಗೊಳ್ಳುತ್ತದೆ.**

ತಪ್ಪು – ಉದಾ: $15^3 = 3375$ ಇದು 25ರಿಂದ ಕೊನೆಗೊಳ್ಳುವುದಿಲ್ಲ.

**(iv) 8 ರಿಂದ ಅಂತ್ಯಗೊಳ್ಳುವ ಯಾವ ಪೂರ್ಣಘನವೂ ಇಲ್ಲ.**

ತಪ್ಪು – 2 ರ ಘನ 8 ಆಗಿದ್ದು, 8ರಿಂದ ಕೊನೆಗೊಳ್ಳುತ್ತದೆ.

**(v) ಎರಡಂಕಿಯ ಸಂಖ್ಯೆಯ ಘನವು ಮೂರಂಕಿ ಸಂಖ್ಯೆಯಾಗಿರಬಹುದು.**

ತಪ್ಪು – ಅತ್ಯಂತ ಚಿಕ್ಕ ಎರಡಂಕಿಯ ಸಂಖ್ಯೆ 10 ರ ಘನ 1000 ನಾಲ್ಕು ಅಂಕಿಗಳನ್ನು ಒಳಗೊಂಡಿದೆ

**(vi) ಎರಡಂಕಿ ಸಂಖ್ಯೆಯ ಘನದಲ್ಲಿ 7 ಅಥವಾ ಹೆಚ್ಚಿನ ಅಂಕಿಗಳಿರಬಹುದು.**

ತಪ್ಪು – ಅತ್ಯಂತ ಗರಿಷ್ಠ ಎರಡಂಕಿಯ ಸಂಖ್ಯೆ 99 ರ ಘನ = 970299 ರಲ್ಲಿ ಆರು ಅಂಕಿಗಳಿವೆ.

**(vii) ಒಂದಂಕಿ ಸಂಖ್ಯೆಯ ಘನವು ಒಂದಂಕಿ ಸಂಖ್ಯೆಯಾಗಿರಬಹುದು.**

ಸರಿ – 1 ಮತ್ತು 2 ರ ಘನಗಳು 1 ಮತ್ತು 8 ಒಂದಂಕಿಯ ಸಂಖ್ಯೆಗಳಾಗಿವೆ.

**3. 1331 ಒಂದು ಪೂರ್ಣಘನವೆಂದು ನಿಮಗೆ ತಿಳಿಸಿದೆ. ಅವಿಭಾಜ್ಯ ಅಪವರ್ತನ ಮಾಡದೆ ಅದರ ಘನಮೂಲವನ್ನು ಊಹಿಸಬಲ್ಲಿರಾ? ಇದೇ ರೀತಿ 4913, 12167, 32768 ಗಳ ಘನಮೂಲಗಳನ್ನು ಊಹಿಸಿ.**

**ಪರಿಹಾರ:**

ಕೊಟ್ಟ ಸಂಖ್ಯೆ 1331ಆಗಿದೆ.

**ಹಂತ 1:**

17576 ಇದರ ಅಂಕಿಗಳನ್ನು ಬಲತುದಿಯಿಂದ ಆರಂಭಿಸಿ ಮೂರು ಅಂಕಿಗಳ ಗುಂಪುಗಳಾಗಿ ಮಾಡಿ.

1 331

**ಹಂತ 2:**

ಮೊದಲನೆ ಗುಂಪು 331 ಇದರ ಬಿಡಿಸ್ಥಾನದ ಅಂಕಿ 1. ಆದ್ದರಿಂದ ಕೊಟ್ಟ ಸಂಖ್ಯೆಯ ಘನಮೂಲದ ಬಿಡಿ ಸ್ಥಾನದಲ್ಲಿ 1 ಬರುತ್ತದೆ.

**ಹಂತ 3:**

ಈಗ ಎರಡನೆ ಗುಂಪು 1ನ್ನು ತೆಗೆದುಕೊಂಡಾಗ,

$1^3 = 1$

ಆದ್ದರಿಂದ, $\sqrt[3]{1331} = 11$

ಕೊಟ್ಟ ಸಂಖ್ಯೆ 17576 ಆಗಿದೆ.

**4913**

**ಹಂತ 1:**

4913 ಇದರ ಅಂಕಿಗಳನ್ನು ಬಲತುದಿಯಿಂದ ಆರಂಭಿಸಿ ಮೂರು ಅಂಕಿಗಳ ಗುಂಪುಗಳಾಗಿ ಮಾಡಿ.

4 913

**ಹಂತ 2:**

ಮೊದಲನೆ ಗುಂಪು 913 ಇದರ ಬಿಡಿಸ್ಥಾನದ ಅಂಕಿ 3. ಆದ್ದರಿಂದ ಕೊಟ್ಟ ಸಂಖ್ಯೆಯ ಘನಮೂಲದ ಬಿಡಿ ಸ್ಥಾನದಲ್ಲಿ 7 ಬರುತ್ತದೆ.

**ಹಂತ 3:**

ಈಗ ಎರಡನೆ ಗುಂಪು 4ನ್ನು ತೆಗೆದುಕೊಂಡಾಗ,

$1^3\ (=1) < 4 < 2^3\ (=8)$

ಸಣ್ಣ ಸಂಖ್ಯೆ 1ನ್ನು ಬೇಕಾದ ಘನಮೂಲದ ಹತ್ತನೇ ಸ್ಥಾನದಲ್ಲಿ ತೆಗೆದುಕೊಳ್ಳುತ್ತೇವೆ.

ಆದ್ದರಿಂದ, $\sqrt[3]{4913} = 17$

**12167**

**ಹಂತ 1:**

12167 ಇದರ ಅಂಕಿಗಳನ್ನು ಬಲತುದಿಯಿಂದ ಆರಂಭಿಸಿ ಮೂರು ಅಂಕಿಗಳ ಗುಂಪುಗಳಾಗಿ ಮಾಡಿ.

12 167

**ಹಂತ 2:**

ಮೊದಲನೆ ಗುಂಪು 167 ಇದರ ಬಿಡಿಸ್ಥಾನದ ಅಂಕಿ 7. ಆದ್ದರಿಂದ ಕೊಟ್ಟ ಸಂಖ್ಯೆಯ ಘನಮೂಲದ ಬಿಡಿ ಸ್ಥಾನದಲ್ಲಿ 3 ಬರುತ್ತದೆ.

**ಹಂತ 3:**

ಈಗ ಎರಡನೆ ಗುಂಪು 12ನ್ನು ತೆಗೆದುಕೊಂಡಾಗ,

$2^3\ (=8) < 12 < 3^3\ (=27)$

ಸಣ್ಣ ಸಂಖ್ಯೆ 2ನ್ನು ಬೇಕಾದ ಘನಮೂಲದ ಹತ್ತನೇ ಸ್ಥಾನದಲ್ಲಿ ತೆಗೆದುಕೊಳ್ಳುತ್ತೇವೆ.

ಆದ್ದರಿಂದ, $\sqrt[3]{12167} = 23$

**32768**

**ಹಂತ 1:**

32768 ಇದರ ಅಂಕಿಗಳನ್ನು ಬಲತುದಿಯಿಂದ ಆರಂಭಿಸಿ ಮೂರು ಅಂಕಿಗಳ ಗುಂಪುಗಳಾಗಿ ಮಾಡಿ.

32 768

**ಹಂತ 2:**

ಮೊದಲನೆ ಗುಂಪು 768 ಇದರ ಬಿಡಿಸ್ಥಾನದ ಅಂಕಿ 8. ಆದ್ದರಿಂದ ಕೊಟ್ಟ ಸಂಖ್ಯೆಯ ಘನಮೂಲದ ಬಿಡಿ ಸ್ಥಾನದಲ್ಲಿ 2 ಬರುತ್ತದೆ.

**ಹಂತ 3:**

ಈಗ ಎರಡನೆ ಗುಂಪು 32ನ್ನು ತೆಗೆದುಕೊಂಡಾಗ,

$3^3\ (=27) < 32 < 4^3\ (=64)$

ಸಣ್ಣ ಸಂಖ್ಯೆ 3ನ್ನು ಬೇಕಾದ ಘನಮೂಲದ ಹತ್ತನೇ ಸ್ಥಾನದಲ್ಲಿ ತೆಗೆದುಕೊಳ್ಳುತ್ತೇವೆ.

ಆದ್ದರಿಂದ, $\sqrt[3]{32768} = 32$

YK

ಪರಿಷ್ಕೃತ ಪಠ್ಯ

Attractive Maths Solution

# ಗಣಿತ

# Mathematics

## ಕನ್ನಡ ಮಾಧ್ಯಮ

## ಭಾಗ–2

## ಅಧ್ಯಾಯ 2

## ಘಾತಾಂಕಗಳು ಮತ್ತು ಘಾತ ಸೂಚಿಗಳು

## Exponents and Powers

Copy rights reserved

# ಅಧ್ಯಾಯ 2

# ಘಾತಾಂಕಗಳು ಮತ್ತು ಘಾತಸೂಚಿಗಳು

**ಕಲಿಕಾಂಶಗಳು:**

- ಪೀಠಿಕೆ
- ಋಣ ಘಾತಸೂಚಿಗಳಿರುವ ಘಾತಗಳು
- ಘಾತಾಂಕಗಳ ನಿಯಮಗಳು
- ಘಾತಾಂಕವನ್ನು ಉಪಯೋಗಿಸಿ ಚಿಕ್ಕ ಸಂಖ್ಯೆಗಳನ್ನು ಸಾಮಾನ್ಯ ರೂಪದಲ್ಲಿ ವ್ಯಕ್ತಪಡಿಸುವುದು.
- ಅತಿ ದೊಡ್ಡ ಮತ್ತು ಅತಿ ಚಿಕ್ಕ ಸಂಖ್ಯೆಗಳ ಹೋಲಿಕೆ.

ಭೂಮಿಯ ದ್ರವ್ಯರಾಶಿಯು

5,970,000,000,000,000,000,000,000 ಕಿ.ಗ್ರಾಂ.

ಇಂತಹ ಸಂಖ್ಯೆಗಳನ್ನು ಅತೀ ಸಂಕ್ಷಿಪ್ತವಾಗಿ ಬರೆಯಲು ನಾವು ಘಾತಾಂಕಗಳನ್ನು ಬಳಸುತ್ತೇವೆ.

5,970,000,000,000,000,000,000,000

= $5.97 \times 10^{24}$ ಕಿ.ಗ್ರಾಂ

$10^{24}$ ಇದನ್ನು ನಾವು 10ರ ಘಾತ 24 ಎಂದು ಓದುತ್ತೇವೆ.

ಇಲ್ಲಿ 10ನ್ನು **ಆಧಾರ ಸಂಖ್ಯೆ** ಹಾಗೂ 24ನ್ನು **ಘಾತಸೂಚಿ** ಎನ್ನುವರು.

ಋಣ ಘಾತಸೂಚಿಗಳಿರುವ ಘಾತಗಳು:

ಯಾವುದೇ ಋಣ ಘಾತಸೂಚಿಯನ್ನು ನಾವು

$a^{-m} = \frac{1}{a^m}$ ಎಂದು ಬರೆಯಬಹುದು.

ಅಥವಾ $\frac{1}{a^{-m}} = a^m$ ಆಗಿಯೂ ಬರೆಯಬಹುದು.

ಉದಾಹರಣೆ: $2^{-2} = \frac{1}{2^2}$ ; $10^{-5} = \frac{1}{10^5}$

$\frac{1}{3^{-4}} = 3^4$ ; $\frac{1}{5^{-8}} = 5^8$

1425 ನ್ನು ಘಾತಾಂಕರೂಪವನ್ನು ಉಪಯೋಗಿಸಿ ಕೆಳಗಿನಂತೆ ಬರೆಯುತ್ತೇವೆ.

1425=

$1\times 10^3 + 4\times 10^2 + 2\times 10^1 + 5\times 10^0$

**[ ನೆನಪಿಡಿ: $a^0 = 1$ ]**

**1425.36 ನ್ನು ಮೇಲಿನಂತೆ ಬರೆದಾಗ,**

1425.36 =

$1\times 10^3 + 4\times 10^2 + 2\times 10^1 + 5\times 10^0 + 3\times \frac{1}{10^1} + 6\times \frac{1}{10^2}$

$= 1\times 10^3 + 4\times 10^2 + 2\times 10^1 + 5\times 10^0 + 3\times 10^{-1} + 6\times 10^{-2}$

**ಘಾತಾಂಕಗಳ ನಿಯಮಗಳು:**

ಇದೇ ರೀತಿಯಲ್ಲಿ a, b ಗಳು ಸೊನ್ನೆಯಲ್ಲದೆ ಬೇರೆ ಯಾವುದೇ ಪೂರ್ಣಾಂಕಗಳಾದಾಗ ಹಾಗೂ m ಮತ್ತು n ಗಳು ಪೂರ್ಣಾಂಕಗಳಾದಾಗ,

**(i)** $a^m \times a^n = a^{m+n}$

**(ii)** $\frac{a^m}{a^n} = a^{m-n}$

**(iii)** $(a^m)^n = a^{mn}$

**(iv)** $a^m \times b^m = (ab)^m$

**(v)** $\frac{a^m}{b^m} = \left(\frac{a}{b}\right)^m$

**(vi)** $a^0 = 1$

**ಉದಾಹರಣೆ 1: ಇವುಗಳ ಬೆಲೆಯನ್ನು ಕಂಡುಹಿಡಿಯಿರಿ.**

**(i)** $2^{-3}$ **(ii)** $\frac{1}{3^{-2}}$

**ಪರಿಹಾರ:**

(i) $2^{-3} = \frac{1}{2^3} = \frac{1}{8}$

(ii) $\frac{1}{3^{-2}} = 3^2 = 9$

**ಉದಾಹರಣೆ 2: ಸಂಕ್ಷಿಪ್ತಗೊಳಿಸಿ.**

**(i)** $(-4)^5 \times (-4)^{-10}$

**(ii)** $2^5 \div 2^{-6}$

**ಪರಿಹಾರ:**

(i) $(-4)^5 \times (-4)^{-10}$

$= (-4)^{5-10}$

$= (-4)^{-5}$

$= \frac{1}{(-4)^5}$

(ii) $2^5 \div 2^{-6}$

$= \frac{2^5}{2^{-6}} = 2^5 \times 2^6 = 2^{5+6} = 2^{11}$

4:ಕೆಳಗಿನವುಗಳನ್ನು ಸಂಕ್ಷೇಪಿಸಿ, ಉತ್ತರವನ್ನು ಘಾತಾಂಕ ರೂಪದಲ್ಲಿ ಬರೆಯಿರಿ.

(i) $(2^5 \div 2^8)^5 \times 2^{-5}$

(ii) $(-4)^{-3} \times (5)^{-3} \times (-5)^{-3}$

(iii) $\frac{1}{8} \times (3)^{-3}$

(iv) $(-3)^4 \times \left(\frac{5}{3}\right)^4$

**ಪರಿಹಾರ:**

(i) $(2^5 \div 2^8)^5 \times 2^{-5}$

$= \left(\frac{2^5}{2^8}\right)^5 \times 2^{-5}$

$= (2^{5-8})^5 \times 2^{-5}$

$= (2^{-3})^5 \times 2^{-5}$

$= 2^{-15} \times 2^{-5}$

$= 2^{-15-5} = 2^{-20} = \frac{1}{2^{20}}$

(ii) $(-4)^{-3} \times (5)^{-3} \times (-5)^{-3}$

$= [-4 \times 5 \times -5]^{-3}$

$= 100^{-3}$

$= \frac{1}{100^3}$

(iii) $\frac{1}{8} \times (3)^{-3}$

$= \left(\frac{1}{2^3}\right) \times (3)^{-3}$

$= 2^{-3} \times (3)^{-3}$

$= (2 \times 3)^{-3}$

$= 6^{-3} = \frac{1}{6^3}$

(iv) $(-3)^4 \times \left(\frac{5}{3}\right)^4$

$= \left(-3 \times \frac{5}{3}\right)^4$

$= (-5)^4$

$= (-1)^4 \times 5^4 = 5^4$

**ಉದಾಹರಣೆ 5: $(-3)^{m+1} \times (-3)^5 = (-3)^7$ ಆದಾಗ m ನ ಬೆಲೆಯನ್ನು ಕಂಡುಹಿಡಿಯಿರಿ.**

**ಪರಿಹಾರ:**

$(-3)^{m+1} \times (-3)^5 = (-3)^7$

$(-3)^{m+1+5} = (-3)^7$

$(-3)^{m+6} = (-3)^7$

$m + 6 = 7$

$m = 7 - 6$

$m = 1$

**ಉದಾಹರಣೆ 6: $\left(\frac{2}{3}\right)^{-2}$ ಇದರ ಬೆಲೆಯನ್ನು ಕಂಡುಹಿಡಿಯಿರಿ.**

**ಪರಿಹಾರ:**

$\left(\frac{2}{3}\right)^{-2} = \frac{2^{-2}}{3^{-2}}$

$= \frac{3^2}{2^2} = \frac{9}{4}$

**ಉದಾಹರಣೆ 7:**

**(i)** $\left\{\left(\frac{1}{3}\right)^{-2} - \left(\frac{1}{2}\right)^{-3}\right\} \div \left(\frac{1}{4}\right)^{-2}$

**(ii)** $\left(\frac{5}{8}\right)^{-7} \times \left(\frac{8}{5}\right)^{-5}$

**ಪರಿಹಾರ:**

**(i)** $\left\{\left(\frac{1}{3}\right)^{-2} - \left(\frac{1}{2}\right)^{-3}\right\} \div \left(\frac{1}{4}\right)^{-2}$

$= \left\{\frac{1^{-2}}{3^{-2}} - \frac{1^{-3}}{2^{-3}}\right\} \div \frac{1^{-2}}{4^{-2}}$

$= \left\{\frac{3^2}{1^2} - \frac{2^3}{1^3}\right\} \div \frac{4^2}{1^2}$

$= \{9 - 8\} \div 16$

$= 1 \div 16$

$= \frac{1}{16}$

**(ii)** $\left(\frac{5}{8}\right)^{-7} \times \left(\frac{8}{5}\right)^{-5}$

$= \frac{5^{-7}}{8^{-7}} \times \frac{8^{-5}}{5^{-5}}$

$= \frac{8^7}{5^7} \times \frac{5^5}{8^5}$

$= \frac{8^{7-5}}{5^{7-5}} = \frac{8^2}{5^2} = \frac{64}{25}$

**ಘಾತಾಂಕವನ್ನು ಉಪಯೋಗಿಸಿ ಚಿಕ್ಕ ಸಂಖ್ಯೆಗಳನ್ನು ಸಾಮಾನ್ಯ ರೂಪದಲ್ಲಿ ವ್ಯಕ್ತಪಡಿಸುವುದು**

ಕೆಂಪು ರಕ್ತ ಕಣದ ಸರಾಸರಿ ವ್ಯಾಸವು 0.000007 ಮೀ.

ಇದು ಅತೀ ಚಿಕ್ಕ ಸಂಖ್ಯೆ. ಇದನ್ನು ಘಾತಾಂಕ ರೂಪದಲ್ಲಿ ವ್ಯಕ್ತಪಡಿಸಿದಾಗ,

0.000007ಮೀ.$= 7 \times \frac{1}{10^6}$ ಮೀ.

$= 7 \times 10^{-6}$ ಮೀ.

**ಉದಾಹರಣೆ 8: ಕೆಳಗಿನ ಸಂಖ್ಯೆಗಳನ್ನು ಸಾಮಾನ್ಯ ರೂಪದಲ್ಲಿ ವ್ಯಕ್ತಪಡಿಸಿ.**

**(i) 0.000035 (ii) 4050000**

**ಪರಿಹಾರ:**

(i) $0.000035 = 3.5 \times 10^{-5}$

(ii) $4050000 = 4.05 \times 10^6$

**ಉದಾಹರಣೆ 9: ಕೆಳಗಿನ ಸಂಖ್ಯೆಗಳನ್ನು ರೂಡಿಯಲ್ಲಿನ ರೂಪದಲ್ಲಿ ಬರೆಯಿರಿ.**

**(i) $3.52 \times 10^5$ (ii) $7.54 \times 10^{-4}$ (iii) $3 \times 10^{-5}$**

**ಪರಿಹಾರ:**

(i) $3.52 \times 10^5 = 3.52 \times 100000 = 352000$

(ii) $7.54 \times 10^{-4} = \frac{7.54}{10^4} = \frac{7.54}{10000} = 0.000754$

(iii) $3 \times 10^{-5} = \frac{3}{10^5} = \frac{3}{100000} = 0.00003$

## ಅಭ್ಯಾಸ 2.1

**1. ಇವುಗಳ ಬೆಲೆ ಕಂಡುಹಿಡಿಯಿರಿ.**

**(i) $3^{-2}$ (ii) $(-4)^{-2}$ (iii) $\left(\frac{1}{2}\right)^{-5}$**

**ಪರಿಹಾರ:**

**(i) $3^{-2}$**

$= \frac{1}{3^2} = \frac{1}{9}$

**(ii) $(-4)^{-2}$**

$= \frac{1}{(-4)^2} = \frac{1}{16}$

**(iii) $\left(\frac{1}{2}\right)^{-5}$**

$= \frac{1^{-5}}{2^{-5}} = \frac{2^5}{1^5} = \frac{32}{1} = 32$

**2. ಕೆಳಗಿನವುಗಳನ್ನು ಸಂಕ್ಷಿಪ್ತಗೊಳಿಸಿ ಉತ್ತರವನ್ನು ಧನಾತ್ಮಕ ಘಾತ ಸೂಚಿ ಇರುವಂತೆ ಘಾತಾಂಕರೂಪದಲ್ಲಿ ವ್ಯಕ್ತಪಡಿಸಿ.**

**(i) $(-4)^5 \div (-4)^8$ (ii) $\left(\frac{1}{2^3}\right)^2$**

**(iii) $(-3)^4 \times \left(\frac{5}{3}\right)^4$**

**(iv) $(3^{-7} \div 3^{-10}) \times 3^{-5}$ (v) $2^{-3} \times (-7)^{-3}$**

**ಪರಿಹಾರ:**

(i) $(-4)^5 \div (-4)^8$

$= \frac{(-4)^5}{(-4)^8} = \frac{1}{(-4)^{8-5}} = \frac{1}{(-4)^3}$

(ii) $\left(\frac{1}{2^3}\right)^2$

$= \frac{1^2}{(2^3)^2} = \frac{1}{2^{3\times2}} = \frac{1}{2^6}$

(iii) $(-3)^4 \times \left(\frac{5}{3}\right)^4$

$= (-3)^4 \times \frac{5^4}{3^4} = \frac{(-3\times5)^4}{3^4}$

$= \frac{(-15)^4}{3^4} = \left(\frac{-15}{3}\right)^4 = -5^4 = (-1)^4 \times 5^4$

$= 5^4$

(iv) $(3^{-7} \div 3^{-10}) \times 3^{-5}$

$= \left(\frac{1}{3^7} \div \frac{1}{3^{10}}\right) \times 3^{-5}$

$= \left(\frac{1}{3^7} \times \frac{3^{10}}{1}\right) \times 3^{-5}$

$= \left(\frac{3^{10}}{3^7}\right) \times 3^{-5}$

$= 3^{10-7-5} = 3^{10-12} = 3^{-2} = \frac{1}{3^2}$

(v) $2^{-3} \times (-7)^{-3}$

$= (2 \times -7)^{-3}$

$= (-14)^{-3} = \frac{1}{(-14)^3}$

**3. ಇವುಗಳ ಬೆಲೆಯನ್ನು ಕಂಡುಹಿಡಿಯಿರಿ.**

**(i) $(30 + 4^{-1}) \times 2^2$ (ii) $(2^{-1} \times 4^{-1}) \div 2^{-2}$**

**(iii) $\left(\frac{1}{2}\right)^{-2} + \left(\frac{1}{3}\right)^{-2} + \left(\frac{1}{4}\right)^{-2}$**

**(iv) (iv) $(3^{-1} + 4^{-1} + 5^{-1})^0$**

**(v) $\left\{\left(\frac{2}{3}\right)^{-2}\right\}^2$**

**ಪರಿಹಾರ:**

(i) $(3^0 + 4^{-1}) \times 2^2$

$= \left(1 + \frac{1}{4}\right) \times 4$

$= \frac{4+1}{4} \times 4 = 5$

(ii) $(2^{-1} \times 4^{-1}) \div 2^{-2}$

$= \left(\frac{1}{2} \times \frac{1}{4}\right) \div \frac{1}{2^2}$

$= \left(\frac{1}{8}\right) \div \frac{1}{2^2}$

$= \left(\frac{1}{2^3}\right) \times \frac{2^2}{1} = \frac{2^2}{2^3} = \frac{1}{2^{3-1}} = \frac{1}{2}$

(iii) $\left(\frac{1}{2}\right)^{-2} + \left(\frac{1}{3}\right)^{-2} + \left(\frac{1}{4}\right)^{-2}$

$= \frac{1^{-2}}{2^{-2}} + \frac{1^{-2}}{3^{-2}} + \frac{1^{-2}}{4^{-2}}$

$= \frac{1}{2^{-2}} + \frac{1}{3^{-2}} + \frac{1}{4^{-2}}$

$= 2^2 + 3^2 + 4^2$

$= 4 + 9 + 16 = 29$

(iv) $(3^{-1} + 4^{-1} + 5^{-1})^0$

$= \left(\frac{1}{3} + \frac{1}{4} + \frac{1}{5}\right)^0$

$= \left(\frac{20+15+12}{60}\right)^0$

$= \left(\frac{47}{60}\right)^0 = 1$

(v) $\left\{\left(\frac{2}{3}\right)^{-2}\right\}^2$

$= \left(\frac{2}{3}\right)^{-4} = \frac{2^{-4}}{3^{-4}} = \frac{3^4}{2^4} = \frac{81}{16}$

**4. ಇವುಗಳ ಬೆಲೆ ಏನು?**

**(i) $\frac{8^{-1}\times5^3}{2^{-4}}$ (ii) $(5^{-1} \times 2^{-1}) \times 6^{-1}$**

**ಪರಿಹಾರ:**

(i) $\frac{8^{-1}\times5^3}{2^{-4}}$

$= \frac{2^4\times5^3}{8^1}$

$= \frac{2^4\times5^3}{2^3} = 2^4 \times 2^{-3} \times 5^3$

$= 2^{4-3} \times 5^3$

$= 2^1 \times 5^3 = 2 \times 125 = 250$

(ii) $(5^{-1} \times 2^{-1}) \times 6^{-1}$

$= \left(\frac{1}{5} \times \frac{1}{2}\right) \times \frac{1}{6}$

$= \left(\frac{1}{10}\right) \times \frac{1}{6} = \frac{1}{60}$

**5. $5^m \div 5^{-3} = 5^5$ ಆದಾಗ m ನ ಬೆಲೆಯನ್ನು ಕಂಡುಹಿಡಿಯಿರಿ.**

**ಪರಿಹಾರ:**

$5^m \div 5^{-3} = 5^5$

$5^m \div \frac{1}{5^3} = 5^5$

$5^m \times 5^3 = 5^5$

$5^{m+3} = 5^5$

m + 3 = 5

m = 5-3

m = 2

**6. ಇವುಗಳ ಬೆಲೆಯನ್ನು ಕಂಡುಹಿಡಿಯಿರಿ.**

**(i)** $\left\{\left(\frac{1}{3}\right)^{-1} - \left(\frac{1}{4}\right)^{-1}\right\}^{-1}$ **(ii)** $\left(\frac{5}{8}\right)^{-7} \times \left(\frac{8}{5}\right)^{-4}$

**ಪರಿಹಾರ:**

(i) $\left\{\left(\frac{1}{3}\right)^{-1} - \left(\frac{1}{4}\right)^{-1}\right\}^{-1}$

$\left\{\left(\frac{3}{1}\right)^{1} - \left(\frac{4}{1}\right)^{1}\right\}^{-1}$

$= \left\{\frac{3}{1} - \frac{4}{1}\right\}^{-1}$

$= \{3 - 4\}^{-1}$

$= \{-1\}^{-1}$

= - 1

(ii) $\left(\frac{5}{8}\right)^{-7} \times \left(\frac{8}{5}\right)^{-4}$

$= = \frac{5^{-7}}{8^{-7}} \times \frac{8^{-4}}{5^{-4}}$

$= \frac{8^7}{5^7} \times \frac{5^4}{8^4}$

**7. ಸುಲಭಿಸಿ:**

**(i)** $\frac{25 \times t^{-4}}{5^{-3} \times 10 \times t^{-8}}$ **(ii) (i)** $\frac{3^{-5} \times 10^{-5} \times 125}{5^{-7} \times 6^{-5}}$

**ಪರಿಹಾರ:**

(i) $\frac{25 \times t^{-4}}{5^{-3} \times 10 \times t^{-8}}$

$= \frac{5^2 \times t^{-4}}{5^{-3} \times 5 \times 2 \times t^{-8}}$

$= \frac{5^2 \times t^{-4+8}}{5^{-2} \times 2}$

$= \frac{5^{2+2} \times t^4}{2}$

$= \frac{5^4 \times t^4}{2} = \frac{625t^4}{2}$

(ii) $\frac{3^{-5} \times 10^{-5} \times 125}{5^{-7} \times 6^{-5}}$

$= \frac{3^{-5} \times 2^{-5} \times 5^{-5} \times 5^3}{5^{-7} \times 3^{-5} \times 2^{-5}}$

$= 3^{-5+5} \times 2^{-5+5} \times 5^{-5+7+3}$

$= 3^0 \times 2^0 \times 5^5$

$= 1 \times 1 \times 5^5$

= 3125

## ಅಭ್ಯಾಸ 2.2

**1. ಕೆಳಗಿನವುಗಳನ್ನು ಘಾತಾಂಕರೂಪದಲ್ಲಿ ವ್ಯಕ್ತಪಡಿಸಿ.**

**(i) 0.0000000000085**

**(ii) 0.00000000000942**

**(iii) 6020000000000000**

**(iv) 0.00000000837**

**(v) 31860000000**

**ಪರಿಹಾರ:**

(i) 0.0000000000085

$= 8.5 \times 10^{-12}$

(ii) 0.00000000000942

$= 9.42 \times 10^{-12}$

(iii) 6020000000000000

$= 6.02 \times 10^{15}$

(iv) 0.00000000837

$= 8.37 \times 10^{-9}$

(v) 31860000000

$= 3.186 \times 10^{10}$

**2. ಕೆಳಗಿನವುಗಳನ್ನು ದಶಮಾಂಶ ರೂಪದಲ್ಲಿ ವ್ಯಕ್ತಪಡಿಸಿ.**

**(i) $3.02 \times 10^{-6}$ (ii) $4.5 \times 10^4$ (iii) $3 \times 10^{-8}$ (iv) $1.0001 \times 10^9$ (v) $5.8 \times 10^{12}$ (vi) $3.61492 \times 10^6$**

**ಪರಿಹಾರ:**

(i) $3.02 \times 10^{-6} = 0.00000302$

(ii) $4.5 \times 10^4 = 45000$

(iii) $3 \times 10^{-8} = 0.00000003$

(iv) $1.0001 \times 10^9 = 1000100000$

(v) $5.8 \times 10^{12} = 5800000000000$

(vi) $3.61492 \times 10^6 = 3614920$

**3. ಈ ಕೆಳಗಿನ ಹೇಳಿಕೆಗಳಲ್ಲಿ ಕಂಡುಬರುವ ಸಂಖ್ಯೆಗಳನ್ನು ಸಾಮಾನ್ಯರೂಪದಲ್ಲಿ ಬರೆಯಿರಿ:**

**(i) ಒಂದು ಮೈಕ್ರಾನ್ $\frac{1}{1000000}$ ಮೀ. ಗೆ ಸಮವಾಗಿದೆ.**

**(ii) ಒಂದು ಎಲೆಕ್ಟ್ರಾನ್‌ನ ವಿದ್ಯುತ್ ಅವೇಶವು 0.000,000,000,000,000,000,16 ಕೂಲಂಬ್.**

**(iii) ಒಂದು ಬ್ಯಾಕ್ಟೀರಿಯಾದ ಗಾತ್ರವು 0.0000005 ಮೀ.ಆಗಿದೆ.**

**(iv) ಒಂದು ಸಸ್ಯ ಜೀವ ಕೋಶದ ಗಾತ್ರವು 0.00001275 ಮೀ.ಆಗಿದೆ.**

**(v) ಒಂದು ಕಾಗದ ದಪ್ಪವು 0.07 ಮೀ. ಮೀ. ಆಗಿದೆ.**

**ಪರಿಹಾರ:**

(i) ಒಂದು ಮೈಕ್ರಾನ್ $\frac{1}{1000000}$ ಮೀ. ಗೆ ಸಮವಾಗಿದೆ.

= $\frac{1}{10^6}$ $= 1 \times 10^{-6}$ ಮೀ

(ii) ಒಂದು ಎಲೆಕ್ಟ್ರಾನ್‌ನ ವಿದ್ಯುತ್ ಅವೇಶವು 0.000,000,000,000,000,000,16 ಕೂಲಂಬ್.

= $1.6 \times 10^{-19}$ ಕೂಲಂಬ್

(iii) ಒಂದು ಬ್ಯಾಕ್ಟೀರೀಯಾದ ಗಾತ್ರವು 0.0000005 ಮೀ.ಆಗಿದೆ.

= $5 \times 10^{-7}$ ಮೀ.

(iv) ಒಂದು ಸಸ್ಯ ಜೀವ ಕೋಶದ ಗಾತ್ರವು 0.00001275 ಮೀ.ಆಗಿದೆ.

= $1.275 \times 10^{-5}$ ಮೀ

(v) ಒಂದು ಕಾಗದ ದಪ್ಪವು 0.07 ಮೀ. ಮೀ. ಆಗಿದೆ.

= $7 \times 10^{-2}$ ಮಿ.ಮೀ.

**4. ಒಂದು ಕಂತೆಯಲ್ಲಿ ಪ್ರತಿಯೊಂದು 20ಮೀ.ಮೀ ದಪ್ಪವುಳ್ಳ 5 ಪುಸ್ತಕಗಳು ಮತ್ತು ಪ್ರತಿಯೊಂದು 0.016ಮೀಮೀ. ದಪ್ಪವುಳ್ಳ 5 ಹಾಳೆಗಳಿವೆ. ಕಂತೆಯ ಒಟ್ಟು ದಪ್ಪ ಎಷ್ಟು?**

**ಪರಿಹಾರ:**

ಒಂದು ಪುಸ್ತಕದ ದಪ್ಪ = 20ಮಿ.ಮೀ.

5 ಪುಸ್ತಕಗಳ ದಪ್ಪ = $20 \times 5 = 100$ ಮಿ.ಮೀ.

ಒಂದು ಹಾಳೆಯ ದಪ್ಪ = 0.016ಮಿ.ಮೀ.

5 ಹಾಳೆಗಳ ದಪ್ಪ = $0.016 \times 5 = 0.08$ಮಿ.ಮೀ.

ಆದ್ದರಿಂದ ಕಂತೆಯ ಒಟ್ಟು ದಪ್ಪ

= $100 + 0.08$ ಮಿ.ಮೀ

100.08ಮಿ.ಮೀ. = $1.0008 \times 10^2$ ಮಿ.ಮೀ.

YK

ಪರಿಷ್ಕೃತ ಪಠ್ಯ

# ಗಣಿತ

# Mathematics

## ಕನ್ನಡ ಮಾಧ್ಯಮ

## ಭಾಗ–2

## ಅಧ್ಯಾಯ 3

## ದತ್ತಾಂಶಗಳ ನಿರ್ವಹಣೆ

## Data Handling

Copy rights reserved

Attractive Maths Solution

ಅಧ್ಯಾಯ 3

# ದತ್ತಾಂಶಗಳ ನಿರ್ವಹಣೆ

**ಕಲಿಕಾಂಶಗಳು:**

- ಮಾಹಿತಿಯನ್ನು ಪಡೆಯುವುದು
- ದತ್ತಾಂಶಗಳ ವ್ಯವಸ್ಥೆ
- ದತ್ತಾಂಶಗಳನ್ನು ಗುಂಪುಗೂಡಿಸುವುದು
- ವಿಭಿನ್ನ ರೀತಿಯ ಸ್ತಂಭಗಳು
- ವೃತ್ತಾಕಾರದ ನಕ್ಷೆ ಅಥವಾ ಪೈ ನಕ್ಷೆ
- ಪೈ ನಕ್ಷೆಗಳನ್ನು ಬರೆಯುವುದು
- ಅದೃಷ್ಟ ಮತ್ತು ಸಂಭವನೀಯತೆ
- ಫಲಿತಾಂಶವನ್ನು ಪಡೆಯುವುದು
- ಸಮಾನ ಸಾಧ್ಯತೆಯ ಫಲಿತಾಂಶಗಳು
- ಅದೃಷ್ಟವನ್ನು ಸಂಭವನೀಯತೆಗೆ ತಾಳೆ ಹಾಕುವುದು
- ಘಟನೆಗಳಲ್ಲಿನ ಫಲಿತಾಂಶಗಳು
- ನಿಜ ಜೀವನಕ್ಕೆ ಸಂಬಂಧಪಟ್ಟ ಅದೃಷ್ಟ ಮತ್ತು ಸಂಭವನೀಯತೆ

ದೈನಂದಿನ ಜೀವನದಲ್ಲಿ ಈ ಕೆಳಗಿನ ರೀತಿಯ ಮಾಹಿತಿಗಳು ಕಂಡುಬರುತ್ತಿರುತ್ತವೆ.

(a) ಒಬ್ಬ ಬ್ಯಾಟ್ಸ್‌ಮನ್ ಕಳೆದ ಹತ್ತು ಟೆಸ್ಟ್ ಪಂದ್ಯಗಳಲ್ಲಿ ಹೊಡೆದ ರನ್ನುಗಳು

(b) ಒಬ್ಬ ಬೌಲರ್ ಕಳೆದ ಹತ್ತು ಏಕ ದಿನ ಪಂದ್ಯಗಳಲ್ಲಿ ಪಡೆದ ವಿಕೆಟ್ಟುಗಳು

(c) ಒಂದು ತರಗತಿಯ ವಿದ್ಯಾರ್ಥಿಗಳು ಗಣಿತ ಪರೀಕ್ಷೆಯಲ್ಲಿ ಪಡೆದ ಅಂಕಗಳು

ಈ ರೀತಿ ಪಡೆಯುವ ಮಾಹಿತಿಗೆ ದತ್ತಾಂಶ ಎಂದು ಹೆಸರು.

ಕೆಲವೊಮ್ಮೆ, ದತ್ತಾಂಶಗಳನ್ನು ವಿಶದಪಡಿಸಲು ಅವುಗಳನ್ನು ನಕ್ಷೆಯ ರೂಪದಲ್ಲಿ ನಿರೂಪಿಸಲಾಗುತ್ತದೆ.

**1. ಚಿತ್ರ ನಕ್ಷೆ:**

| ಒಂದು ನಗರದಲ್ಲಿ ಮೂರು ತಿಂಗಳಲ್ಲಿ ಮಾರಾಟವಾದ ಕಾರುಗಳ ಸಂಖ್ಯೆ | | |
|---|---|---|
|  = 100 ಕಾರುಗಳು | | |
| **ಜೂನ್** |  | **200** |
| **ಜುಲಾಯಿ** |  | **300** |
| **ಅಗೋಸ್ತು** |  | **150** |

ಚಿಹ್ನೆಗಳನ್ನು ಬಳಸಿ ದತ್ತಾಂಶಗಳ ಚಿತ್ರಣವನ್ನು ನೀಡುವುದು.

**2. ಸ್ತಂಭ ನಕ್ಷೆ:**




ಸಮಾನ ಅಗಲ, ಆದರೆ ದತ್ತಾಂಶಗಳಿಗೆ ಅನುಗುಣವಾದ ಎತ್ತರ ಹೊಂದಿರುವ ಕಂಬಗಳ ಮೂಲಕ ಮಾಹಿತಿಯ ಚಿತ್ರಣ.

**2. ಜೋಡಿ ಸ್ತಂಭ ನಕ್ಷೆ:**




ಎರಡು ದತ್ತಾಂಶ ಗಣಗಳನ್ನು ಒಟ್ಟಿಗೆ ತೋರಿಸುವ ಸ್ತಂಭ ನಕ್ಷೆ ದತ್ತಾಂಶಗಳನ್ನು ಹೋಲಿಸಲು ಇದು ಉಪಯುಕ್ತ.

**ದತ್ತಾಂಶಗಳ ವ್ಯವಸ್ಥೆ**

ಒಂದು ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಕೋಷ್ಟಕದಲ್ಲಿ ತಾಳೆಗುರುತು ಹಾಕಿ ಗುರುತಿಸುವುದನ್ನು ಆವರ್ತ ವಿತರಣಾ ಪಟ್ಟಿ ಎನ್ನುವರು. ಒಂದು ವಿಷಯದ ಎಷ್ಟು ಬಾರಿ ಪುನರಾವರ್ತನೆಗೊಂಡಿದೆ ಎಂಬುವುದನ್ನು ' ಅವರ್ತನ' ಎನ್ನುವರು.

**ದತ್ತಾಂಶಗಳನ್ನು ಗುಂಪುಗೂಡಿಸುವುದು.**

ಒಂದು ತರಗತಿಯ 60 ವಿದ್ಯಾರ್ಥಿಗಳು ಗಣಿತದಲ್ಲಿ 50 ಅಂಕಕ್ಕೆ ಪಡೆದ ಅಂಕಗಳು ಈ ಕೆಳಗಿನಂತಿವೆ.

21, 10, 30, 22, 33, 5, 37, 12, 25, 42, 15, 39, 26, 32, 18, 27, 28, 19, 29, 35, 31, 24, 36, 18, 20, 38, 22, 44, 16, 24, 10, 27, 39,

28, 49, 29, 32, 23, 31, 21, 34, 22, 23, 36, 24, 36, 33, 47, 48, 49, 39, 20, 7, 16, 36, 45, 47, 30, 22, 17.

ಈ ದತ್ತಾಂಶಗಳನ್ನು ಪ್ರತಿ ಅಂಕಗಳಿಗೆ ತಾಳೆಗುರುತಿನೊಂದಿಗೆ ಆವರ್ತ ವಿತರಣಾ ಪಟ್ಟಿ ತಯಾರಿಸಿದರೆ ಪಟ್ಟಿ ತೀರ ಉದ್ದವಾಗುತ್ತದೆ. ಇದನ್ನು ಸರಳಗೊಳಿಸಲು ಈ ಕೆಳಗಿನಂತೆ ಪ್ರತಿನಿಧಿಸುತ್ತಾರೆ.

| ಗುಂಪು | ತಾಳೆಗುರುತು | ಆವರ್ತನ |
|---|---|---|
| 0 – 10 | \|\| | 2 |
| 10 – 20 | 𝍸 𝍸 | 10 |
| 20 – 30 | 𝍸𝍸𝍸𝍸 \| | 21 |
| 30 – 40 | 𝍸𝍸𝍸 \|\|\|\| | 19 |
| 40 – 50 | 𝍸 \|\|\| | 8 |
| ಒಟ್ಟು | | 60 |

ಮೇಲಿನ ವಿತರಣೆಗೆ ಗುಂಪುಗೂಡಿಸಿದ ಆವರ್ತನ ವಿತರಣೆ ಎನ್ನಲಾಗುತ್ತದೆ.

0–10, 10–20, 20–30 ಮೊದಲಾದ ಪ್ರತಿಗುಂಪಿಗೆ **ವರ್ಗಾಂತರ** ಎನ್ನುತ್ತಾರೆ. ಇಲ್ಲಿ 20 ಎಂಬ ದತ್ತಾಂಶ 10 – 20 ಅಥವಾ 20 – 30 ಈ ಎರಡು ಗುಂಪುಗಳಲ್ಲಿ ಮೇಲಿನ ಗುಂಪಿಗೆ (ವರ್ಗ) ಸೇರಿಬೇಕು.

ಯಾವುದೇ ಒಂದು ವರ್ಗಾಂತರದಲ್ಲಿ ಎರಡು ಮಿತಿಗಳಿವೆ. ಅವುಗಳೆಂದರೆ **ಕೆಳಮಿತಿ** ಮತ್ತು **ಮೇಲ್ಮಿತಿ.**

ಉದಾಹರಣೆ: 10 – 20 ರಲ್ಲಿ 10 ಕೆಳಮಿತಿ ಮತ್ತು 20 ಮೇಲ್ಮಿತಿಯಾಗಿದೆ.

ವರ್ಗಾಂತರದ ಅಂತರವನ್ನು ವರ್ಗಾಂತರದ ಅಗಲ ಅಥವಾ ಪ್ರಮಾಣ ಎನ್ನುವರು. 10 – 20 ರಲ್ಲಿ ವರ್ಗಾಂತರದ ಅಗಲ 10 ಆಗಿದೆ ಅಲ್ಲದೆ ಮೇಲಿನ ಪಟ್ಟಿಯಲ್ಲಿ ಎಲ್ಲಾ ವರ್ಗಾಂತರದ ಅಗಲಗಳು ಸಮವಾಗಿವೆ.

**ವಿಭಿನ್ನ ರೀತಿಯ ಸ್ತಂಭಗಳು**

**ಊತಕ ನಕ್ಷೆ (Histogram):**

ವರ್ಗಾಂತರಗಳನ್ನು ಅಡ್ಡ ಅಕ್ಷದಲ್ಲಿ ಹಾಗೂ ವರ್ಗಾಂತರದ ಆವರ್ತನವನ್ನು ಲಂಬ ಅಕ್ಷದ ಮೇಲೆ ಗುರುತಿಸಲಾಗುತ್ತದೆ. ಅಲ್ಲದೆ, ಒಂದು ವರ್ಗಕ್ಕೂ ಮುಂದಿನದಕ್ಕೂ ನಡುವೆ ಅಂತರವಿಲ್ಲದಿರುವುದರಿಂದ ಸ್ತಂಭಗಳ ನಡುವೆಯೂ ಅಂತರವಿರುವುದಿಲ್ಲ.

**ವೃತ್ತಾಕಾರದ ನಕ್ಷೆ ಅಥವಾ ಪೈ ನಕ್ಷೆ**

ದತ್ತಾಂಶಗಳನ್ನು ವೃತ್ತಗಳಲ್ಲಿ ಪ್ರತಿನಿಧಿಸುವ ನಕ್ಷೆಯನ್ನು ವೃತ್ತಾಕಾರದ ನಕ್ಷೆ ಅಥವಾ ಪೈ ನಕ್ಷೆ ಎನ್ನುವರು.

**ಪೈ ನಕ್ಷೆಗಳನ್ನು ಬರೆಯುವುದು**

**ಉದಾಹರಣೆ 1:** ಬೇರೆ ಬೇರೆ ಬಾಬತ್ತುಗಳಿಗೆ ಒಂದು ಕುಟುಂಬದ ಮಾಸಿಕ ಖರ್ಚು ಮತ್ತು ಉಳಿತಾಯಗಳನ್ನು ಚಿತ್ರ 3.8 ರಲ್ಲಿರುವ ಪೈ ಚಾರ್ಟ್ ತೋರಿಸುತ್ತದೆ.

**(i) ಯಾವ ಬಾಬತ್ತಿಗೆ ಖರ್ಚು ಅತಿ ಹೆಚ್ಚು?**

**(ii) ಯಾವ ಬಾಬತ್ತಿನ ಮೇಲಿನ ಖರ್ಚುಮಾಸಿಕ ಉಳಿತಾಯಕ್ಕೆ ಸಮ?**

**(iii) ಮಾಸಿಕ ಉಳಿತಾಯ 3000 ರೂಪಾಯಿ ಆಗಿದ್ದರೆ, ಬಟ್ಟೆಗಳ ಮೇಲಿನ ಖರ್ಚೆಷ್ಟು?**

**ಪರಿಹಾರ:**




(i) ಆಹಾರದ ಮೇಲೆ ಅತಿ ಹೆಚ್ಚು ಖರ್ಚು

(ii) ಮಕ್ಕಳ ವಿಧ್ಯಾಭ್ಯಾಸದ ಖರ್ಚು (15%) ಮಾಸಿಕ ಉಳಿತಾಯಕ್ಕೆ ಸಮ.

(iii) 15% ಪ್ರತಿನಿಧಿಸುವುದು ರೂ. 3000 ಆದ್ದರಿಂದ 10% ಪ್ರತಿನಿಧಿಸುವುದು

$\frac{3000}{15} \times 10 = 2000$ರೂ

**ಉದಾಹರಣೆ 2:** ಒಂದು ನಿರ್ದಿಷ್ಟ ದಿನದಂದು ಒಂದು ಬೇಕರಿಯ ವಿವಿಧ ಖಾದ್ಯಗಳ ಮಾರಾಟವನ್ನು (ರೂಪಾಯಿಗಳಲ್ಲಿ) ಕೆಳಗೆ ಕಾಣಿಸಿದೆ. ಈ ಮಾಹಿತಿಗೆ ಪೈ ನಕ್ಷೆಯನ್ನು ಎಳೆಯಿರಿ.

| ಖಾದ್ಯ | ರೂ |
|---|---|
| ಸಾಧಾರಣ ಬ್ರೆಡ್ | 320 |
| ಫ್ರೂಟ್ ಬ್ರೆಡ್ | 80 |
| ಕೇಕ್ ಮತ್ತು ಪಫ್‌ಗಳು | 160 |
| ಬಿಸ್ಕತ್ತುಗಳು | 120 |
| ಇತರೆ | 40 |
| ಒಟ್ಟು | 720 |

**ಪರಿಹಾರ:**

**1ರೂಗೆ ಸಮವಾಗಿರುವ ತ್ರಿಜ್ಯಾಂತರ ಖಂಡದ ಕೋನ**

$= \frac{360}{720} = \frac{1}{2} = 0.5^0$

| ಖಾದ್ಯ | ರೂ | ಕೇಂದ್ರೀಯ ಕೋನ |
|---|---|---|
| ಸಾಧಾರಣ ಬ್ರೆಡ್ | 320 | $320\times0.5 = 160^0$ |
| ಫ್ರೂಟ್ ಬ್ರೆಡ್ | 80 | $80\times0.5 = 40^0$ |
| ಕೇಕ್ ಮತ್ತು ಪಫ್‌ಗಳು | 160 | $160\times0.5 = 80^0$ |
| ಬಿಸ್ಕತ್ತುಗಳು | 120 | $120\times0.5 = 60^0$ |
| ಇತರೆ | 40 | $40\times0.5 = 20^0$ |
| ಒಟ್ಟು | 720 | $360^0$ |




**ಸಂಭವನೀಯತೆ**

ಯಾದೃಚ್ಛಿಕ ಪ್ರಯೋಗ: ಒಂದು ನಾಣ್ಯವನ್ನು ಮೇಲಕ್ಕೆ ಚಿಮ್ಮಿದಾಗ ಶಿರ ಅಥವಾ ಪುಚ್ಛ ಮೇಲಕ್ಕೆ ಬರಬಹುದು. ಆದರೆ ಇದನ್ನು ಮೊದಲೇ ಊಹಿಸಲು ಸಾಧ್ಯವಿಲ್ಲ. ಇದೇ ರೀತಿ ಮುಖಗಳ ಮೇಲೆ 1 ರಿಂದ 6 ರವರೆಗಿನ ಸಂಖ್ಯೆಗಳನ್ನು ಬರೆದಿರುವ ದಾಳವನ್ನು ಎಸೆದಾಗ ಮೇಲಕ್ಕೆ ಬರುವ ಸಂಖ್ಯೆ ಯಾವುದೆಂದು ಮೊದಲೇ ಹೇಳಲು ಸಾಧ್ಯವಿಲ್ಲ. ಇಂತಹ ಪ್ರಯೋಗಗಳನ್ನು **ಯಾದೃಚ್ಛಿಕ ಪ್ರಯೋಗಗಳು** ಎನ್ನುವರು.

ನಾಣ್ಯವನ್ನು ಮೇಲಕ್ಕೆ ಚಿಮ್ಮಿದಾಗ ಎರಡು ಸಾಧ್ಯತೆಗಳಿವೆ. ಮೇಲಕ್ಕೆ ಬೀಳುವ ಮುಖ ಶಿರ ಇಲ್ಲವೇ ಪುಚ್ಛ ಆಗಿರಬಹುದು.

ಆದ್ದರಿಂದ ಶಿರ ಮೇಲಕ್ಕೆ ಬರುವ ಸಂಭವನೀಯತೆ $= \frac{1}{2}$

ಹಾಗೆಯೇ ಪುಚ್ಛ ಮೇಲಕ್ಕೆ ಬರುವ ಸಂಭವನೀಯತೆ $= \frac{1}{2}$

ಆರು ಮುಖಗಳ ಮೇಲೆ 1,2,3,4,5,6 ಎಂದು ಬರೆದಿರುವ ದಾಳದ ಉದಾಹರಣೆಯಲ್ಲಿ ಸಾಧ್ಯವಿರುವ ಫಲಿತಾಂಶಗಳೆಂದರೆ: 1,2,3,4,5,6. ಅಂದರೆ ಆರು ಸಾಮಾನ ಸಾಧ್ಯತೆಯ ಫಲಿತಾಂಶಗಳಿವೆ.

ಇಲ್ಲಿ 1ರಿಂದ 6ರ ವರೆಗಿನ ಯಾವುದೇ ಒಂದು ಸಂಖ್ಯೆ ಮೇಲಕ್ಕೆ ಬರುವ ಸಂಭವನೀಯತೆ $= \frac{1}{6}$

7 ಮೇಲಕ್ಕೆ ಬರುವ ಸಂಭವನೀಯತೆ = 0. ಏಕೆಂದರೆ 7 ಸಂಖ್ಯೆ ದಾಳದಲ್ಲಿ ಬರೆದಿಲ್ಲ.

**ಉದಾಹರಣೆ 3: ಒಂದು ಚೀಲದಲ್ಲಿ 4 ಕೆಂಪು ಚೆಂಡುಗಳು ಮತ್ತು 2 ಹಳದಿ ಚೆಂಡುಗಳಿವೆ. ಬಣ್ಣ ಬಿಟ್ಟು ಬೇರೆ ಎಲ್ಲಾ ರೀತಿಗಳಲ್ಲಿ ಈ ಚೆಂಡುಗಳು ಏಕರೂಪದ್ದಾಗಿವೆ, ನೀವು ಕಣ್ಣು ಮುಚ್ಚಿಕೊಂಡು ಒಂದು ಚೆಂಡನ್ನು ಹೊರತೆಗೆದರೆ ಕೆಂಪು ಚೆಂಡನ್ನು ಪಡೆಯುವ ಸಂಭವನೀಯತೆ ಎಷ್ಟು? ಹಳದಿ ಚೆಂಡನ್ನು ಪಡೆಯುವುದಕ್ಕಿಂತ ಹೆಚ್ಚೇ ಕಡಿಮೆಯೇ?**

**ಪರಿಹಾರ:**

ಈ ಘಟನೆಗೆ ಒಟ್ಟು ಸಾಧ್ಯವಿರುವುದು 4 + 2 = 6 ಫಲಿತಾಂಶಗಳು. ಇವುಗಳಲ್ಲಿ 4 ಫಲಿತಾಂಶಗಳಲ್ಲಿ ಕೆಂಪು ಚೆಂಡನ್ನು ಪಡೆಯಬಹುದು. ಹಾಗೆಯೇ 2 ಫಲಿತಾಂಶಗಳಲ್ಲಿ ಹಳದಿ ಚೆಂಡನ್ನು ಪಡೆಯಬಹುದು. ಆದ್ದರಿಂದ

ಕೆಂಪು ಚೆಂಡು ಪಡೆಯುವ ಸಂಭವನೀಯತೆ$= \frac{4}{6} = \frac{2}{3}$

ಹಳದಿ ಚೆಂಡು ಪಡೆಯುವ ಸಂಭವನೀಯತೆ$= \frac{2}{6} = \frac{1}{3}$

ಕೆಂಪು ಚೆಂಡನ್ನು ಪಡೆಯುವ ಸಾಧ್ಯತೆ ಹಳದಿ ಚೆಂಡನ್ನು ಪಡೆಯುವುದಕ್ಕಿಂತ ಹೆಚ್ಚು.

# ಅಭ್ಯಾಸ 3.1

**1. ಕೆಳಗಿನ ಯಾವ ಸಂದರ್ಭಗಳಲ್ಲಿ ಮಾಹಿತಿಯನ್ನು ತೋರಿಸಲು ಊತಕ ನಕ್ಷೆಯನ್ನು ಬಳಸುವಿರಿ?**

**(a) ಒಬ್ಬ ಪೋಸ್ಟ್‌ಮನ್ನಿನ ಚೀಲದಲ್ಲಿ ವಿವಿಧ ಸ್ಥಳಗಳಿಗೆ ಹೋಗುವ ಪತ್ರಗಳ ಸಂಖ್ಯೆ.**

**(b) ಸ್ಪರ್ಧೆಯೊಂದರಲ್ಲಿ ಭಾಗವಹಿಸುತ್ತಿರುವ ಸ್ಪರ್ಧಾಳುಗಳ ಎತ್ತರ.**

**(c) ಐದು ಸಂಸ್ಥೆಗಳು ತಯಾರಿಸಿದ ಕೆಸೆಟ್‌ಗಳ ಸಂಖ್ಯೆ.**

**(d) ಬೆಳಗ್ಗೆ 7 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಒಂದು ನಿಲ್ದಾಣದಲ್ಲಿ ರೈಲು ಹತ್ತುವ ಪ್ರಯಾಣಿಕರ ಸಂಖ್ಯೆ. ಪ್ರತಿಯೊಂದಕ್ಕೂ ಕಾರಣಗಳನ್ನು ನೀಡಿ.**

**ಪರಿಹಾರ:**

ಊತಕ ನಕ್ಷೆಯಲ್ಲಿ ದತ್ತಾಂಶಗಳನ್ನು ವರ್ಗಾಂತರಗಳಲ್ಲಿ ಪ್ರತಿನಿಧಿಸಬೇಕು.ಇಲ್ಲಿ

(b) ಸ್ಪರ್ಧೆಯೊಂದರಲ್ಲಿ ಭಾಗವಹಿಸುತ್ತಿರುವ ಸ್ಪರ್ಧಾಳುಗಳ ಎತ್ತರವನ್ನು ವರ್ಗಾಂತರಗಳಲ್ಲಿ ಪ್ರತಿನಿಧಿಸಬಹುದು.

ಮತ್ತು (d) ಬೆಳಗ್ಗೆ 7 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ಒಂದು ನಿಲ್ದಾಣದಲ್ಲಿ ರೈಲು ಹತ್ತುವ ಪ್ರಯಾಣಿಕರ ಸಂಖ್ಯೆ.ಗಳನ್ನು ನಿರ್ದಿಷ್ಟ ಅವಧಿಗಳಾಗಿ ವರ್ಗಾಂತಗಳಲ್ಲಿ ಹಂಚಬಹುದು.

ಆದರೆ (a) ಮತ್ತು (c) ಗಳಿಗೆ ವರ್ಗಾಂತರ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಅವುಗಳಿಗೆ ಊತಕ ನಕ್ಷೆ ಸಾಧ್ಯವಿಲ್ಲ.

**2. ಒಂದು ದಿನಸಿ ಅಂಗಡಿಗೆ ಬಂದ ಗಿರಾಕಿಗಳನ್ನು ಹೀಗೆ ಗುರುತಿಸಲಾಗಿದೆ. ಪುರುಷ (ಪು) ಮಹಿಳೆ (ಮ), ಬಾಲಕ (ಕ), ಅಥವಾ ಬಾಲಕಿ (ಕಿ). ಒಂದು ದಿನ ಬೆಳಿಗ್ಗೆ ಬಂದ ಗಿರಾಕಿಗಳ ಪಟ್ಟಿ ಹೀಗಿದೆ.**

**ಮ ಮ ಮ ಕಿ ಕ ಮ ಮ ಪು ಕಿ ಕಿ ಪು ಪು ಮ ಮ ಮ ಮ ಕಿ ಕ ಪು ಮ ಕ ಕಿ ಕಿ ಪು ಮ ಮ ಪು ಪು ಮ ಮ ಮ ಪು ಮ ಕ ಮ ಕಿ ಪು ಮ ಮ ಮ ಮ ಕಿ ಮ ಪು ಪು ಮ ಮ ಪು ಮ ಕಿ ಮ ಪು ಕಿ ಮ ಪು ಪು ಕ ಕಿ ಕಿ ಮ.**

**ತಾಳೆ ಗುರುತುಗಳನ್ನು ಉಪಯೋಗಿಸಿ ಇದಕ್ಕೆ ಒಂದು ಆವರ್ತನ ವಿತರಣಾ ಪಟ್ಟಿಯನ್ನು ತಯಾರಿಸಿ. ಒಂದು ಸ್ತಂಭ ನಕ್ಷೆಯ ಮೂಲಕ ಇದನ್ನು ಚಿತ್ರರೂಪದಲ್ಲಿ ತೋರಿಸಿ.**

| ಗುಂಪು | ತಾಳೆಗುರುತು | ಆವರ್ತನ |
|---|---|---|
| ಮ | 𝍸 𝍸 𝍸 𝍸 𝍸 \|\|\| | 28 |
| ಪು | 𝍸 𝍸 𝍸 | 15 |
| ಕ | 𝍸 | 5 |
| ಕಿ | 𝍸 𝍸 \|\| | 12 |
| **ಒಟ್ಟು** | | **60** |




**3. ಒಂದು ಕಾರ್ಖಾನೆಯ ಮೂವತ್ತು ಕಾರ್ಮಿಕರ ವಾರದ ಭತ್ಯೆ ಹೀಗಿದೆ (ರೂಪಾಯಿಗಳಲ್ಲಿ):**

**830, 835, 890, 810, 835, 836, 869, 845, 898, 890, 820, 860, 832, 833, 855, 845, 804, 808, 812, 840, 885, 835, 835, 836, 878, 840, 868, 890, 806, 840.**

**ತಾಳೆ ಗುರುತುಗಳನ್ನು ಉಪಯೋಗಿಸಿ ಇದಕ್ಕೆ ಒಂದು ಆವರ್ತನ ವಿತರಣಾ ಪಟ್ಟಿಯನ್ನು ತಯಾರಿಸಿ. 800 ರಿಂದ 810, 810 ರಿಂದ 820 ಮುಂತಾದ ವರ್ಗಗಳನ್ನು ಇಟ್ಟುಕೊಳ್ಳಿ.**

**ಪರಿಹಾರ:**

| ವರ್ಗಾಂತರ | ತಾಳೆಗುರುತು | ಆವರ್ತನ |
|---|---|---|
| 800 – 810 | \|\|\| | 3 |
| 810 – 820 | \|\| | 2 |
| 820 – 830 | \| | 1 |
| 830 – 840 | 𝍸 \|\|\|\| | 9 |
| 840 – 850 | 𝍸 | 5 |
| 850 – 860 | \| | 1 |
| 860 – 870 | \|\|\| | 3 |
| 870 – 880 | \| | 1 |
| 880 – 890 | \| | 1 |
| 890 – 900 | \|\|\|\| | 4 |
| **ಒಟ್ಟು** | | **30** |

**4. ಮೂರನೆಯ ಪ್ರಶ್ನೆಯ ಆವರ್ತನ ವಿತರಣಾ ಪಟ್ಟಿಗೆ ಒಂದು ಊತಕ ನಕ್ಷೆ ಬರೆಯಿರಿ, ಮತ್ತು ಈ ಪ್ರಶ್ನೆಗಳನ್ನು ಉತ್ತರಿಸಿ:**

**(a) ಯಾವ ಗುಂಪಿನಲ್ಲಿ ಅತಿ ಹೆಚ್ಚು ಕಾರ್ಮಿಕರಿದ್ದಾರೆ?.**

**(b) 850 ರೂಪಾಯಿ ಅಥವಾ ಹೆಚ್ಚು ದುಡಿಯುವ ಕಾರ್ಮಿಕರೆಷ್ಟು?**

**(c) 850ಕ್ಕಿಂತ ಕಡಿಮೆ ದುಡಿಯುವ ಕಾರ್ಮಿಕರೆಷ್ಟು?**

**ಪರಿಹಾರ:**




(a) 830 – 840 ರ ಗುಂಪಿನಲ್ಲಿ ಹೆಚ್ಚು ಕಾರ್ಮಿಕರಿದ್ದಾರೆ. (b) 10 ಮಂದಿ ಕಾರ್ಮಿಕರು 850ಕ್ಕಿಂತ ಹೆಚ್ಚು ದುಡಿಯುತ್ತಾರೆ.

(c) 20 ಮಂದಿ ಕಾರ್ಮಿಕರು 850ಕ್ಕಿಂತ ಕಡಿಮೆ ದುಡಿಯುತ್ತಾರೆ.

**5. ಕೊಟ್ಟಿರುವ ನಕ್ಷೆಯು ಒಂದು ತರಗತಿಯ ವಿದ್ಯಾರ್ಥಿಗಳು ರಜಾಕಾಲದಲ್ಲಿ ಎಷ್ಟು ಟಿವಿ ನೋಡಿದರೆಂದು ತೋರಿಸುತ್ತದೆ. ಈ ಪ್ರಶ್ನೆಗಳನ್ನು ಉತ್ತರಿಸಿ.**



ಪ್ರತಿದಿನ ನೋಡಿದ

**(i)** **ಅತಿ ಹೆಚ್ಚು ವಿದ್ಯಾರ್ಥಿಗಳು ಎಷ್ಟು ಗಂಟೆ ಕಾಲ ಟಿವಿ ನೋಡಿದರು?**

**(ii) 4 ಗಂಟೆಗಳಿಗಿಂತ ಕಡಿಮೆ ಕಾಲ ಟಿವಿ ಎಷ್ಟು ವಿದ್ಯಾರ್ಥಿಗಳು ನೋಡಿದರು?**

**(iii) ಎಷ್ಟು ವಿದ್ಯಾರ್ಥಿಗಳು ಐದಕ್ಕೂ ಹೆಚ್ಚು ಗಂಟೆ ಕಾಲ ಟಿವಿ ನೋಡುವುದರಲ್ಲಿ ಕಳೆಯುತ್ತಾರೆ?**

**ಪರಿಹಾರ:**

(i) ಅತಿ ಹೆಚ್ಚು ವಿದ್ಯಾರ್ಥಿಗಳು 4 – 5 ಗಂಟೆಗಳ ಕಾಲ ಟಿವಿ ನೋಡಿದರು.

(ii) 4 ಗಂಟೆಗಳಿಗಿಂತ ಕಡಿಮೆ ಕಾಲ ಟಿವಿ 34 ವಿದ್ಯಾರ್ಥಿಗಳು ನೋಡಿದರು

(iii) 14 ವಿದ್ಯಾರ್ಥಿಗಳು ಐದಕ್ಕೂ ಹೆಚ್ಚು ಗಂಟೆ ಕಾಲ ಟಿವಿ ನೋಡುವುದರಲ್ಲಿ ಕಳೆಯುತ್ತಾರೆ.

## ಅಭ್ಯಾಸ 3.2

**1. ಒಂದು ಗುಂಪಿನ ಯುವಜನರಿಗೆ ಯಾವ ರೀತಿಯ ಸಂಗೀತ ಇಷ್ಟವೆಂಬುದರ ಬಗ್ಗೆ ಒಂದು ಸಮೀಕ್ಷೆ ಮಾಡಲಾಯಿತು. ಪಕ್ಕದ ಪೈ ಚಾರ್ಟ್ ಈ ಸಮೀಕ್ಷೆಯ ಫಲಿತಾಂಶವನ್ನು ತೋರಿಸುತ್ತದೆ. ಈ ಪೈ ಚಾರ್ಟ್‌ನ ಆಧಾರದ ಮೇಲೆ ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.**




**(i) 20 ಜನರು ಶಾಸ್ತ್ರೀಯ ಸಂಗೀತವನ್ನು ಇಷ್ಟಪಟ್ಟರೆ, ಒಟ್ಟು ಎಷ್ಟು ಜನರನ್ನು ಸಮೀಕ್ಷೆ ಮಾಡಲಾಯಿತು?**

**(ii) ಗರಿಷ್ಠ ಜನ ಇಷ್ಟಪಡುವ ಸಂಗೀತ ಪ್ರಕಾರ ಯಾವುದು?**

**(iii) ಒಂದು ಕೆಸೆಟ್ ಸಂಸ್ಥೆ 1000 ಸಿಡಿಗಳನ್ನು ಉತ್ಪಾದಿಸಿದರೆ. ಪ್ರತಿ ಪ್ರಕಾರದ ಎಷ್ಟು ಸಿಡಿಗಳನ್ನು ಅವರು ಉತ್ಪಾದಿಸಬೇಕು?**

**ಪರಿಹಾರ:**

(i) 20 ಜನರು ಶಾಸ್ತ್ರೀಯ ಸಂಗೀತವನ್ನು ಇಷ್ಟಪಟ್ಟರೆ, ಸಮೀಕ್ಷೆ ಮಾಡಲಾ ಜನ

10% – 20 ಜನರನ್ನು ಪ್ರತಿಸಿಧಿಸುತ್ತದೆ.

ಆದ್ದರಿಂದ 20% $\Rightarrow \frac{20}{10} \times 100 = 200$ ಜನ

(ii) ಗರಿಷ್ಠ ಜನ ಇಷ್ಟಪಡುವ ಸಂಗೀತ ಪ್ರಕಾರ ಸುಗಮ ಸಂಗೀತ

(iii) ಒಂದು ಕೆಸೆಟ್ ಸಂಸ್ಥೆ 1000 ಸಿಡಿಗಳನ್ನು ಉತ್ಪಾದಿಸಿದರೆ.

ಸುಗಮ – $\frac{40}{100} \times 1000 = 400$

ಅರೆಶಾಸ್ತ್ರೀಯ – $\frac{20}{100} \times 100 = 200$

ಶಾಸ್ತ್ರೀಯ – $\frac{10}{100} \times 100 = 100$

ಜಾನಪದ – $\frac{30}{100} \times 100 = 300$

ಸಿಡಿ ಗಳನ್ನು ಉತ್ಪಾದಿಸಬೇಕು.

**2. 360 ಜನರ ಒಂದು ಗುಂಪಿಗೆ ಮಳೆಗಾಲ, ಚಳಿಗಾಲ ಮತ್ತು ಬೇಸಿಗೆ ಈ ಮೂರಲ್ಲಿ ಅವರ ಇಷ್ಟದ ಋತುವಿನ ಬಗ್ಗೆ ಕೇಳಲಾಯಿತು.**

| ಋತು | ಮತಗಳ ಸಂಖ್ಯೆ |
|---|---|
| **ಬೇಸಿಗೆ**  | **90** |
| **ಮಳೆಗಾಲ**  | **120** |
| **ಚಳಿಗಾಲ**  | **150** |

**(i) ಯಾವ ಋತುವಿಗೆ ಅತ್ಯಂತ ಹೆಚ್ಚು ಮತ ಲಭಿಸಿತು?**

**(ii) ಪೈ ಚಾರ್ಟ್‌ನ ಪ್ರತಿ ಖಂಡದ ಕೋನವನ್ನು ಕಂಡುಹಿಡಿಯಿರಿ.**

**(iii) ಈ ಮಾಹಿತಿಯನ್ನು ತೋರಿಸಲು ಒಂದು ಪೈ ಚಾರ್ಟ್ ಅನ್ನು ಬರೆಯಿರಿ.**

**ಪರಿಹಾರ:**

(i) ಚಳಿಗಾಲಕ್ಕೆ ಹೆಚ್ಚಿನ ಮತ ಲಭಿಸಿತು.

(ii) ಬೇಸಿಗೆ ಋತುವಿನ ಕೇಂದ್ರೀಯ ಕೋನ

$= \frac{90}{360} \times 360 = 90^0$

ಮಳೆಗಾಲ ಋತುವಿನ ಕೇಂದ್ರೀಯ ಕೋನ

$= \frac{120}{360} \times 360 = 120^0$

ಚಳಿಗಾಲ ಋತುವಿನ ಕೇಂದ್ರೀಯ ಕೋನ

$= \frac{150}{360} \times 360 = 150^0$

(iii) ಈ ಮಾಹಿತಿಯನ್ನು ತೋರಿಸುವ ಪೈ ಚಾರ್ಟ್




**3. ಕೆಳಗಿನ ಮಾಹಿತಿಗೆ ಒಂದು ಪೈ ಚಾರ್ಟನ್ನು ಬರೆಯಿರಿ. ವಿವಿಧ ಜನರು ಇಷ್ಟ ಪಡುವ ಬಣ್ಣಗಳನ್ನು ಕೆಳಗೆ ಕಾಣಿಸಿದೆ.**

**ವೃತ್ತದಲ್ಲಿ ಪ್ರತಿ ಖಂಡದ ಭಾಗ ಎಷ್ಟಿರಬೇಕೆಂದು ಕಂಡುಹಿಡಿಯಿರಿ.**

| ಬಣ್ಣಗಳು | ಜನರ ಸಂಖ್ಯೆ |
|---|---|
| ನೀಲಿ | 18 |
| ಹಸಿರು | 9 |
| ಕೆಂಪು | 6 |
| ಹಳದಿ | 3 |
| ಒಟ್ಟು | 36 |

ವೃತ್ತದಲ್ಲಿ ಪ್ರತಿ ಖಂಡದ ಭಾಗ ಎಷ್ಟಿರಬೇಕೆಂದು ಕಂಡುಹಿಡಿಯಿರಿ. ಉದಾಹರಣೆಗೆ, ನೀಲಿ ಖಂಡ $\frac{18}{36}$ = ವೃತ್ತದ $\frac{1}{2}$; ಹಸಿರು $\frac{9}{36}$ = ವೃತ್ತದ $\frac{1}{4}$, ಇತ್ಯಾದಿ. ಇದರ ಆಧಾರದ ಮೇಲೆ ಪ್ರತಿ ಖಂಡದ ಕೋನವನ್ನು ಕಂಡುಹಿಡಿಯಿರಿ.

**ಪರಿಹಾರ:**

ನೀಲಿ ಬಣ್ಣದ ಭಾಗ $\frac{18}{36}$ = ವೃತ್ತದ $\frac{1}{2}$,

ಹಸಿರು ಬಣ್ಣದ ಭಾಗ $\frac{9}{36}$ = ವೃತ್ತದ $\frac{1}{4}$,

ಕೆಂಪು ಬಣ್ಣದ ಭಾಗ $\frac{6}{36}$ = ವೃತ್ತದ $\frac{1}{6}$,

ಕೆಂಪು ಬಣ್ಣದ ಭಾಗ $\frac{3}{36}$ = ವೃತ್ತದ $\frac{1}{12}$,

ನೀಲಿ ಬಣ್ಣದ ಭಾಗದ ಕೇಂದ್ರೀಯ ಕೋನ

$= 360 \times \frac{1}{2} = 180^0$

ಹಸಿರು ಬಣ್ಣದ ಭಾಗದ ಕೇಂದ್ರೀಯ ಕೋನ

$= 360 \times \frac{1}{4} = 90^0$

ಕೆಂಪು ಬಣ್ಣದ ಭಾಗದ ಕೇಂದ್ರೀಯ ಕೋನ

$= 360 \times \frac{1}{6} = 60^0$

ನೀಲಿ ಬಣ್ಣದ ಭಾಗದ ಕೇಂದ್ರೀಯ ಕೋನ

$= 360 \times \frac{1}{12} = 30^0$




**4. ಒಬ್ಬ ವಿದ್ಯಾರ್ಥಿ ಐದು ವಿಷಯಗಳಲ್ಲಿ ಗಳಿಸಿದ ಅಂಕಗಳನ್ನು ಪಕ್ಕದ ಪೈ ಚಾರ್ಟ್ ತೋರಿಸುತ್ತದೆ. ವಿದ್ಯಾರ್ಥಿಗಳಿಸಿದ ಒಟ್ಟು ಅಂಕಗಳು 540 ಆದರೆ, ಕೆಳಗಿನ ಪ್ರಶ್ನೆಗಳನ್ನು ಉತ್ತರಿಸಿ.**




**(i)** ಯಾವ ವಿಷಯದಲ್ಲಿ ವಿದ್ಯಾರ್ಥಿ 105 ಅಂಕಗಳನ್ನು ಗಳಿಸಿದನು? ಸೂಚನೆ: 540 ಅಂಕಗಳಿಗೆ ಕೇಂದ್ರೀಯ ಕೋನ $360°$ ಆದರೆ 105 ಅಂಕಗಳಿಗೆ ಕೋನ ಎಷ್ಟಿರುತ್ತದೆ?

**(ii)** ಈ ವಿದ್ಯಾರ್ಥಿಗೆ ಗಣಿತದಲ್ಲಿ ಹಿಂದಿ ವಿಷಯಕ್ಕಿಂತ ಎಷ್ಟು ಹೆಚ್ಚು ಅಂಕಗಳು ಬಂದವು?

**(iii) ಗಣಿತ ಮತ್ತು ಸಮಾಜಶಾಸ್ತ್ರದಲ್ಲಿ ಬಂದ ಒಟ್ಟು ಅಂಕಗಳು ವಿಜ್ಞಾನ ಮತ್ತು ಹಿಂದಿಯಲ್ಲಿ ಬಂದ ಒಟ್ಟು ಅಂಕಗಳಿಗಿಂತ ಹೆಚ್ಚೇ ಎಂದು ನಿರ್ಧರಿಸಿ.**

**(ಸೂಚನೆ: ಕೇವಲ ಕೋನಗಳನ್ನು ಗಮನಿಸಿ)**

**ಪರಿಹಾರ:**

(i) $\frac{360}{540} \times 105 = 70^0$

ಆದ್ದರಿಂದ ಹಿಂದಿ ವಿಷಯದಲ್ಲಿ 105 ಅಂಕಗಳನ್ನು ಗಳಿಸಿದನು.

(ii) ಈ ವಿದ್ಯಾರ್ಥಿಗೆ ಗಣಿತದಲ್ಲಿ ಹಿಂದಿ ವಿಷಯಕ್ಕಿಂತ ಎಷ್ಟು ಹೆಚ್ಚು ಅಂಕಗಳು ಬಂದವು?

ಗಣಿತದಲ್ಲಿ ಪಡೆದ ಅಂಕ

$\frac{90}{360} \times 540 = 135$

ವಿದ್ಯಾರ್ಥಿಗೆ ಹಿಂದಿ ವಿಷಯಕ್ಕಿಂತ ಗಣಿತದಲ್ಲಿ $135 - 105 = 30$ ಅಂಕಗಳು ಹೆಚ್ಚು ಬಂದವು.

(iii) ಗಣಿತ ಮತ್ತು ಸಮಾಜಶಾಸ್ತ್ರದಲ್ಲಿ ಬಂದ ಒಟ್ಟು ಅಂಕಗಳು ವಿಜ್ಞಾನ ಮತ್ತು ಹಿಂದಿಯಲ್ಲಿ ಬಂದ ಒಟ್ಟು ಅಂಕಗಳಿಗಿಂತ ಹೆಚ್ಚೇ ಎಂದು ನಿರ್ಧರಿಸಿ.

ಗಣಿತದಲ್ಲಿ ಬಂದ ಅಂಕಗಳು $= 90^0$

ಸಮಾಜಶಾಸ್ತ್ರದಲ್ಲಿ ಅಂಕಗಳು $= 65^0$

ಗಣಿತ ಮತ್ತು ಸಮಾಜಶಾಸ್ತ್ರದಲ್ಲಿ ಪಡೆದ ಒಟ್ಟು ಅಂಕಗಳು

$= 90^0 + 65^0 = 155^0$ ---------------(1)

ವಿಜ್ಞಾನದಲ್ಲಿ ಅಂಕಗಳು $= 80^0$

ಹಿಂದಿ ಅಂಕಗಳು $= 70^0$

ವಿಜ್ಞಾನ ಮತ್ತು ಹಿಂದಿಯಲ್ಲಿ ಒಟ್ಟು ಅಂಕಗಳು

$= 80^0 + 70^0 = 150^0$ ---------------(2)

ಆದ್ದರಿಂದ

ಗಣಿತ ಮತ್ತು ಸಮಾಜಶಾಸ್ತ್ರದಲ್ಲಿ ಬಂದ ಒಟ್ಟು ಅಂಕಗಳು ವಿಜ್ಞಾನ ಮತ್ತು ಹಿಂದಿಯಲ್ಲಿ ಬಂದ ಒಟ್ಟು ಅಂಕಗಳಿಗಿಂತ ಹೆಚ್ಚಾಗಿದೆ.

**5. ಒಂದು ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು ಮಾತನಾಡುವ ವಿವಿಧ ಭಾಷೆಗಳ ಬಗ್ಗೆ ಮಾಹಿತಿ ಇಲ್ಲಿದೆ. ಇದಕ್ಕೆ ಒಂದು ಪೈ ನಕ್ಷೆಯನ್ನು ತಯಾರಿಸಿ.**

| ಭಾಷೆ | ಕನ್ನಡ | ಇಂಗ್ಲೀಷ್ | ಮರಾಠಿ | ಹಿಂದಿ | ಬೆಂಗಾಲಿ | ಒಟ್ಟು |
|---|---|---|---|---|---|---|
| ವಿದ್ಯಾರ್ಥಿಗಳ ಸಂಖ್ಯೆ | 40 | 12 | 9 | 7 | 4 | 72 |

**ಪರಿಹಾರ:**

ಒಬ್ಬ ವಿದ್ಯಾರ್ಥಿಗೆ ಸಮನಾದ ಕೇಂದ್ರೀಯ ಕೋನದ ಅಳತೆ $= \frac{1}{72} \times 360 = 5^0$

| ಭಾಷೆ | ವಿದ್ಯಾರ್ಥಿಗಳ ಸಂಖ್ಯೆ | ಕೇಂದ್ರೀಯ ಕೋನದ ಅಳತೆ |
|---|---|---|
| ಕನ್ನಡ | 40 | $40 \times 5 = 200^0$ |
| ಇಂಗ್ಲೀಷ್ | 12 | $12 \times 5 = 60^0$ |
| ಮರಾಠಿ | 9 | $9 \times 5 = 45^0$ |
| ಹಿಂದಿ | 7 | $7 \times 5 = 35^0$ |
| ಬೆಂಗಾಲಿ | 4 | $4 \times 5 = 20^0$ |
| ಒಟ್ಟು | 72 | |




# ಅಭ್ಯಾಸ 3.3

**1. ಕೆಳಗಿನ ಪ್ರಯೋಗಗಳಲ್ಲಿ ಬರಬಹುದಾದ ಫಲಿತಾಂಶಗಳನ್ನು ಪಟ್ಟಿ ಮಾಡಿ.**

**(a) ಚಕ್ರವನ್ನು ತಿರುಗಿಸುವುದು**




**(b) ಎರಡು ನಾಣ್ಯಗಳನ್ನು ಒಟ್ಟಿಗೆ ಟಾಸ್ ಮಾಡುವುದು**

**ಪರಿಹಾರ:**

(a) ಚಕ್ರವನ್ನು ತಿರುಗಿಸುವುದು

ಫಲಿತಾಂಶಗಳು – {A, B, C, D}

ಒಟ್ಟು ಫಲಿತಾಂಶಗಳು =04

(b) ಎರಡು ನಾಣ್ಯಗಳನ್ನು ಒಟ್ಟಿಗೆ ಟಾಸ್ ಮಾಡುವುದು

ಫಲಿತಾಂಶಗಳು – {HH, HT, TH, TT}

ಇಲ್ಲಿ H = ಶಿರ; T = ಪುಚ್ಛ

ಒಟ್ಟು ಫಲಿತಾಂಶಗಳು =04

**2. 1 ರಿಂದ 6 ಸಂಖ್ಯೆಗಳಿರುವ ದಾಳವನ್ನು ಉರುಳಿಸಿದಾಗ, ಕೆಳಗಿನ ಘಟನೆಗಳ ಫಲಿತಾಂಶಗಳು ಯಾವುವು ಎಂದು ಪಟ್ಟಿ ಮಾಡಿ:**

**(a) ಅವಿಭಾಜ್ಯ ಸಂಖ್ಯೆ**

**(b) ಅವಿಭಾಜ್ಯವಲ್ಲದ ಸಂಖ್ಯೆ**

**(c) 5ಕ್ಕಿಂತ ಹೆಚ್ಚಿನ ಸಂಖ್ಯೆ**

**(d) 5 ಕ್ಕಿಂತ ಹೆಚ್ಚಲ್ಲದ ಸಂಖ್ಯೆ 3.**

**ಪರಿಹಾರ:**

**(a) ಅವಿಭಾಜ್ಯ ಸಂಖ್ಯೆ – {2, 3, 5}**

**(b) ಅವಿಭಾಜ್ಯವಲ್ಲದ ಸಂಖ್ಯೆ – {1, 4, 6}**

**(c) 5ಕ್ಕಿಂತ ಹೆಚ್ಚಿನ ಸಂಖ್ಯೆ – {6}**

**(d) 5 ಕ್ಕಿಂತ ಹೆಚ್ಚಲ್ಲದ ಸಂಖ್ಯೆ – {1, 2, 3, 4, 5}**

**3. ಇವುಗಳ ಸಂಭವನೀಯತೆಯನ್ನು ಕಂಡುಹಿಡಿಯಿರಿ.**

**(a) ಪ್ರಶ್ನೆ 1-(a) ನಲ್ಲಿ ಮುಳ್ಳು ಆ ಮೇಲೆ ನಿಲ್ಲುವುದು.**

**(b)ಚೆನ್ನಾಗಿ ಕಲೆಸಿದ 52 ಇಸ್ಪೀಟು ಎಲೆಗಳ ಗುಂಪಿನಿಂದ ಒಂದನ್ನು ತೆಗೆದರೆ ಒಂದು ಏಸ್ ಸಿಗುವುದು.**

**(c) ಕೆಳಗಿನ ಚಿತ್ರದಿಂದ ಕೆಂಪು ಸೇಬನ್ನು ಪಡೆಯುವುದು.**



**ಪರಿಹಾರ:**

(a) ಪ್ರಶ್ನೆ 1-(a) ನಲ್ಲಿ ಮುಳ್ಳು D ಮೇಲೆ ನಿಲ್ಲುವುದು.

ಸಾಧ್ಯವಿರುವ ಫಲಿತಾಂಶಗಳು

= {A,A,B,C,D} = 5




ಮುಳ್ಳು D ಮೇಲೆ ನಿಲ್ಲುವುದು = 1

ಆದ್ದರಿಂದ ಸಂಭವನೀಯತೆ = $\frac{1}{5}$

(b)ಚೆನ್ನಾಗಿ ಕಲೆಸಿದ 52 ಇಸ್ಪೀಟು ಎಲೆಗಳ ಗುಂಪಿನಿಂದ ಒಂದನ್ನು ತೆಗೆದರೆ ಒಂದು ಏಸ್ ಸಿಗುವುದು.

ಇಸ್ಪೀಟ್ ಎಲೆಯ ಕಟ್ಟಿನಲ್ಲಿರುವ ಏಸ್‌ಗಳು = 4

ಏಸ್ ಆಗಿರುವ ಸಂಭವನೀಯತೆ = $\frac{4}{52} = \frac{1}{13}$

(c) ಚಿತ್ರದಿಂದ ಕೆಂಪು ಸೇಬನ್ನು ಪಡೆಯುವುದು.

ಒಟ್ಟು ಸೇಬುಗಳು = 7

ಕೆಂಪು ಸೇಬುಗಳು = 4

ಆದ್ದರಿಂದ ಕೆಂಪು ಸೇಬು ತೆಗೆಯುವ ಸಂಭವನೀಯತೆ = $\frac{4}{7}$

**4. 1 ರಿಂದ 10 ಸಂಖ್ಯೆಗಳನ್ನು ಬೇರೆ ಬೇರೆ ಚೀಟಿಗಳ ಮೇಲೆ ಬರೆದು ಒಂದು (ಒಂದು ಚೀಟಿಯ ಮೇಲೆ ಒಂದು ಸಂಖ್ಯೆ) ಡಬ್ಬಿಯಲ್ಲಿ ಚೆನ್ನಾಗಿ ಮಿಶ್ರ ಮಾಡಿ ಇಡಲಾಗಿದೆ. ಕಣ್ಣು ಮುಚ್ಚಿ ಒಂದು ಚೀಟಿಯನ್ನು ಹೊರತೆಗೆಯಲಾಗುತ್ತದೆ. ಕೆಳಗಿನವುಗಳ ಸಂಭವನೀಯತೆ ಎಷ್ಟು?**

**(a) ಸಂಖ್ಯೆ 6ನ್ನು ಪಡೆಯುವುದು.**

**(b) 6ಕ್ಕಿಂತ ಚಿಕ್ಕ ಸಂಖ್ಯೆಯನ್ನು ಪಡೆಯುವುದು.**

**(c) 6ಕ್ಕಿಂತ ಹೆಚ್ಚಿನ ಸಂಖ್ಯೆಯನ್ನು ಪಡೆಯುವುದು.**

**(d) ಒಂದಂಕಿಯ ಸಂಖ್ಯೆಯನ್ನು ಪಡೆಯುವುದು.**

**ಪರಿಹಾರ:**

ಒಟ್ಟು ಸಂಖ್ಯೆಗಳು = 10

(a) ಸಂಖ್ಯೆ 6ನ್ನು ಪಡೆಯುವುದು – {6}

ಸಂಭವನೀಯತೆ = $\frac{1}{10}$

(b) 6ಕ್ಕಿಂತ ಚಿಕ್ಕ ಸಂಖ್ಯೆಯನ್ನು ಪಡೆಯುವುದು.

{ 1,2,3,4,5} ಒಟ್ಟು – 5

ಸಂಭವನೀಯತೆ = $\frac{5}{10} = \frac{1}{2}$

(c) 6ಕ್ಕಿಂತ ಹೆಚ್ಚಿನ ಸಂಖ್ಯೆಯನ್ನು ಪಡೆಯುವುದು.

{7,8,9,10} ಒಟ್ಟು – 4

ಸಂಭವನೀಯತೆ = $\frac{4}{10} = \frac{2}{5}$

(d) ಒಂದಂಕಿಯ ಸಂಖ್ಯೆಯನ್ನು ಪಡೆಯುವುದು.

{1,2,3,4,5,6,7,8,9} ಒಟ್ಟು – 9

ಸಂಭವನೀಯತೆ = $\frac{9}{10}$

**5. ಒಂದು ಚಕ್ರದಲ್ಲಿ ಮೂರು ಹಸಿರು ಖಂಡಗಳು, ಒಂದು ನೀಲಿ ಖಂಡ ಮತ್ತು ಒಂದು ಕೆಂಪು ಖಂಡವಿದೆ. ಇದನ್ನು ತಿರುಗಿಸಿದಾಗ ಹಸಿರು ಖಂಡದ ಮೇಲೆ ಮುಳ್ಳು ನಿಲ್ಲುವ ಸಂಭವನೀಯತೆ ಎಷ್ಟು? ನೀಲಿ ಅಲ್ಲದ ಖಂಡದ ಮೇಲೆ ನಿಲ್ಲುವ ಸಂಭವನೀಯತೆ?**

**ಪರಿಹಾರ:**

ಒಟ್ಟು ಫಲಿತಾಂಶಗಳು = 5



ಹಸಿರು ಖಂಡದ ಮೇಲೆ ಮುಳ್ಳು ನಿಲ್ಲುವ ಸಂಭವನೀಯತೆ = $\frac{3}{5}$

ನೀಲಿ ಅಲ್ಲದ ಖಂಡದ ಮೇಲೆ ನಿಲ್ಲುವ ಸಂಭವನೀಯತೆ = $\frac{4}{5}$

**6. ಎರಡನೆ ಪ್ರಶ್ನೆಯ ಘಟನೆಗಳ ಸಂಭವನೀಯತೆ ಯನ್ನು ಕಂಡುಹಿಡಿಯಿರಿ.**

**ಪರಿಹಾರ:**

**ಒಟ್ಟು ಫಲಿತಾಂಶಗಳು – {1,2,3,4,5,6} = 6**

**(a) ಒಟ್ಟು ಅವಿಭಾಜ್ಯ ಸಂಖ್ಯೆ – {2, 3, 5} = 3**

**ಸಂಭವನೀಯತೆ** = $\frac{3}{6} = \frac{1}{2}$

**(b) ಒಟ್ಟು ಅವಿಭಾಜ್ಯವಲ್ಲದ ಸಂಖ್ಯೆ – {1, 4, 6} = 3**

**ಸಂಭವನೀಯತೆ** = $\frac{3}{6} = \frac{1}{2}$

**(c) 5ಕ್ಕಿಂತ ಹೆಚ್ಚಿನ ಒಟ್ಟು ಸಂಖ್ಯೆ – {6} = 1**

**ಸಂಭವನೀಯತೆ** = $\frac{1}{6}$

**(d) 5ಕ್ಕಿಂತ ಹೆಚ್ಚಲ್ಲದ**

**ಒಟ್ಟು ಸಂಖ್ಯೆ – {1, 2, 3, 4, 5} = 5**

**ಸಂಭವನೀಯತೆ** = $\frac{5}{6}$

YK

ಪರಿಷ್ಕೃತ ಪಠ್ಯ

Attractive Maths Solution

# ಗಣಿತ

# Mathematics

## ಕನ್ನಡ ಮಾಧ್ಯಮ

## ಭಾಗ–2

## ಅಧ್ಯಾಯ 4

# ನೇರ ಮತ್ತು ವಿಲೋಮ ಅನುಪಾತ

# Direct and Inverse Proportions

Copy rights reserved

# ಅಧ್ಯಾಯ 4
# ನೇರ ಮತ್ತು ವಿಲೋಮ ಅನುಪಾತಗಳು

**ಕಲಿಕಾಂಶಗಳು:**

- **ಪೀಠಿಕೆ**
- **ನೇರ ಅನುಪಾತ**
- **ವಿಲೋಮ ಅನುಪಾತ**

**ಪೀಠಿಕೆ**

ಒಂದಕ್ಕೊಂದು ಸಂಬಂಧ ಹೊಂದಿರುವ ಎರಡು ಪರಿಮಾಣಗಳಲ್ಲಿ ಒಂದು ಬದಲಾವಣೆಯಾದಂತೆ ಇನ್ನೊಂದು ಪರಿಮಾಣವು ಬದಲಾವಣೆಯಗುವುದೇ ಅನುಪಾತ.

ಉದಾಹರಣೆಗೆ:

(i) ಕೊಂಡ ವಸ್ತುಗಳ ಸಂಖ್ಯೆ ಹೆಚ್ಚಿದಂತೆ, ಅವುಗಳ ಒಟ್ಟು ಬೆಲೆಯು ಹೆಚ್ಚುತ್ತದೆ.

(ii) ಬ್ಯಾಂಕಿನಲ್ಲಿ ಠೇವಣಿ ಇಟ್ಟಿರುವ ಹಣ ಹೆಚ್ಚಿದಂತೆ, ಗಳಿಸುವ ಬಡ್ಡಿ ಹೆಚ್ಚುತ್ತದೆ.

(iii) ಒಂದು ವಾಹನದ ಜವವು ಹೆಚ್ಚಿದಂತೆ, ಒಂದು ನಿರ್ದಿಷ್ಟ ದೂರವನ್ನು ಕ್ರಮಿಸಲು ಬೇಕಾಗುವ ಅವಧಿ ಕಡಿಮೆಯಾಗುತ್ತದೆ.

(iv) ಒಂದು ಕೆಲಸವನ್ನು ಮಾಡಲು ಕೆಲಸಗಾರರ ಸಂಖ್ಯೆ ಹೆಚ್ಚಿದಂತೆ, ಆ ಕೆಲಸವನ್ನು ಮುಗಿಸಲು ಬೇಕಾಗಿರುವ ಅವಧಿ ಕಡಿಮೆಯಾಗುತ್ತದೆ.

**ನೇರ ಅನುಪಾತ (DIRECT PROPORTION)**

ಒಂದಕ್ಕೊಂದು ಸಂಬಂಧವಿರುವ ಎರಡು ಪರಿಮಾಣಗಳಲ್ಲಿ ಒಂದರ ಬೆಲೆಯು ಹೆಚ್ಚಿದಂತೆ ಇನ್ನೊಂದು ಪರಿಮಾಣದ ಬೆಲೆಯು ಹೆಚ್ಚಾದರೆ ಅಥವಾ ಒಂದರ ಬೆಲೆಯು ಕಡಿಮೆಯಾದಂತೆ ಇನ್ನೊಂದರ ಬಲೆಯು ಅದೇ ಪ್ರಮಾಣದಲ್ಲಿ ಕಡಿಮೆಯಾದರೆ ಅದನ್ನು ಸಮಾನುಪಾತ ಎನ್ನುವರು.

1 ಕಿ.ಗ್ರಾಂ ಸಕ್ಕರೆಯ ಬೆಲೆಯು ರೂ 36 ಆದರೆ, 3 ಕಿ.ಗ್ರಾಂ ಸಕ್ಕರೆಯ ಬೆಲೆ ರೂ 108. ಇದೇ ರೀತಿ ನಾವು 5 ಕಿ.ಗ್ರಾಂ ಅಥವಾ 8 ಕಿ.ಗ್ರಾಂ ಸಕ್ಕರೆಯ ಬೆಲೆಯನ್ನು ಕಂಡುಹಿಡಿಯಬಹುದು.




| ಸಕ್ಕರೆಯ ತೂಕ(ಕಿ.ಗ್ರಾಂ.) | 1 | 3 | 5 | 6 | 8 | 10 |
|---|---|---|---|---|---|---|
| ಬೆಲೆ (ರೂಗಳಲ್ಲಿ) | 36 | 108 | 180 | — | — | — |

ಸಕ್ಕರೆಯ ತೂಕವು ಹೆಚ್ಚಿದಂತೆ ಅದರ ಬೆಲೆಯು, ಅವೆರಡರ ಅನುಪಾತವು ಸ್ಥಿರವಾಗಿರುವಂತೆ ಹೆಚ್ಚುತ್ತಿರುವುದನ್ನು ಗಮನಿಸಬಹುದು.

ಇಲ್ಲಿ $x$ ನ ಬೆಲೆಯು ಹೆಚ್ಚಿದಂತೆ $y$ ನ ಬೆಲೆಯು ಹೆಚ್ಚಾಗುವಾಗ, $\frac{x}{y}$ ಅನುಪಾತವು ಯಾವುದೇ ರೀತಿಯಲ್ಲಿ ಬದಲಾಗುವುದಿಲ್ಲ. ಇದು ಒಂದು ಸ್ಥಿರಾಂಕ ಆಗಿದೆ (k ಆಗಿರಲಿ).

$\frac{x}{y} = k$ ಅಥವಾ $x = k\,y$ ಗಳಾಗಿರುವಾಗ ಮಾತ್ರ ನಾವು $x$ ಮತ್ತು $y$ ಗಳು ನೇರ ಅನುಪಾತದಲ್ಲಿದೆ.

**ಉದಾಹರಣೆ 1: ಒಂದು ನಿರ್ದಿಷ್ಟ ಗುಣಮಟ್ಟದ 5 ಮೀಟರ್ ಬಟ್ಟೆಯ ಬೆಲೆಯು ರೂ 210. ಅದೇ ವಿಧದ 2,4,10 ಹಾಗೂ 13 ಮೀಟರ್ ಬಟ್ಟೆಗೆ ಆಗುವ ಬೆಲೆಯ ಕೋಷ್ಟಕವನ್ನು ತಯಾರಿಸಿ.**



**ಪರಿಹಾರ:**

ಬಟ್ಟೆಯ ಉದ್ದವು $x$ ಮೀಟರ್ ಮತ್ತು ಅದರ ಬೆಲೆಯು $y$ ` ಆಗಿರಲಿ.

$\frac{x}{y} = k$ ( k ಯು ಒಂದು ಸ್ಥಿರಾಂಕ)

$\Rightarrow \frac{210}{5} = 42$

ಆದ್ದರಿಂದ,

| ಬಟ್ಟೆ(ಮೀಗಳಲ್ಲಿ) | 2 | 4 | 5 | 10 | 13 |
|---|---|---|---|---|---|
| ಬೆಲೆ(ರೂಗಳಲ್ಲಿ) | 84 | 168 | 210 | 420 | 546 |

2 ಮೀಟರ್ ಬಟ್ಟೆಯ ಬೆಲೆ $= 2 \times 42 = 84$

4 ಮೀಟರ್ ಬಟ್ಟೆಯ ಬೆಲೆ $= 4 \times 42 = 168$

10ಮೀಟರ್ ಬಟ್ಟೆಯ ಬೆಲೆ $= 10 \times 42 = 420$

13ಮೀಟರ್ ಬಟ್ಟೆಯ ಬೆಲೆ $= 13 \times 42 = 546$

**ಉದಾಹರಣೆ 2: 14 ಮೀಟರ್ ಎತ್ತರದ ವಿದ್ಯುತ್ ಕಂಬವು 10ಮೀಟರ್ ಉದ್ದದ ನೆರಳನ್ನು ಉಂಟುಮಾಡುತ್ತದೆ. ಹಾಗಾದರೆ ಇದೇ ರೀತಿಯ ಸಂದರ್ಭದಲ್ಲಿ 15ಮೀಟರ್ ಉದ್ದದ ನೆರಳನ್ನು ಉಂಟು ಮಾಡುವ ಮರದ ಎತ್ತರವನ್ನು ಕಂಡುಹಿಡಿಯಿರಿ.**



**ಪರಿಹಾರ:**

ಮರದ ಎತ್ತರವು $x$ ಮೀಟರ್ ಆಗಿರಲಿ. ನೆರಳಿನ ಉದ್ದ y ಮೀಟರ್ ಗಳಾಗಿರಲಿ.

ಆದ್ದರಿಂದ, $\frac{x}{y}$ = k (k ಯು ಒಂದು ಸ್ಥಿರಾಂಕ)

$\Rightarrow \frac{14}{10} = \frac{x}{y}$

$\Rightarrow x = \frac{14\times15}{10} = 21$ಮೀಟರ್

**ಉದಾಹರಣೆ 3: ದಪ್ಪ ಕಾಗದದ 12 ಹಾಳೆಗಳ ತೂಕವು 40 ಗ್ರಾಂ.ಗಳಾದರೆ, ಇದೇ ಕಾಗದದ ಎಷ್ಟು ಹಾಳೆಗಳು $2\frac{1}{2}$ ಕಿ.ಗ್ರಾಂ. ತೂಗುತ್ತವೆ?**



**ಪರಿಹಾರ :**

ಹಾಳೆಗಳ ಸಂಖ್ಯೆ $x$ ಆಗಿರಲಿ. ಅವುಗಳ ತೂಕ y ಕಿ.ಗ್ರಾಂ. ಗಳಾಗಿರಲಿ.

ಆದ್ದರಿಂದ, $\frac{x}{y}$ = k (k ಯು ಒಂದು ಸ್ಥಿರಾಂಕ)

$\Rightarrow \frac{12}{40} = \frac{x}{2500}$ [ $2\frac{1}{2}$ ಕಿ.ಗ್ರಾಂ. = 2500ಗ್ರಾಂ]

$\Rightarrow x = \frac{2500\times12}{40}$

$\Rightarrow x = 750$

**ಉದಾಹರಣೆ 4 : ಒಂದು ರೈಲು ಗಂಟೆಗೆ 75 ಕಿ.ಮೀ. ನಂತೆ ಏಕರೂಪದ ಜವದೊಂದಿಗೆ ಚಲಿಸುತ್ತದೆ.**

**(i) ಅದು 20 ನಿಮಿಷಗಳಲ್ಲಿ ಎಷ್ಟು ದೂರವನ್ನು ಕ್ರಮಿಸುತ್ತದೆ?**

**(ii) 250 ಕಿ.ಮೀ. ದೂರವನ್ನು ಕ್ರಮಿಸಲು ಬೇಕಾಗುವ ಅವಧಿಯನ್ನು ಕಂಡುಹಿಡಿಯಿರಿ.**

**ಪರಿಹಾರ:**

ರೈಲಿನ ವೇಗ $x$ ಆಗಿರಲಿ. ತೆಗೆದು ಕೊಂಡ ಸಮಯ y ಗಂಟೆಗಳು ಗಳಾಗಿರಲಿ.

ಆದ್ದರಿಂದ, $\frac{x}{y}$ = k (k ಯು ಒಂದು ಸ್ಥಿರಾಂಕ)

(i) ಅದು 20 ನಿಮಿಷಗಳಲ್ಲಿ ಎಷ್ಟು ದೂರವನ್ನು ಕ್ರಮಿಸುತ್ತದೆ?

$\Rightarrow \frac{75}{60} = \frac{x}{20}$ [ 1ಗಂಟೆ = 60ನಿಮಿಷಗಳು]

$\Rightarrow x = \frac{20\times75}{60}$

$\Rightarrow x = 25$ ಕಿ.ಮೀ.

(ii) 250 ಕಿ.ಮೀ. ದೂರವನ್ನು ಕ್ರಮಿಸಲು ಬೇಕಾಗುವ ಅವಧಿಯನ್ನು ಕಂಡುಹಿಡಿಯಿರಿ.

$\Rightarrow \frac{75}{60} = \frac{250}{y}$ [ 1ಗಂಟೆ = 60ನಿಮಿಷಗಳು]

$\Rightarrow y = \frac{60\times250}{75}$

$\Rightarrow x = 200$ ನಿಮಿಷಗಳು

= 3 ಗಂಟೆ 20 ನಿಮಿಷಗಳು.

**ಉದಾಹರಣೆ 3: ನಕಾಶೆಯ ಮೇಲೆ ದೂರ ಪ್ರಮಾಣ ಸೂಚಕ (Scale)ಯನ್ನು 1:30000000 ಎಂದು ಕೊಟ್ಟಿದೆ. ನಕಾಶೆಯಲ್ಲಿ ಎರಡು ನಗರಗಳು 4 ಸೆಂ.ಮೀ. ದೂರದಲ್ಲಿವೆ. ಅವುಗಳ ನಡುವಿರುವ ನಿಜವಾದ ದೂರವನ್ನು ಕಂಡುಹಿಡಿಯಿರಿ.**




**ಪರಿಹಾರ:**

ನಕಾಶೆಯ ದೂರವು x ಮತ್ತು ನಿಜವಾದ ದೂರವು, y ಆಗಿರಲಿ.

ಆದ್ದರಿಂದ, $\frac{x}{y}$ = k (k ಯು ಒಂದು ಸ್ಥಿರಾಂಕ)

$\Rightarrow \frac{1}{30000000} = \frac{4}{y}$

$\Rightarrow y = 4 \times 30000000$

$\Rightarrow x = 12 \times 10^7$ ಸೆಂ.ಮೀ.

$\Rightarrow x = \frac{12\times10^7}{10^5}$ ಕಿ.ಮೀ. [ 1ಕಿ.ಮೀ. = $10^5$ ಸೆಂ.ಮೀ.]

$\Rightarrow x = 12 \times 10^2$ ಕಿ.ಮೀ.

$\Rightarrow x = 1200$ ಕಿ.ಮೀ.

## ವಿಲೋಮ ಅನುಪಾತ

## (INVERSE PROPOTION)

ಒಂದಕ್ಕೊಂದು ಸಂಬಂಧವಿರುವ ಎರಡು ಪರಿಮಾಣಗಳಲ್ಲಿ ಒಂದರ ಬೆಲೆಯು ಹೆಚ್ಚಿದಂತೆ ಇನ್ನೊಂದು ಪರಿಮಾಣದ ಬೆಲೆಯು ಕಡಿಮೆಯಾದರೆ ಅಥವಾ ಒಂದರ ಬೆಲೆಯು ಕಡಿಮೆಯಾದಂತೆ ಇನ್ನೊಂದರ ಬೆಲೆಯು ಅದೇ ಪ್ರಮಾಣದಲ್ಲಿ ಹೆಚ್ಚಾದರೆ ಅದನ್ನು ವಿಲೋಮಾನುಪಾತ ಎನ್ನುವರು.




| ಜವ(ಕಿ.ಮೀ.ಗಳಲ್ಲಿ) | 5 | 10 | 20 | 30 | 60 | 120 |
|---|---|---|---|---|---|---|
| ತೆಗೆದುಕೊಂಡ ಸಮಯ (ಗಂಟೆಗಳಲ್ಲಿ) | 12 | 6 | 3 | — | — | — |



ಜವವು ಹೆಚ್ಚಿದಂತೆ ಅದೇ ದೂರವನ್ನು ಕ್ರಮಿಸಲು ತೆಗೆದುಕೊಳ್ಳುವ ಅವಧಿಯು ಕಡಿಮೆಯಾಗುವುದನ್ನು ಗಮನಿಸಬಹುದು.

ಇಲ್ಲಿ ಗುಣಲಬ್ಧ $xy$ ಸ್ಥಿರಾಂಕವಾಗಿರುತ್ತದೆ. $k$ ಒಂದು ಒಂದು ಸ್ಥಿರಾಂಕವಾಗಿದ್ದು $xy=k$ ಆಗಿದ್ದರೆ $x$ ಮತ್ತು $y$ ಗಳು ವಿಲೋಮಾನುಪಾತದಲ್ಲಿವೆ ಎಂದು ಹೇಳುತ್ತೇವೆ.

**ಉದಾಹರಣೆ 7: ಒಂದು ನೀರಿನ ತೊಟ್ಟಿಯನ್ನು ತುಂಬಿಸಲು 6 ಕೊಳವೆಗಳಿಗೆ 1 ಗಂಟೆ 20 ನಿಮಿಷಗಳು ಬೇಕಾಗುತ್ತವೆ. ಇದೇ ರೀತಿಯ 5 ಕೊಳವೆಗಳಿಗೆ ಎಷ್ಟು ಸಮಯ ಬೇಕಾಗುತ್ತದೆ?**

**ಪರಿಹಾರ:**

ತೊಟ್ಟಿಯನ್ನು ತುಂಬಿಸಲು ಬೇಕಾಗುವ ಸಮಯ $x$ ನಿಮಿಷಗಳು ಎಂದಿರಲಿ. ಕೊಳವೆಗಳ ಸಂಖ್ಯೆ y ಆಗಿರಲಿ.

ಇದು ವಿಲೋಮಾನುಪಾತದಲ್ಲಿದೆ.

ಆದ್ದರಿಂದ, $xy = k$

$80 \times 6 = x \times 5$ [ 1ಗಂ.20ನಿ = 80 ನಿಮಿಷ]

$\Rightarrow x = \frac{6 \times 80}{5} \Rightarrow x = 96$ ನಿಮಿಷಗಳು.

ಅಥವಾ 1 ಗಂಟೆ 36 ನಿಮಿಷಗಳು.

**ಉದಾಹರಣೆ 8: ಒಂದು ವಿದ್ಯಾರ್ಥಿನಿಲಯದಲ್ಲಿ 100 ವಿದ್ಯಾರ್ಥಿಗಳಿದ್ದಾರೆ. ಅವರಿಗೆ 20 ದಿನಗಳಿಗೆ ಸಾಕಾಗುವಷ್ಟು ಆಹಾರ ಸಾಮಗ್ರಿಗಳಿವೆ. ಇನ್ನೂ 25 ವಿದ್ಯಾರ್ಥಿಗಳು ಇವರ ಜೊತೆಗೆ ಸೇರಿದರೆ, ಇದೇ ಆಹಾರ ಸಾಮಗ್ರಿಗಳು ಎಷ್ಟು ದಿನಗಳಿಗೆ ಸಾಕಾಗುವುದು?**

**ಪರಿಹಾರ:**

ವಿದ್ಯಾರ್ಥಿಗಳ ಸಂಖ್ಯೆ $x$ ಎಂದಿರಲಿ. ದಿನಗಳ ಸಂಖ್ಯೆ y ಆಗಿರಲಿ.

ಇದು ವಿಲೋಮಾನುಪಾತದಲ್ಲಿದೆ.

ಆದ್ದರಿಂದ, $xy = k$

$100 \times 20 = 125 \times y$

$\Rightarrow y = \frac{100 \times 20}{125} \Rightarrow x = 16$ ದಿನಗಳು

**ಉದಾಹರಣೆ 9: 15 ಜನ ಕೆಲಸಗಾರರು ಒಂದು ಗೋಡೆಯನ್ನು 48 ಗಂಟೆಗಳಲ್ಲಿ ಕಟ್ಟಿದರೆ, ಇದೇ ಕೆಲಸವನ್ನು 30 ಗಂಟೆಗಳಲ್ಲಿ ಮಾಡಲು ಎಷ್ಟು ಕೆಲಸಗಾರರು ಬೇಕಾಗುವರು?**

**ಪರಿಹಾರ:**

ಜನರ ಸಂಖ್ಯೆ = x ಆಗಿರಲಿ. ತೆಗೆದುಕೊಂಡ ಅವಧಿ y ಎಂದಿರಲಿ.

ಇದು ವಿಲೋಮಾನುಪಾತದಲ್ಲಿದೆ.

ಆದ್ದರಿಂದ, $xy = k$

$15 \times 48 = x \times 30$

$\Rightarrow x = \frac{15 \times 48}{30} \Rightarrow x = 24$ ಗಂಟೆಗಳು

# ಅಭ್ಯಾಸ 4.1

**1. ರೈಲ್ವೆ ನಿಲ್ದಾಣದ ಬಳಿ ಕಾರಿನ ನಿಲುಗಡೆಯ ಶುಲ್ಕವು ಈ ಕೆಳಗಿನಂತಿದೆ.**



**4 ಗಂಟೆಗಳ ಅವಧಿಯವರೆಗೆ ರೂ 60**

**8 ಗಂಟೆಗಳ ಅವಧಿಯವರೆಗೆ ರೂ 100**

**12 ಗಂಟೆಗಳ ಅವಧಿಯವರೆಗೆ ರೂ 140**

**24 ಗಂಟೆಗಳ ಅವಧಿಯವರೆಗೆ ರೂ 180**

**ನಿಲುಗಡೆಯ ಶುಲ್ಕವು, ನಿಲುಗಡೆಯ ಅವಧಿಯೊಂದಿಗೆ ನೇರ ಅನುಪಾತದಲ್ಲಿದೆಯೇ? ಎಂದು ಪರೀಕ್ಷಿಸಿ.**

**ಪರಿಹಾರ:**

ಶುಲ್ಕವು $x$ ಆಗಿರಲಿ ಹಾಗೂ ಸಮಯವು $y$ ಆಗಿರಲಿ ಇವು ನೇರ ಅನುಪಾತದಲ್ಲಿದ್ದರೆ,

$\frac{x}{y}$ = k ಆಗಿರುತ್ತದೆ. [ಇಲ್ಲಿ ಒಂದು k ಸ್ಥಿರಾಂಕ]

$\frac{60}{4} = 15 = k_1$

$\frac{100}{8} = 12.5 = k_2$

$\frac{140}{12} = 11.67 = k_3$

$\frac{180}{24} = 7.50 = k_4$

ಇಲ್ಲಿ $k_1 \neq k_2 \neq k_3 \neq k_4$

ಆದ್ದರಿಂದ ನಿಲುಗಡೆಯ ಶುಲ್ಕವು ನಿಲುಗಡೆಯ ಅವಧಿಯೊಂದಿಗೆ ನೇರ ಅನುಪಾತದಲ್ಲಿ ಇಲ್ಲ.

**2. ಬಣ್ಣದ ಮಿಶ್ರಣವೊಂದನ್ನು 1 ಭಾಗ ಕೆಂಪುವರ್ಣದ್ರವ್ಯ ಮತ್ತು 8 ಭಾಗ ಆಧಾರ ದ್ರಾವಕ (Base)ದೊಂದಿಗೆ ಸೇರಿಸಿ ತಯಾರಿಸಿದೆ. ಈ ಕೆಳಗಿನ ಕೋಷ್ಟಕದಲ್ಲಿ, ಸೇರಿಸಬೇಕಾದ ಆಧಾರ ದ್ರಾವಕದ ಭಾಗವನ್ನು ಕಂಡುಹಿಡಿಯಿರಿ.**

| ವರ್ಣದ್ರವ್ಯದ ಭಾಗ | 1 | 4 | 7 | 12 | 20 |
|---|---|---|---|---|---|
| ಆಧಾರ ದ್ರಾವಕದ ಭಾಗ | 8 | – | – | – | – |

**ಪರಿಹಾರ:**

ಆಧಾರ ದ್ರಾವಕದ ಭಾಗ $x$ ಆಗಿರಲಿ ಹಾಗೂ ವರ್ಣದ್ರವ್ಯದ ಭಾಗ $y$ ಆಗಿರಲಿ

ಮಿಶ್ರಣವು ನೇರ ಅನುಪಾತದಲ್ಲಿರಬೇಕು.

ಆದ್ದರಿಂದ, $\frac{x}{y}$ = k (k ಯು ಒಂದು ಸ್ಥಿರಾಂಕ)

$\Rightarrow \frac{x}{y} = \frac{8}{1} = 8$

(i) $\frac{x}{4} = 8 \Rightarrow x = 8\times4 = 32$

(ii) $\frac{x}{7} = 8 \Rightarrow x = 8\times7 = 56$

(iii) $\frac{x}{12} = 8 \Rightarrow x = 8\times12 = 96$

(i) $\frac{x}{20} = 8 \Rightarrow x = 8\times20 = 160$

| ವರ್ಣದ್ರವ್ಯದ ಭಾಗ | 1 | 4 | 7 | 12 | 20 |
|---|---|---|---|---|---|
| ಆಧಾರ ದ್ರಾವಕದ ಭಾಗ | 8 | 32 | 56 | 96 | 160 |

**3. ಮೇಲಿನ ಪ್ರಶ್ನೆ 2 ರಲ್ಲಿ, 1 ಭಾಗ ಕೆಂಪು ವರ್ಣದ್ರವ್ಯಕ್ಕೆ 75 ಮಿ.ಲೀ. ಆಧಾರ ದ್ರಾವಕ ಬೇಕಾದರೆ, 1800 ಮಿ.ಲೀ. ಆಧಾರ ದ್ರಾವಕದೊಂದಿಗೆ ಮಿಶ್ರಣ ಮಾಡಬೇಕಾದ ಕೆಂಪು ವರ್ಣದ್ರವ್ಯವೆಷ್ಟು?**

**ಪರಿಹಾರ:**

ಆಧಾರ ದ್ರಾವಕದ ಭಾಗ $x$ ಆಗಿರಲಿ ಹಾಗೂ ವರ್ಣದ್ರವ್ಯದ ಭಾಗ $y$ ಆಗಿರಲಿ

ಮಿಶ್ರಣವು ನೇರ ಅನುಪಾತದಲ್ಲಿರಬೇಕು.

ಆದ್ದರಿಂದ, $\frac{x}{y} = k$ (k ಯು ಒಂದು ಸ್ಥಿರಾಂಕ)

$\Rightarrow \frac{x}{y} = \frac{75}{1} = 75$

$\frac{1800}{y} = 75 \Rightarrow 75y = 1800$

$\Rightarrow y = 24$ ಭಾಗ.

**4. ತಂಪು ಪಾನೀಯ ಕಾರ್ಖಾನೆಯೊಂದರಲ್ಲಿ ಒಂದು ಯಂತ್ರವು 6 ಗಂಟೆಗಳಲ್ಲಿ 840 ಸೀಸೆಗಳನ್ನು ತುಂಬುತ್ತದೆ. ಹಾಗಾದರೆ ಐದು ಗಂಟೆಗಳಲ್ಲಿ ಅದು ಎಷ್ಟು ಸೀಸೆಗಳನ್ನು ತುಂಬುತ್ತದೆ?**

**ಪರಿಹಾರ:**

ಸೀಸೆಗಳ ಸಂಖ್ಯೆ $x$ ಆಗಿರಲಿ ಹಾಗೂ ಸಮಯ $y$ ಆಗಿರಲಿ

ಇದು ನೇರ ಅನುಪಾತದಲ್ಲಿದ್ದರೆ,

$\frac{x}{y} = k$ (k ಯು ಒಂದು ಸ್ಥಿರಾಂಕ)

$\Rightarrow \frac{x}{y} = \frac{840}{6} = 140$

ಆದ್ದರಿಂದ, $\frac{x}{5} = 140 \Rightarrow x = 140\times5$

$\Rightarrow x = 700$

ಆದ್ದರಿಂದ 5 ಗಂಟೆಯಲ್ಲಿ 700 ಸೀಸೆಗಳನ್ನು ತುಂಬುತ್ತದೆ.

**5. ಒಂದು ಬ್ಯಾಕ್ಟೀರಿಯಾದ ಛಾಯಾಚಿತ್ರವನ್ನು 50,000 ಪಟ್ಟು ವರ್ಧಿಸಿದಾಗ ಅದು ಚಿತ್ರದಲ್ಲಿ ತೋರಿಸಿರುವಂತೆ 5 ಸೆಂ.ಮೀ.ನಉದ್ದವನ್ನು ಹೊಂದುವುದು. ಹಾಗಾದರೆ ಬ್ಯಾಕ್ಟೀರಿಯಾದ ನಿಜವಾದ ಉದ್ದವೆಷ್ಟು? ಛಾಯಾಚಿತ್ರವನ್ನು 20,000 ಪಟ್ಟು ವರ್ಧಿಸಿದಾಗ ಅದರ ವರ್ಧಿತ ಉದ್ದವೆಷ್ಟು?**



**ಪರಿಹಾರ:**

ಬ್ಯಾಕ್ಟೀರಿಯಾದ ವರ್ಧನೆ ಉದ್ದ $x$ ಆಗಿರಲಿ ಹಾಗೂ ಅದರ ಬ್ಯಾಕ್ಟೀರಿಯಾದ ನಿಜ ಉದ್ದ $y$ ಆಗಿರಲಿ

ಇದು ನೇರ ಅನುಪಾತದಲ್ಲಿದ್ದರೆ,

$\frac{x}{y} = k$ (k ಯು ಒಂದು ಸ್ಥಿರಾಂಕ)

(i) $\Rightarrow \frac{5}{y} = 50000$

$\Rightarrow y = \frac{5}{50000} = \frac{1}{10000} = \frac{1}{10^4} = 10^{-4}$

(ii) ವರ್ಧಿತ ಉದ್ದ ಮತ್ತು ವರ್ಧನೆಗಳು ನೇರ ಅನುಪಾತದಲ್ಲಿರುತ್ತದೆ.

ಆದ್ದರಿಂದ, $\frac{5}{50000} = \frac{x}{20000} \Rightarrow x = \frac{100000}{50000}$

$\Rightarrow x = 2$ ಸೆಂ.ಮೀ.

ಆದ್ದರಿಂದ ಛಾಯಾಚಿತ್ರವನ್ನು 20,000 ಪಟ್ಟು ವರ್ಧಿಸಿದಾಗ ಅದರ ವರ್ಧಿತ ಉದ್ದ 2 ಸೆಂ.ಮೀ.

**6. ಒಂದು ಹಡಗಿನ ಮಾದರಿಯಲ್ಲಿ ಪಟಸ್ತಂಭದ ಎತ್ತರವು 9 ಸೆಂ.ಮೀ. ಮತ್ತು ನಿಜವಾದ ಹಡಗಿನಲ್ಲಿ ಪಟಸ್ತಂಭದ ಎತ್ತರವು 12 ಮೀ. ಆಗಿದೆ. ಹಡಗಿನ ನಿಜವಾದ ಉದ್ದವು 28ಮೀ. ಆದರೆ, ಮಾದರಿ ಹಡಗಿನ ಉದ್ದವೆಷ್ಟು?**



**ಪರಿಹಾರ:**

ಮಾದರಿ ಹಡಗಿನ ಉದ್ದ $x$ ಆಗಿರಲಿ ನಿಜ ಹಡಗಿನ ಉದ್ದ $y$ ಆಗಿರಲಿ

ಇವು ನೇರ ಅನುಪಾತದಲ್ಲಿದೆ.

ಆದ್ದರಿಂದ, $\frac{x}{y} = k$ (k ಯು ಒಂದು ಸ್ಥಿರಾಂಕ)

$\Rightarrow \frac{9}{1200} = \frac{x}{2800}$

[12ಮೀ =1200ಸೆಂ.ಮೀ.ಮತ್ತು 28ಮೀ.= 2800ಸೆಂ.ಮೀ]

$\Rightarrow x = \frac{9\times2800}{1200} = \frac{252}{12} = 21$ಸೆಂ.ಮೀ.

**7. 2 ಕಿ.ಗ್ರಾಂ. ಸಕ್ಕರೆಯು $9\times10^6$ ಹರಳುಗಳನ್ನು ಹೊಂದಿದೆ. ಹಾಗಾದರೆ**

**(i) 5 ಕಿ. ಗ್ರಾಂ.ಸಕ್ಕರೆ, (ii) 1.2 ಕಿ.ಗ್ರಾಂ. ಸಕ್ಕರೆಯಲ್ಲಿರುವ ಹರಳುಗಳ ಸಂಖ್ಯೆ ಎಷ್ಟು?**

**ಪರಿಹಾರ:**

ಹರಳುಗಳ ಸಂಖ್ಯೆ $x$ ಆಗಿರಲಿ ಸಕ್ಕರೆಯ ತೂಕ $y$ ಆಗಿರಲಿ

ಇವು ನೇರ ಅನುಪಾತದಲ್ಲಿದೆ.

ಆದ್ದರಿಂದ, $\frac{x}{y}$ = k (k ಯು ಒಂದು ಸ್ಥಿರಾಂಕ)

$\Rightarrow \frac{9\times10^6}{2} = k$

**(i) 5 ಕಿ.ಗ್ರಾಂ.ಸಕ್ಕರೆ,**

$\Rightarrow \frac{9\times10^6}{2} = \frac{x}{5}$

$\Rightarrow x = \frac{9\times5\times10^6}{2} = 22.5\times10^6$

$\Rightarrow x = 2.25\times10^7$

**(ii) 1.2 ಕಿ.ಗ್ರಾಂ. ಸಕ್ಕರೆ**

$\Rightarrow \frac{9\times10^6}{2} = \frac{x}{1.2}$

$\Rightarrow x = \frac{9\times1.2\times10^6}{2} = 5.4\times10^6$

$\Rightarrow x = 5.4\times10^6$

**8. ರಶ್ಮಿಯು 18 ಕಿ.ಮೀ ದೂರದ ರಸ್ತೆಯನ್ನು 1 ಸೆಂ.ಮೀ. ದೂರ ಪ್ರಮಾಣ ಸೂಚಕದಿಂದ ಪ್ರತಿನಿಧಿಸಲಾಗಿರುವ ನಕಾಶೆಯನ್ನು ಹೊಂದಿರುವಳು. ಅವಳು ರಸ್ತೆಯ ಮೂಲಕ 72 ಕಿ.ಮೀ. ಕ್ರಮಿಸಿದರೆ, ನಕಾಶೆಯಲ್ಲಿ ಆಕೆ ಕ್ರಮಿಸಿದ ದೂರವೆಷ್ಟು?**

**ಪರಿಹಾರ:**

ನಕಾಶೆಯ ದೂರವು x ಮತ್ತು ನಿಜವಾದ ದೂರವು, y ಆಗಿರಲಿ.

ಆದ್ದರಿಂದ, $\frac{x}{y}$ = k (k ಯು ಒಂದು ಸ್ಥಿರಾಂಕ)

$\Rightarrow \frac{1}{18} = k$

$\Rightarrow \frac{x}{72} = \frac{1}{18}$

$\Rightarrow x = \frac{72}{18}$ ಸೆಂ.ಮೀ.

$\Rightarrow x = 4$ ಸೆಂ.ಮೀ.

ಆದ್ದರಿಂದ ನಕಾಶೆಯಲ್ಲಿ ಅವಳು ಕ್ರಮಿಸಿದ ದೂರ 4 ಸೆಂ.ಮೀ.

**9. 5 ಮೀ 60 ಸೆಂ.ಮೀ. ಎತ್ತರದ ಒಂದು ನೇರವಾದ ಕಂಬವು 3 ಮೀ 20 ಸೆಂ.ಮೀ. ಉದ್ದದ ನೆರಳನ್ನು ಉಂಟುಮಾಡುವುದು. ಇದೇ ಸಮಯದಲ್ಲಿ**

**(i) 10 ಮೀ. 50 ಸೆಂ.ಮೀ. ಎತ್ತರದ ಇನ್ನೊಂದು ಕಂಬವು ಉಂಟುಮಾಡುವ ನೆರಳಿನ ಉದ್ದ ಎಷ್ಟು?**

**(ii) 5ಮೀ.ಉದ್ದದ ನೆರಳನ್ನು ಉಂಟುಮಾಡುವ ಕಂಬದ ಎತ್ತರ ಎಷ್ಟು?**

**ಪರಿಹಾರ:**

ಕಂಬದ ಎತ್ತರವು $x$ ಮೀಟರ್ ಆಗಿರಲಿ. ನೆರಳಿನ ಉದ್ದ y ಮೀಟರ್ ಗಳಾಗಿರಲಿ.

ಆದ್ದರಿಂದ,

$\frac{560}{320} = \frac{7}{4}$ = k (k ಯು ಒಂದು ಸ್ಥಿರಾಂಕ)

(i) 10 ಮೀ. 50 ಸೆಂ.ಮೀ. ಎತ್ತರದ ಇನ್ನೊಂದು ಕಂಬವು ಉಂಟುಮಾಡುವ ನೆರಳಿನ ಉದ್ದ

$\frac{1050}{y} = \frac{7}{4} \Rightarrow y = \frac{1050\times4}{7}$

$\Rightarrow y = 150\times4 = 600$ಸೆಂ.ಮೀ = 6ಮೀ.

(ii) 5ಮೀ.ಉದ್ದದ ನೆರಳನ್ನು ಉಂಟುಮಾಡುವ ಕಂಬದ ಎತ್ತರ

$\frac{x}{500} = \frac{7}{4} \Rightarrow x = \frac{500\times7}{4} =$

$\Rightarrow x = 125\times7 = 875$ಸೆಂ.ಮೀ = 8.75ಮೀ.

**10. ಸರಕು ತುಂಬಿರುವ ಲಾರಿಯೊಂದು 14ಕಿ.ಮೀ. ದೂರವನ್ನು 25 ನಿಮಿಷಗಳಲ್ಲಿ ಕ್ರಮಿಸುವುದು. ಇದೇ ಜವದೊಂದಿಗೆ ಲಾರಿಯು, 5 ಗಂಟೆಗಳಲ್ಲಿ ಎಷ್ಟು ದೂರ ಕ್ರಮಿಸಬಲ್ಲದು?**

**ಪರಿಹಾರ:**

ಕ್ರಮಿಸಿದ ದೂರ $x$ ಆಗಿರಲಿ. ತೆಗೆದು ಕೊಂಡ ಸಮಯ y ಗಂಟೆಗಳು ಗಳಾಗಿರಲಿ.

ಆದ್ದರಿಂದ, $\frac{x}{y}$ = k (k ಯು ಒಂದು ಸ್ಥಿರಾಂಕ)

$= \frac{14}{25} = k$

$\Rightarrow \frac{x}{300} = \frac{14}{25}$ [1 ಗಂಟೆ = 60ನಿಮಿಷಗಳು]

$\Rightarrow x = \frac{14\times300}{25}$

$\Rightarrow x = 14\times12$ ಕಿ.ಮೀ.

$\Rightarrow x = 168$ ಕಿ.ಮೀ.

## ಅಭ್ಯಾಸ 4.2

**1. ಈ ಕೆಳಗಿನವುಗಳಲ್ಲಿ ಯಾವುವು ವಿಲೋಮ ಅನುಪಾತದಲ್ಲಿವೆ?**

**(i) ಒಂದು ಕೆಲಸಕ್ಕೆ ಬೇಕಾಗುವ ಕೆಲಸಗಾರರ ಸಂಖ್ಯೆ ಮತ್ತು ಕೆಲಸ ಮುಗಿಸಲು ಬೇಕಾಗುವ ಸಮಯ.**

**(ii) ಒಂದು ಪ್ರಯಾಣಕ್ಕೆ ತೆಗೆದುಕೊಳ್ಳುವ ಸಮಯ ಮತ್ತು ಏಕರೂಪ ಜವದೊಂದಿಗೆ ಚಲಿಸುವ ದೂರ.**

**(iii) ವ್ಯವಸಾಯ ಮಾಡಿರುವ ಭೂಮಿಯ ವಿಸ್ತೀರ್ಣ ಮತ್ತು ಬೆಳೆದ ಬೆಳೆ.**

**(iv) ಒಂದು ನಿರ್ದಿಷ್ಟ ಪ್ರಯಾಣಕ್ಕೆ ತೆಗೆದುಕೊಳ್ಳುವ ಸಮಯ ಮತ್ತು ವಾಹನದ ಜವ.**

**(v) ಒಂದು ರಾಷ್ಟ್ರದ ಜನಸಂಖ್ಯೆ ಮತ್ತು ಪ್ರತಿಯೊಬ್ಬನೂ ಹೊಂದಿರುವ ಭೂಮಿಯ ವಿಸ್ತೀರ್ಣ.**

**ಪರಿಹಾರ:**

– ವಿಲೋಮ ಅನುಪಾತ
– ನೇರ ಅನುಪಾತ
– ನೇರ ಅನುಪಾತ
– ವಿಲೋಮ ಅನುಪಾತ
– ವಿಲೋಮ ಅನುಪಾತ

**2. ಒಂದು ದೂರದರ್ಶನದಲ್ಲಿನ ಕ್ರೀಡಾ ಕಾರ್ಯಕ್ರಮದಲ್ಲಿ, ಬಹುಮಾನದ ಮೊತ್ತವಾದ ರೂ 1,00,000ಗಳನ್ನು ವಿಜಯಶಾಲಿಗಳಿಗೆ ಸಮವಾಗಿ ಹಂಚಬೇಕಾಗಿದೆ. ಕೆಳಗಿನ ಕೋಷ್ಟಕವನ್ನು ಪೂರ್ಣಗೊಳಿಸಿ ಮತ್ತು ಪ್ರತಿಯೊಬ್ಬ ವಿಜಯಶಾಲಿಗೆ ನೀಡಲಾಗುವ ಬಹುಮಾನದ ಮೊತ್ತವು, ವಿಜಯಶಾಲಿಗಳ ಸಂಖ್ಯೆಯೊಂದಿಗೆ ನೇರ ಅಥವಾ ವಿಲೋಮ ಅನುಪಾತದಲ್ಲಿದೆಯೇ? ಎಂಬುದನ್ನು ಕಂಡುಹಿಡಿಯಿರಿ.**

| ವಿಜಯಶಾಲಿಗಳ ಸಂಖ್ಯೆ | 1 | 2 | 4 | 5 | 8 | 10 | 20 |
|---|---|---|---|---|---|---|---|
| ಪ್ರತಿ ವಿಜಯಶಾಲಿಯ ಮೊತ್ತ (ರೂಗಳಲ್ಲಿ) | 1,00,000 | 50,000 | - | - | - | - | - |

**ಪರಿಹಾರ:**

ಬಹುಮಾನದ ಮೊತ್ತ $x$ ಹಾಗೂ ವಿಜಯಶಾಲಿಗಳ ಸಂಖ್ಯೆ y ಆಗಿರಲಿ

ಇಲ್ಲಿ, $1{,}00000 \times 1 = 50{,}000 \times 2$

ಆದ್ದರಿಂದ ವಿಜಯಶಾಲಿಗಳ ಸಂಖ್ಯೆ ಹಾಗೂ ಬಹುಮಾನದ ಮೊತ್ತ ವಿಲೋಮ ಅನುಪಾತದಲ್ಲಿರುತ್ತದೆ.

$xy = k$ [ k ಒಂದು ಸ್ಥಿರಾಂಕ ]

$100000 \times 1 = 100000 = k$

(i) $x \times 4 = 1{,}00000$

$\Rightarrow x = 25{,}000$

(ii) $x \times 5 = 1{,}00000$

$\Rightarrow x = 20{,}000$

(iii) $x \times 8 = 1{,}00000$

$\Rightarrow x = 12{,}500$

(iv) $x \times 10 = 1{,}00000$

$\Rightarrow x = 10{,}000$

(v) $x \times 20 = 1{,}00000$

$\Rightarrow x = 5{,}000$

| ವಿಜಯಶಾಲಿಗಳ ಸಂಖ್ಯೆ | 1 | 2 | 4 | 5 | 8 | 10 | 20 |
|---|---|---|---|---|---|---|---|
| ಪ್ರತಿ ವಿಜಯಶಾಲಿಯ ಮೊತ್ತ (ರೂಗಳಲ್ಲಿ) | 1,00,000 | 50,000 | 25,000 | 20,000 | 12,500 | 10,000 | 5,000 |

**3. ರೆಹಮಾನನು ಕಡ್ಡಿ (Spokes) ಗಳಿಂದ ಚಕ್ರವನ್ನು ಮಾಡುವನು. ಅವನು ಯಾವುದೇ ಅನುಕ್ರಮ ಜೋಡಿ ಕಡ್ಡಿಗಳ ನಡುವಿನ ಕೋನವು ಸಮವಾಗಿರುವಂತೆ ಅವುಗಳನ್ನು ಜೋಡಿಸಲು ಆಶಿಸುತ್ತಾನೆ. ಕೋಷ್ಟಕವನ್ನು ಪೂರ್ಣಗೊಳಿಸುವುದರ ಮೂಲಕ ಅವನಿಗೆ ಸಹಕರಿಸಿ.**



| ಕಡ್ಡಿಗಳ ಸಂಖ್ಯೆ | 4 | 6 | 8 | 10 | 12 |
|---|---|---|---|---|---|
| ಅನುಕ್ರಮ ಜೋಡಿ ಕಡ್ಡಿಗಳ ನಡುವಿನ ಕೋನ | $60^0$ | $90^0$ | | | |

**(i) ಅನುಕ್ರಮ ಜೋಡಿ ಕಡ್ಡಿಗಳು ಮತ್ತು ಕಡ್ಡಿಗಳ ಸಂಖ್ಯೆ ಉಂಟುಮಾಡುವ ಕೋನಗಳು ವಿಲೋಮ ಅನುಪಾತದಲ್ಲಿದೆಯೇ?**

**(ii) 15 ಕಡ್ಡಿಗಳಿರುವ ಚಕ್ರದ ಮೇಲಿರುವ ಅನುಕ್ರಮ ಕಡ್ಡಿಗಳ ನಡುವಿನ ಕೋನವನ್ನು ಲೆಕ್ಕಿಸಿ.**

**(iii) ಅನುಕ್ರಮ ಜೋಡಿ ಕಡ್ಡಿಗಳ ನಡುವಿನ ಕೋನವು 40° ಆಗಿದ್ದರೆ ಎಷ್ಟು ಕಡ್ಡಿಗಳು ಬೇಕಾಗುವುವು?**

**ಪರಿಹಾರ:**

ಕಡ್ಡಿಗಳ ಸಂಖ್ಯೆ $x$ ಆಗಿರಲಿ ಮತ್ತು ಅನುಕ್ರಮ ಕಡ್ಡಿಗಳ ನಡುವಿನ ಕೋನಗಳ ಅಳತೆ y ಆಗಿರಲಿ.

(i) ಇಲ್ಲಿ $4 \times 60^0 = 6 \times 90^0$

ಆದ್ದರಿಂದ,

ಅನುಕ್ರಮ ಜೋಡಿ ಕಡ್ಡಿಗಳು ಮತ್ತು ಕಡ್ಡಿಗಳ ಸಂಖ್ಯೆ ಉಂಟುಮಾಡುವ ಕೋನಗಳು ವಿಲೋಮ ಅನುಪಾತದಲ್ಲಿದೆ.

ಮತ್ತು $4 \times 60^0 = 6 \times 90^0 = 360^0 = k$

(ii) 15 ಕಡ್ಡಿಗಳಿರುವ ಚಕ್ರದ ಮೇಲಿರುವ ಅನುಕ್ರಮ ಕಡ್ಡಿಗಳ ನಡುವಿನ ಕೋನವನ್ನು ಲೆಕ್ಕಿಸಿ.

$xy = k$ [ k ಒಂದು ಸ್ಥಿರಾಂಕ ]

$\Rightarrow 15 \times y = 360^0$

$\Rightarrow \ y = \frac{360^0}{15} = 24^0$

(iii) $xy = k$ [ k ಒಂದು ಸ್ಥಿರಾಂಕ ]

$\Rightarrow x \times 40^0 = 360^0$

$\Rightarrow \ x = \frac{360^0}{40^0} = 9$

ಅನುಕ್ರಮ ಜೋಡಿ ಕಡ್ಡಿಗಳ ನಡುವಿನ ಕೋನವು $40°$ ಆಗಿದ್ದರೆ 9 ಕಡ್ಡಿಗಳು ಬೇಕು.

**ಕೋಷ್ಟಕ ಪೂರ್ಣಗೊಳಿಸಿದಾಗ,**

(a) $xy = k$ [ k ಒಂದು ಸ್ಥಿರಾಂಕ ]

$\Rightarrow 8 \times y = 360^0$

$\Rightarrow \ y = \frac{360^0}{8} = 45^0$

(b) $xy = k$ [ k ಒಂದು ಸ್ಥಿರಾಂಕ ]

$\Rightarrow 10 \times y = 360^0$

$\Rightarrow \ y = \frac{360^0}{10} = 36^0$

(c) $xy = k$ [ k ಒಂದು ಸ್ಥಿರಾಂಕ ]

$\Rightarrow 12 \times y = 360^0$

$\Rightarrow \ y = \frac{360^0}{12} = 30^0$

| ಕಡ್ಡಿಗಳ ಸಂಖ್ಯೆ | 4 | 6 | 8 | 10 | 12 |
|---|---|---|---|---|---|
| ಅನುಕ್ರಮ ಜೋಡಿ ಕಡ್ಡಿಗಳ ನಡುವಿನ ಕೋನ | $60^0$ | $90^0$ | $45^0$ | $36^0$ | $30^0$ |

**4. ಒಂದು ಪೊಟ್ಟಣದಲ್ಲಿರುವ ಮಿಠಾಯಿಯನ್ನು 24 ಮಕ್ಕಳಿಗೆ ಹಂಚಿದಾಗ ಪ್ರತಿಯೊಬ್ಬರಿಗೂ 5 ಮಿಠಾಯಿ ಸಿಗುವುದು. ಮಕ್ಕಳ ಸಂಖ್ಯೆಯನ್ನು 4 ಕಡಿಮೆ ಮಾಡಿದಾಗ ಪ್ರತಿಯೊಬ್ಬರಿಗೆ ಸಿಗುವ ಮಿಠಾಯಿಗಳು ಎಷ್ಟು?**

**ಪರಿಹಾರ:**

ಮಕ್ಕಳ ಸಂಖ್ಯೆ $x$ ಹಾಗೂ ಪ್ರತಿಯೊಬ್ಬರಿಗೂ ಸಿಗುವ ಮಿಠಾಯಿಗಳ ಸಂಖ್ಯೆ y ಆಗಿರಲಿ

ಇದು ವಿಲೋಮ ಅನುಪಾತದಲ್ಲಿರುತ್ತದೆ.

$xy = k$ [ k ಒಂದು ಸ್ಥಿರಾಂಕ ]

$24 \times 5 = 120 = k$

ಮಕ್ಕಳ ಸಂಖ್ಯೆ 4 ಕಡಿಮೆ ಮಾಡಿದಾಗ,

$24 - 4 = 20$

$xy = k$ [ k ಒಂದು ಸ್ಥಿರಾಂಕ ]

$20y = 120$

$\Rightarrow \ y = \frac{120}{20} = 6$

ಮಕ್ಕಳ ಸಂಖ್ಯೆಯನ್ನು 4 ಕಡಿಮೆ ಮಾಡಿದಾಗ ಪ್ರತಿಯೊಬ್ಬರಿಗೆ ಸಿಗುವ ಮಿಠಾಯಿಗಳು 6

**5. ಒಬ್ಬ ರೈತನು 20 ಪ್ರಾಣಿಗಳಿಗೆ 6ದಿನಕ್ಕೆ ಸಾಕಾಗುವಷ್ಟು ಆಹಾರವನ್ನು ಹೊಂದಿರುವನು. ಅವನ ಬಳಿ ಇನ್ನೂ 10 ಹೆಚ್ಚು ಪ್ರಾಣಿಗಳಿದ್ದರೆ ಆಹಾರವು ಎಷ್ಟು ದಿನಗಳಲ್ಲಿ ಮುಗಿಯುತ್ತದೆ?**

**ಪರಿಹಾರ:**

ಪ್ರಾಣಿಗಳ ಸಂಖ್ಯೆ $x$ ಹಾಗೂ ದಿನಗಳ ಸಂಖ್ಯೆ y ಆಗಿರಲಿ

ಇದು ವಿಲೋಮ ಅನುಪಾತದಲ್ಲಿರುತ್ತದೆ.

$xy = k$ [ k ಒಂದು ಸ್ಥಿರಾಂಕ ]

$20 \times 6 = 120 = k$

ಪ್ರಾಣಿಗಳ ಸಂಖ್ಯೆ 10 ಹೆಚ್ಚಾದರೆ, 20 + 10 = 30

$xy = k$ [ k ಒಂದು ಸ್ಥಿರಾಂಕ ]

$30y = 120$

$\Rightarrow \ y = \frac{120}{30} = 4$

ಅವನ ಬಳಿ ಇನ್ನೂ 10 ಹೆಚ್ಚು ಪ್ರಾಣಿಗಳಿದ್ದರೆ ಆಹಾರವು 4 ದಿನಗಳಲ್ಲಿ ಮುಗಿಯುತ್ತದೆ.

**6. ಜಸ್ಮಿಂದರ್‌ನ ಮನೆಯಲ್ಲಿರುವ ವಿದ್ಯುತ್ ತಂತಿಗಳನ್ನು 3 ಜನರು 4 ದಿನಗಳಲ್ಲಿ ಬದಲಾಯಿಸುವರೆಂದು ಗುತ್ತಿಗೆದಾರನು ಅಂದಾಜಿಸುತ್ತಾನೆ. ಮೂರು ಜನರ ಬದಲು ಅವನು 4 ಜನರನ್ನು ಬಳಸಿಕೊಂಡರೆ ಈ ಕೆಲಸವನ್ನು ಎಷ್ಟು ಸಮಯದಲ್ಲಿ ಮುಗಿಸುವರು?**

**ಪರಿಹಾರ:**

ಜನರ ಸಂಖ್ಯೆ = x ಆಗಿರಲಿ. ದಿನಗಳ ಸಂಖ್ಯೆ y ಎಂದಿರಲಿ.

ಇದು ವಿಲೋಮಾನುಪಾತದಲ್ಲಿದೆ.

ಆದ್ದರಿಂದ, $xy = k$

$3 \times 4 = 12 = k$

ಅವನು 4 ಜನರನ್ನು ಬಳಸಿದರೆ,

$xy = k$ [ k ಒಂದು ಸ್ಥಿರಾಂಕ ]

$4y = 12$

$\Rightarrow \ y = \frac{12}{4} = 3$

ಮೂರು ಜನರ ಬದಲು ಅವನು 4 ಜನರನ್ನು ಬಳಸಿಕೊಂಡರೆ ಈ ಕೆಲಸವನ್ನು 3 ದಿನಗಳಲ್ಲಿ ಮುಗಿಸುವರು.

**7. ಪ್ರತಿಯೊಂದು ಪೆಟ್ಟಿಗೆಯಲ್ಲಿ 12 ಸೀಸೆಗಳಿರುವಂತೆ 25 ಪೆಟ್ಟಿಗೆಗಳಲ್ಲಿ ಸೀಸೆಗಳನ್ನು ತುಂಬಿದ್ದಾರೆ. ಹಾಗಾದರೆ ಪ್ರತಿಯೊಂದು ಪೆಟ್ಟಿಗೆಯಲ್ಲಿ 20 ಸೀಸೆಗಳನ್ನು ತುಂಬಿದರೆ ಎಷ್ಟು ಪೆಟ್ಟಿಗೆಗಳು ತುಂಬುತ್ತವೆ?**



**ಪರಿಹಾರ:**

ಸೀಸೆಗಳ ಸಂಖ್ಯೆ $x$ ಹಾಗೂ ಪೆಟ್ಟಿಗೆಗಳ ಸಂಖ್ಯೆ y ಆಗಿರಲಿ

ಇದು ವಿಲೋಮ ಅನುಪಾತದಲ್ಲಿರುತ್ತದೆ.

$xy$ = k [ k ಒಂದು ಸ್ಥಿರಾಂಕ ]

$12 \times 25 = 300 = k$

ಪ್ರತಿ ಪೆಟ್ಟಿಗೆಯಲ್ಲಿ 20 ಸೀಸೆಗಳನ್ನು ತುಂಬಿದರೆ,

$xy$ = k [ k ಒಂದು ಸ್ಥಿರಾಂಕ ]

$20y = 300$

$\Rightarrow y = \frac{300}{20} = 15$

ಪ್ರತಿಯೊಂದು ಪೆಟ್ಟಿಗೆಯಲ್ಲಿ 20 ಸೀಸೆಗಳನ್ನು ತುಂಬಿದರೆ 15 ಪೆಟ್ಟಿಗೆಗಳು ತುಂಬುತ್ತವೆ.

**8. ಒಂದು ದತ್ತ ಸಂಖ್ಯೆಯ ವಸ್ತುಗಳನ್ನು ಉತ್ಪಾದಿಸಲು 42 ಯಂತ್ರಗಳಿಗೆ 63ದಿನಗಳು ಬೇಕಾಗುವುದು. ಇಷ್ಟೇ ಸಂಖ್ಯೆಯ ವಸ್ತುಗಳನ್ನು 54 ದಿನಗಳಲ್ಲಿ ಉತ್ಪಾದಿಸಲು ಎಷ್ಟು ಯಂತ್ರಗಳು ಬೇಕಾಗುವುದು?**

**ಪರಿಹಾರ:**

ಯಂತ್ರಗಳ ಸಂಖ್ಯೆ = x ಆಗಿರಲಿ. ದಿನಗಳ ಸಂಖ್ಯೆ y ಎಂದಿರಲಿ.

ಇದು ವಿಲೋಮಾನುಪಾತದಲ್ಲಿದೆ.

ಆದ್ದರಿಂದ, $xy = k$

$42 \times 63 = 2646 = k$

ದಿನಗಳ ಸಂಖ್ಯೆ 54 ಆದರೆ,

$xy$ = k [ k ಒಂದು ಸ್ಥಿರಾಂಕ ]

$x \times 54 = 2646$

$\Rightarrow x = \frac{2646}{54} = 49$

ಇಷ್ಟೇ ಸಂಖ್ಯೆಯ ವಸ್ತುಗಳನ್ನು 54 ದಿನಗಳಲ್ಲಿ ಉತ್ಪಾದಿಸಲು 49 ಯಂತ್ರಗಳು ಬೇಕಾಗುವುದು.

**9. ಒಂದು ಕಾರು ನಿರ್ದಿಷ್ಟ ದೂರವನ್ನು ಗಂಟೆಗೆ 60ಕಿ.ಮೀ ಜವದೊಂದಿಗೆ ಪ್ರಯಾಣಿಸಿ ನಿರ್ದಿಷ್ಟ ಸ್ಥಳವನ್ನು ತಲುಪಲು 2 ಗಂಟೆಗಳನ್ನು ತೆಗೆದುಕೊಳ್ಳುವುದು. ಗಂಟೆಗೆ 80 ಕಿ.ಮೀ ಜವದೊಂದಿಗೆ ಪ್ರಯಾಣಿಸಿದಾಗ ಅದು ತಲುಪಲು ಎಷ್ಟು ಸಮಯವನ್ನು ತೆಗೆದುಕೊಳ್ಳುತ್ತದೆ?**

**ಪರಿಹಾರ:**

ಕಾರಿನ ಜವ = x ಆಗಿರಲಿ. ತೆಗೆದುಕೊಂಡ ಸಮಯ y ಎಂದಿರಲಿ.

ಇದು ವಿಲೋಮಾನುಪಾತದಲ್ಲಿದೆ.

ಆದ್ದರಿಂದ, $xy = k$

$60 \times 2 = 120 = k$

ಕಾರಿನ ಜವ 80 ಕಿ.ಮೀ ಆದರೆ,

$xy$ = k [ k ಒಂದು ಸ್ಥಿರಾಂಕ ]

$80 \times y = 120$

$\Rightarrow y = \frac{120}{80} = 1\frac{1}{2}$ ಗಂಟೆಗಳು.

ಗಂಟೆಗೆ 80 ಕಿ.ಮೀ ಜವದೊಂದಿಗೆ ಪ್ರಯಾಣಿಸಿದಾಗ ಅದು ತಲುಪಲು $1\frac{1}{2}$ ಗಂಟೆ ಸಮಯವನ್ನು ತೆಗೆದುಕೊಳ್ಳುತ್ತದೆ?

**10. ಎರಡು ಜನರು ಒಂದು ಮನೆಯ ಕಿಟಕಿಗಳನ್ನು 3 ದಿನಗಳಲ್ಲಿ ಜೋಡಿಸುವರು.**

**(i) ಇವರಲ್ಲಿ ಒಬ್ಬನು ಕೆಲಸ ಪ್ರಾರಂಭವಾಗುವ ಮೊದಲೇ ಅನಾರೋಗ್ಯಪೀಡಿತನಾದನು. ಈಗ ಆ ಕೆಲಸ ಪೂರ್ಣಗೊಳಿಸಲು ಎಷ್ಟು ಸಮಯ ಬೇಕಾಗುತ್ತದೆ?**

**(ii) ಕಿಟಕಿಗಳನ್ನು ಒಂದು ದಿನದಲ್ಲಿ ಜೋಡಿಸಲು ಬೇಕಾಗುವ ಜನರ ಸಂಖ್ಯೆ ಎಷ್ಟು?**

**ಪರಿಹಾರ:**

ಜನರ ಸಂಖ್ಯೆ $x$ ಹಾಗೂ ದಿನಗಳ ಸಂಖ್ಯೆ y ಆಗಿರಲಿ

ಇದು ವಿಲೋಮ ಅನುಪಾತದಲ್ಲಿರುತ್ತದೆ.

$xy$ = k [ k ಒಂದು ಸ್ಥಿರಾಂಕ ]

$2 \times 3 = 6 = k$

(i) ಇವರಲ್ಲಿ ಒಬ್ಬನು ಕೆಲಸ ಪ್ರಾರಂಭವಾಗುವ ಮೊದಲೇ ಅನಾರೋಗ್ಯಪೀಡಿತನಾದರೆ

$xy$ = k [ k ಒಂದು ಸ್ಥಿರಾಂಕ ]

$1y = 6$

$\Rightarrow y = 6$

ಕಿಟಕಿಗಳನ್ನು ಜೋಡಿಸಲು 6 ದಿನಗಳು ಬೇಕು.

ಪ್ರತಿಯೊಂದು ಪೆಟ್ಟಿಗೆಯಲ್ಲಿ 20 ಸೀಸೆಗಳನ್ನು ತುಂಬಿದರೆ 15 ಪೆಟ್ಟಿಗೆಗಳು ತುಂಬುತ್ತವೆ.

(ii) ಕಿಟಕಿಗಳನ್ನು ಒಂದು ದಿನದಲ್ಲಿ ಜೋಡಿಸಲು ಬೇಕಾಗುವ ಜನರ ಸಂಖ್ಯೆ

$xy = k$ [ k ಒಂದು ಸ್ಥಿರಾಂಕ ]

$x \times 1 = 6$

$\Rightarrow x = 6$

6 ಜನರು ಬೇಕು

**11. ಒಂದು ಶಾಲೆಯು ಪ್ರತಿದಿನ 45 ನಿಮಿಷಗಳ 8 ಬೋಧನಾವಧಿಗಳನ್ನು ಹೊಂದಿದೆ. ಪ್ರತಿದಿನದ ಶಾಲಾವಧಿ ಸಮವೆಂದು ಊಹಿಸಿ, ಒಂದು ದಿನದಲ್ಲಿ 9 ಬೋಧನಾವಧಿಗಳಿದ್ದರೆ ಪ್ರತಿ ಬೋಧನಾವಧಿಯ ಸಮಯವೆಷ್ಟು?**

**ಪರಿಹಾರ:**

ಬೋಧನಾವಧಿ ಸಮಯ x ಆಗಿರಲಿ. ಅವಧಿಗಳ ಸಂಖ್ಯೆ y ಎಂದಿರಲಿ.

ಇದು ವಿಲೋಮಾನುಪಾತದಲ್ಲಿದೆ.

ಆದ್ದರಿಂದ, $xy = k$

$45 \times 8 = 360 = k$

ಅವಧಿಗಳ ಸಂಖ್ಯೆ 9 ಆದರೆ,

$xy = k$ [ k ಒಂದು ಸ್ಥಿರಾಂಕ ]

$x \times 9 = 360$

$\Rightarrow x = \frac{360}{9} = 40$ ನಿಮಿಷ

ಒಂದು ದಿನದಲ್ಲಿ 9 ಬೋಧನಾವಧಿಗಳಿದ್ದರೆ ಪ್ರತಿ ಬೋಧನಾವಧಿಯ ಸಮಯ 40 ನಿಮಿಷಗಳು.

YK

ಪರಿಷ್ಕೃತ ಪಠ್ಯ

# ಗಣಿತ

# Mathematics

## ಕನ್ನಡ ಮಾಧ್ಯಮ

## ಭಾಗ–1

## ಅಧ್ಯಾಯ 5

## ವರ್ಗಗಳು ಮತ್ತು ವರ್ಗಮೂಲಗಳು

## Sqares and Square roots

Copy rights reserved

Attractive Maths Solution

ಅಧ್ಯಾಯ 5

# ವರ್ಗಗಳು ಮತ್ತು ವರ್ಗಮೂಲಗಳು

**ಕಲಿಕಾಂಶಗಳು:**

- ಪೀಠಿಕೆ
- ವರ್ಗ ಸಂಖ್ಯೆಗಳ ಗುಣಲಕ್ಷಣಗಳು.
  - ❖ ತ್ರಿಕೋನೀಯ ಸಂಖ್ಯೆಗಳ ಸಂಕಲನ
  - ❖ ವರ್ಗ ಸಂಖ್ಯೆಗಳ ನಡುವಿನ ಸಂಖ್ಯೆಗಳು.
  - ❖ ಬೆಸ ಸಂಖ್ಯೆಗಳ ಸಂಕಲನ
  - ❖ ಕ್ರಮಾನುಗತ ಸ್ವಾಭಾವಿಕ ಸಂಖ್ಯೆಗಳ ಮೊತ್ತ.
  - ❖ ಎರಡು ಕ್ರಮಾನುಗತ ಸಮ ಅಥವಾ ಬೆಸ ಸ್ವಾಭಾವಿಕ ಸಂಖ್ಯೆಗಳ ಗುಣಲಬ್ಧ.
  - ❖ ಇನ್ನೂ ಕೆಲವು ವರ್ಗ ಸಂಖ್ಯೆಗಳ ಮಾದರಿ.
- ಸಂಖ್ಯೆಗಳ ವರ್ಗಗಳನ್ನು ಕಂಡುಹಿಡಿಯುವುದು.
  - ❖ ವರ್ಗಗಳಲ್ಲಿರುವ ಇತರೆ ಮಾದರಿಗಳು.
  - ❖ ಪೈಥಾಗೋರಸ್‌ನ ತ್ರಿವಳಿಗಳು.
- ವರ್ಗಮೂಲಗಳು
  - ❖ ವರ್ಗಮೂಲ ಕಂಡುಹಿಡಿಯುವುದು
    - ➢ ಪುನರಾವರ್ತಿತ ವ್ಯವಕಲನ ಮೂಲಕ
    - ➢ ಅವಿಭಾಜ್ಯ ಅಪವರ್ತನ ವಿಧಾನ
    - ➢ ಭಾಗಾಕಾರ ವಿಧಾನ
    - ➢ ಸಂಖ್ಯೆಯನ್ನು ಅಂದಾಜಿಸುವುದು.
- ದಶಮಾಂಶ ಸಂಖ್ಯೆಗಳ ವರ್ಗಮೂಲ
- ವರ್ಗಮೂಲವನ್ನು ಅಂದಾಜಿಸುವುದು

**ಪೀಠಿಕೆ:**

ಒಂದು ಸಂಖ್ಯೆಯನ್ನು ಅದೇ ಸಂಖ್ಯೆಯಿಂದ ಗುಣಿಸಿದಾಗ ಬರುವ ಗುಣಲಬ್ಧವನ್ನು ವರ್ಗಸಂಖ್ಯೆ ಎನ್ನುವರು.

ಪೂರ್ಣ ಸಂಖ್ಯೆಗಳ ವರ್ಗವು ಪೂರ್ಣ ಸಂಖ್ಯೆ ಆಗಿರುತ್ತದೆ.

ಉದಾಹರಣೆ:

$1 \times 1 = 1$

$2 \times 2 = 4$

$3 \times 3 = 9$............ ಇತ್ಯಾದಿ

ಇದರಿಂದ, 1, 4, 9, 16, 25, 36, 49, 64, 81, 100 . . . ಇವುಗಳು ಪೂರ್ಣ ವರ್ಗ ಸಂಖ್ಯೆಗಳು ಎಂದು ತಿಳಿಯಬಹುದು.

ಹಾಗಾದರೆ 32 ಒಂದು ಪೂರ್ಣ ವರ್ಗಸಂಖ್ಯೆಯೇ?

ಉತ್ತರ: ಅಲ್ಲ

ಏಕೆಂದರೆ

25 ಮತ್ತು 36 ಇವುಗಳು ಪೂರ್ಣವರ್ಗಸಂಖ್ಯೆಗಳು. ಆದ್ದರಿಂದ 5 ಮತ್ತು 6 ಇವುಗಳ ವರ್ಗಮೂಲಗಳು. ಇಲ್ಲಿ 5 ಮತ್ತು 6ರ ಮಧ್ಯ ಯಾವುದೇ ಪೂರ್ಣ ಸಂಖ್ಯೆ ಇಲ್ಲದಿರುವುದರಿಂದ 32 ಒಂದು ಪೂರ್ಣ ವರ್ಗ ಸಂಖ್ಯೆ ಆಗಲು ಸಾಧ್ಯವಿಲ್ಲ.

**ವರ್ಗಸಂಖ್ಯೆಗಳ ಗುಣಲಕ್ಷಣಗಳು:**

| ಸಂಖ್ಯೆ | ವರ್ಗ | ಸಂಖ್ಯೆ | ವರ್ಗ | ಸಂಖ್ಯೆ | ವರ್ಗ |
|---|---|---|---|---|---|
| 1 | 1 | 11 | 121 | 21 | 441 |
| 2 | 4 | 12 | 144 | 22 | 484 |
| 3 | 9 | 13 | 169 | 23 | 529 |
| 4 | 16 | 14 | 196 | 24 | 576 |
| 5 | 25 | 15 | 225 | 25 | 625 |
| 6 | 36 | 16 | 256 | 26 | 676 |
| 7 | 49 | 17 | 289 | 27 | 729 |
| 8 | 64 | 18 | 324 | 28 | 784 |
| 9 | 81 | 19 | 361 | 29 | 841 |
| 10 | 100 | 20 | 400 | 30 | 900 |

- ಯಾವುದೇ ವರ್ಗ ಸಂಖ್ಯೆಯ ಬಿಡಿಸ್ಥಾನದಲ್ಲಿ 2, 3, 7, 8 ಈ ಅಂಕಿಗಳು ಬರುವುದಿಲ್ಲ.
- ಒಂದು ಸಂಖ್ಯೆಯ ಬಿಡಿಸ್ಥಾನದಲ್ಲಿ 0, 1, 4, 5, 6, 9 ಈ ಅಂಕಿಗಳಿದ್ದರೆ ಅದು ಪೂರ್ಣ್ ವರ್ಗಸಂಖ್ಯೆ ಆಗಿರಲೂ ಬಹುದು ಆದರೆ ಆಗಲೇ ಬೇಕೆಂದಿಲ್ಲ.
- ಯಾವುದೇ ಒಂದು ಸಂಖ್ಯೆಯ ಬಿಡಿಸ್ಥಾನದಲ್ಲಿ 1 ಆಥವಾ 9 ಇದ್ದರೆ ಅದರ ವರ್ಗದ ಬಿಡಿಸ್ಥಾನದಲ್ಲಿ 1 ಬರುತ್ತದೆ.
- ಯಾವುದೇ ಒಂದು ಸಂಖ್ಯೆಯ ಬಿಡಿಸ್ಥಾನದಲ್ಲಿ 4 ಅಥವಾ 6 ಇದ್ದರೆ ಅದರ ವರ್ಗದ ಬಿಡಿಸ್ಥಾನದಲ್ಲಿ 6 ಬರುತ್ತದೆ.
- ಯಾವುದೇ ಒಂದು ಸಂಖ್ಯೆಯ ಬಿಡಿಸ್ಥಾನದಲ್ಲಿ 3 ಅಥವಾ 7 ಇದ್ದರೆ ಅದರ ವರ್ಗದ ಬಿಡಿಸ್ಥಾನದಲ್ಲಿ 9 ಬರುತ್ತದೆ.
- ಯಾವುದೇ ಒಂದು ಸಂಖ್ಯೆಯ ಬಿಡಿಸ್ಥಾನದಲ್ಲಿ 2 ಅಥವಾ 8 ಇದ್ದರೆ ಅದರ ವರ್ಗದ ಬಿಡಿಸ್ಥಾನದಲ್ಲಿ 4 ಬರುತ್ತದೆ.
- ಯಾವುದೇ ಸಂಖ್ಯೆಯ ಬಿಡಿಸ್ಥಾನದಲ್ಲಿ 5 ಬಂದರೆ ಅದರ ವರ್ಗದ ಬಿಡಿಸ್ಥಾನದಲ್ಲಿ 5 ಬರುತ್ತದೆ.

- ಯಾವುದೇ ಸಂಖ್ಯೆಯ ಬಿಡಿಸ್ಥಾನದಲ್ಲಿ 0 ಬಂದರೆ ಅದರ ವರ್ಗದ ಬಿಡಿಸ್ಥಾನದಲ್ಲಿ 0 ಬರುತ್ತದೆ.

$10^2 = 100$

$100^2 = 10000$

$1000^2 = 1000000$

ಇವಗಳನ್ನು ಗಮನಿಸಿದಾಗ,

ಯಾವುದೇ ಒಂದು ಸಂಖ್ಯೆಯ ಕೊನೆಯಲ್ಲಿ 'n' ಸಂಖ್ಯೆಯಷ್ಟು ಸೊನ್ನೆಗಳಿದ್ದರೆ, ಅದರ ವರ್ಗದ ಕೊನೆಯಲ್ಲಿ '2n' ಸಂಖ್ಯೆಯಷ್ಟು ಸೊನ್ನೆಗಳಿರುತ್ತವೆ.

**ತ್ರಿಕೋನೀಯ ಸಂಖ್ಯೆಗಳ ಸಂಕಲನ:**

ಒಂದು ಸಂಖ್ಯೆಯಷ್ಟು ಚುಕ್ಕಿಗಳನ್ನು ತ್ರಿಭುಜಾಕಾರದಲ್ಲಿ ಜೋಡಿಸಲು ಸಾಧ್ಯವಾದರೆ ಆ ಸಂಖ್ಯೆಯನ್ನು ತ್ರಿಕೋನೀಯ ಸಂಖ್ಯೆ ಎನ್ನವರು.

ಮೊದಲ ತ್ರಿಕೋನ ಸಂಖ್ಯೆ 1 ಆಗಿದೆ.




1, 3, 6, 10, 15, 21 ... ಇವು ತ್ರಿಕೋನೀಯ ಸಂಖ್ಯೆಗಳಾಗಿವೆ.

**ಯಾವುದೇ ಎರಡು ಕ್ರಮಾನುಗತ ತ್ರಿಕೋನೀಯ ಸಂಖ್ಯೆಗಳ ಮೊತ್ತವು ಒಂದು ಪೂರ್ಣ ವರ್ಗ ಸಂಖ್ಯೆ ಆಗಿರುತ್ತದೆ.**

ಉದಾಹರಣೆ:

$1 + 3 = 4$

$3 + 6 = 9$

$6 + 10 = 16$

$10 + 15 = 25$

**ಎರಡು ಕ್ರಮಾನುಗತ ವರ್ಗಸಂಖ್ಯೆಗಳ ನಡುವಿನ ಸಂಖ್ಯೆಗಳು:**

$n^2$ ಮತ್ತು $(n+1)^2$ ಗಳ ಮಧ್ಯೆ ಪೂರ್ಣ ವರ್ಗ ಅಲ್ಲದ 2n ಸಂಖ್ಯೆಗಳಿರುತ್ತವೆ.

ಉದಾಹರಣೆ:

$5^2$ ಮತ್ತು $6^2$ ಇವುಗಳ ಮಧ್ಯೆ $2\times5 = 10$ ಪೂರ್ಣ ವರ್ಗವಲ್ಲದ ಸಂಖ್ಯೆಗಳಿವೆ.

**25** – 26,27,28,29,30,31,32,33,34,35 – **36**

ಇಲ್ಲಿ 25 ಮತ್ತು 36 ರ ಮಧ್ಯೆ 10 ಸಂಖ್ಯೆಗಳಿದ್ದು, ಅವು ಪೂರ್ಣವರ್ಗವಾಗಿಲ್ಲ.

**ಬೆಸ ಸಂಖ್ಯೆಗಳ ಸಂಕಲನ:**




ಮೇಲಿನ ಕೋಷ್ಟಕದಿಂದ ತಿಳಿದು ಬರುವುದೇನೆಂದರೆ ಮೊದಲ 1 ಬೆಸ ಸಂಖ್ಯೆ ಮೊತ್ತ $1^2 = 1$, ಮೊದಲ 2 ಬೆಸ ಸಂಖ್ಯೆಗಳ ಮೊತ್ತ $= 2^2 = 4$ ... ಹೀಗೆ ಮೊದಲ

**n ಬೆಸ ಸಂಖ್ಯೆಗಳ ಮೊತ್ತ = $n^2$ ಆಗಿರುತ್ತದೆ.**

ಅಂದರೆ $n^2$ ಇದು 1ರಿಂದ ಕ್ರಮಾನುಗತ n ಬೆಸ ಸಂಖ್ಯೆಗಳ ಮೊತ್ತವಾಗಿರುತ್ತದೆ.

36 ರಿಂದ ಕ್ರಮಾನುಗತ ಬೆಸ ಸಂಖ್ಯೆಗಳನ್ನು ಕಳೆಯುತ್ತಾ ಹೋದಾಗ,

| | |
|---|---|
| $36 - 1 = 35$<br>$35 - 3 = 32$<br>$32 - 5 = 27$<br>$27 - 7 = 20$<br>$20 - 9 = 11$<br>$11 - 11 = 0$ | ಈ ರೀತಿ ಕಳೆದಾಗ ಅಂತಿಮವಾಗಿ ಸೊನ್ನೆ ದೊರೆತರೆ ಆ ಸಂಖ್ಯೆಯು ಪೂರ್ಣ ವರ್ಗ ಸಂಖ್ಯೆ ಆಗಿರುತ್ತದೆ. ಇದೇ ರೀತಿ ಯಾವುದೇ ಪೂರ್ಣವರ್ಗವಲ್ಲದ ಸಂಖ್ಯೆಯ ಕೊನೆಯಲ್ಲಿ ಸೊನ್ನೆ ಬರಲು ಸಾಧ್ಯವಿಲ್ಲ |

**ಕ್ರಮಾನುಗತ ಸ್ವಾಭಾವಿಕ ಸಂಖ್ಯೆಗಳ ಮೊತ್ತ:**

$3^2 = 9 \Rightarrow 4 + 5$

ಇಲ್ಲಿ ಮೊದಲ ಸಂಖ್ಯೆ $= \frac{3^2-1}{2}$

ಎರಡನೇ ಸಂಖ್ಯೆ $= \frac{3^2+1}{2}$

ಹೀಗೆಯೇ, ಯಾವುದೇ ಬೆಸ ಸಂಖ್ಯೆ ವರ್ಗವನ್ನು ಎರಡು ಕ್ರಮಾನುಗತ ಸಂಖ್ಯೆಗಳ ಮೊತ್ತವನ್ನಾಗಿ ಸೂಚಿಸಬಹುದು. ಆ ಸಂಖ್ಯೆಗಳು ಈ ರೀತಿ ಸೂಚಿಸಬಹುದು.

**n – ಒಂದು ಬೆಸ ಸಂಖ್ಯೆ ಆಗಿದ್ದರೆ, ಅದರ ವರ್ಗ $n^2$, $\left[\frac{n^2-1}{2}, \frac{n^2+1}{2}\right]$ ಈ ಎರಡು ಸಂಖ್ಯೆಗಳ ಮೊತ್ತವಾಗಿರುತ್ತದೆ.**

**ಎರಡು ಕ್ರಮಾನುಗತ ಸಮ ಅಥವಾ ಬೆಸ ಸ್ವಾಭಾವಿಕ ಸಂಖ್ಯೆಗಳ ಗುಣಲಬ್ಧ:**

ಇವುಗಳನ್ನು ಗಮನಿಸಿ,

$11 \times 13 = 143 = (12 + 1)(12 - 1) = 12^2 - 1$

$14 \times 16 = 224 = (15 + 1)(15 - 1) = 15^2 - 1$

$28 \times 30 = 840 = (29 + 1)(29 - 1) = 29^2 - 1$

$\Rightarrow (a + 1)(a - 1) = a^2 - 1$

**ಇನ್ನೂ ಕೆಲವು ವರ್ಗ ಸಂಖ್ಯೆಗಳ ಮಾದರಿಗಳು:**

$1^2 \rightarrow 1$

$11^2 \rightarrow 1\ 2\ 1$

$111^2 \rightarrow 1\ 2\ 3\ 2\ 1$

$1111^2 \rightarrow 1\ 2\ 3\ 4\ 3\ 2\ 1$

$11111^2 \rightarrow 1\ 2\ 3\ 4\ 5\ 4\ 3\ 2\ 1$

$111111^2 \rightarrow 1\ 2\ 3\ 4\ 5\ 6\ 5\ 4\ 3\ 2\ 1$

$1111111^2 \rightarrow 1\ 2\ 3\ 4\ 5\ 6\ 7\ 6\ 5\ 4\ 3\ 2\ 1$

$11111111^2 \rightarrow 1\ 2\ 3\ 4\ 5\ 6\ 7\ 8\ 7\ 6\ 5\ 4\ 3\ 2\ 1$

$7^2 \rightarrow 49$

$67^2 \rightarrow 4489$

$667^2 \rightarrow 444889$

$6667^2 \rightarrow 44448889$

$66667^2 \rightarrow 4444488889$

$666667^2 \rightarrow 444444888889$

$6666667^2 \rightarrow 44444448888889$

$66666667^2 \rightarrow 4444444488888889$

$666666667^2 \rightarrow 444444444888888889$

$6666666667^2 \rightarrow 44444444448888888889$

**ಸಂಖ್ಯೆಗಳ ವರ್ಗಗಳನ್ನು ಕಂಡುಹಿಡಿಯುವುದು:**

**ಉದಾಹರಣೆ 1: ಗುಣಾಕಾರ ಮಾಡದೆ ಈ ಕೆಳಗಿನ ಸಂಖ್ಯೆಗಳ ವರ್ಗವನ್ನು ಕಂಡುಹಿಡಿಯಿರಿ.**

**(i) 39 (ii) 42**

**(i) 39**

$39^2 = (30 + 9)^2$

$= 30(30 + 9) + 9(30 + 9)$

$= 900 + 270 + 270 + 81$

$= 1521$

**(ii) 42**

$42^2 = (40 + 2)^2$

$= 40(40 + 2) + 2(40 + 2)$

$= 1600 + 80 + 80 + 4$

$= 1764$

**ವರ್ಗದಲ್ಲಿರುವ ಇತರೆ ಮಾದರಿಗಳು:**

ಈ ಕೆಳಗಿನವುಗಳನ್ನು ಗಮನಿಸಿ

$25^2 = 2 \times 3$ ನೂರುಗಳು $+ 25 = 625$

$35^2 = 3 \times 4$ ನೂರುಗಳು $+ 25 = 1225$

$45^2 = 4 \times 5$ ನೂರುಗಳು $+ 25 = 2025$

$125^2 = 12 \times 13$ ನೂರುಗಳು $+ 25 = 15625$

**$a5^2 = a \times (a + 1)$ ನೂರುಗಳು $+ 25$**

**ಪೈಥಾಗೊರಸ್‌ನ ತ್ರಿವಳಿಗಳು:**

3, 4, 5 ಇದು ಪೈಥಾಗೊರಸ್‌ನ ತ್ರಿವಳಿ ಏಕೆಂದರೆ $3^2 + 4^2 = 5^2$ ಆಗಿರುತ್ತದೆ.

ಇದೇ ರೀತಿ, 6, 8, 10; 5, 12, 13 ಇವುಗಳು ಪೈಥಾಗೊರಸ್ ತ್ರಿವಳಿಗಳು.

**ಯಾವುದೇ ಸ್ವಾಭಾವಿಕ ಸಂಖ್ಯೆ $m > 1$ ಆದಾಗ,**

**$(2m)^2 + (m^2 - 1)^2 = (m^2 + 1)^2$**

**ಇಲ್ಲಿ $2m$, $(m^2 - 1)$ $(m^2 + 1)$ ಗಳು ಪೈಥಾಗೊರಸ್‌ನ ತ್ರಿವಳಿಗಳು.**

**ಉದಾಹರಣೆ 2:ಚಿಕ್ಕ ಸಂಖ್ಯೆ 8 ನ್ನು ಹೊಂದಿರುವ ಪೈಥಾಗೊರಸ್‌ನ ತ್ರಿವಳಿಗಳನ್ನು ಬರೆಯಿರಿ.**

$2m = 8$

$m = \frac{8}{2} = 4$

$m^2 - 1 = 4^2 - 1 = 16 - 1 = 15$

$m^2 + 1 = 4^2 + 1 = 16 + 1 = 17$

$2m$ , $(m^2 - 1)$, $(m + 1)^2$ ಗಳು ಪೈಥಾಗೊರಸ್‌ನ ತ್ರಿವಳಿಗಳು

$\Rightarrow$ 8, 15, 17 ಇದು 8 ಅತ್ಯಂತ ಚಿಕ್ಕ ಸಂಖ್ಯೆ ಆಗಿರುವ ಪೈಥಾಗೊರಸ್‌ನ ತ್ರಿವಳಿಗಳು.

**ಉದಾಹರಣೆ 3: ಒಂದು ಸಂಖ್ಯೆ 12 ಆಗಿರುವ ಪೈಥಾಗೊರಸ್‌ನ ತ್ರಿವಳಿಗಳನ್ನು ಕಂಡುಹಿಡಿಯಿರಿ.**

$2m = 12$ ಆದರೆ, $m = 6$

$m^2 - 1 = 6^2 - 1 = 36 - 1 = 35$

$m^2 + 1 = 6^2 + 1 = 36 + 1 = 37$

ಆದ್ದರಿಂದ 12, 35, 37 ನಮಗೆ ಬೇಕಾದ ತ್ರಿವಳಿಗಳು.

**ವರ್ಗಮೂಲ:**

$12^2 = 144$

ಇಲ್ಲಿ 144 ವರ್ಗ ಸಂಖ್ಯೆಯಾಗಿದ್ದರೆ, 12 ನ್ನು 144 ರ ವರ್ಗಮೂಲ ಎನ್ನುವರು.

ಇಲ್ಲಿ $(-12)^2 = 144$ ಆಗುತ್ತದೆ. ಆದ್ದರಿಂದ $-12$ ಸಹ 144 ರ ವರ್ಗಮೂಲವಾಗಿರುತ್ತದೆ.

ಇದೇ ರೀತಿ,

25 ರ ವರ್ಗಮೂಲ $= +5$ ಮತ್ತ $-5$ ಆಗಿರುತ್ತದೆ.

ಇಲ್ಲಿ ನಾವು ಧನಾತ್ಮಕ ವರ್ಗಮೂಲವನ್ನು ಮಾತ್ರ ತೆಗೆದುಕೊಳ್ಳುತ್ತೇವೆ.

ಧನಾತ್ಮಕ ವರ್ಗಮೂಲವನ್ನು $\sqrt{}$ ಚಿಹ್ನೆಯಿಂದ ಸೂಚಿಸುತ್ತೇವೆ.

ಉದಾಹರಣೆ: $\sqrt{36} = 6$; $\sqrt{196} = 14$

**ವರ್ಗಮೂಲ ಕಂಡುಹಿಡಿಯುವುದು:**

**ಪುನರಾವರ್ತಿತ ವ್ಯವಕಲನ ಮೂಲಕ ವರ್ಗಮೂಲ ಕಂಡುಹಿಡಿಯುವುದು:**

ಉದಾಹರಣೆ:

| **121 – 1 = 120** | **85 – 13 = 72** |
|---|---|
| **120 – 3 = 117** | 72 – 15 = 57 |
| **117 – 5 = 112** | 57 – 17 = 40 |
| **112 – 7 = 105** | 40 – 19 = 21 |
| **105 – 9 = 96** | 21 – 21 = 0 |
| **96 – 11 = 85** | |

ಇಲ್ಲಿ ಒಟ್ಟು 11 ಕ್ರಮಾಗತ ಬೆಸ ಸಂಖ್ಯೆಗಳನ್ನು ಕಳೆದಾಗ 0 ಬಂದಿದೆ.

ಆದ್ದರಿಂದ $\sqrt{121} = 11$

ಆದರೆ ಈ ವಿಧಾನ ಅತ್ಯಂತ ದೀರ್ಘ ವಿಧಾನ ಆಗಿರುವುದರಿಂದ ದೊಡ್ಡ ಸಂಖ್ಯೆಗಳ ವರ್ಗಮೂಲ ಕಂಡುಹಿಡಿಯಲು ತುಂಬಾ ಸಮಯ ಬೇಕಾಗುತ್ತದೆ.

**ಅಪವರ್ತನ ವಿಧಾನದಿಂದ ವರ್ಗಮೂಲ ಕಂಡುಹಿಡಿಯುವುದು:**

**ಉದಾಹರಣೆ 4: 6400 ರ ವರ್ಗಮೂಲವನ್ನು ಅಪವರ್ತನ ವಿಧಾನದಿಂದ ಕಂಡುಹಿಡಿಯಿರಿ.**

ಇಲ್ಲಿ ದತ್ತ ಸಂಖ್ಯೆಯನ್ನು ಅವಿಭಾಜ್ಯ ಸಂಖ್ಯೆಗಳಿಂದ ಭಾಗಿಸುತ್ತಾ ಹೋಗುತ್ತೇವೆ.

| **2** | **6400** |
|---|---|
| **2** | 3200 |
| **2** | 1600 |
| **2** | 800 |
| **2** | 400 |
| **2** | 200 |
| **2** | 100 |
| **2** | 50 |
| **5** | 25 |
| | 5 |

6400

$= 2\times2\times2\times2\times2\times2$

$\times2\times2\times5\times5$

$= \overline{2\times2}\times\overline{2\times2}\times\overline{2\times2}\times$

$\overline{2\times2}\times\overline{5\times5}$

$\sqrt{6400} = 2\times2\times2\times2\times5$

$\sqrt{6400} = 80$

**ಉದಾಹರಣೆ 5: 90 ಪೂರ್ಣ ವರ್ಗವೇ?**

| **2** | **90** |
|---|---|
| **3** | 45 |
| **3** | 15 |
| **5** | 5 |
| | 1 |

ಇಲ್ಲಿ 90ರ ಅಪವರ್ತನಗಳಲ್ಲಿ 2 ಮತ್ತು 5 ಜೋಡಿಗಳನ್ನು ಹೊಂದಿಲ್ಲ. ಆದ್ದರಿಂದ 90 ಪೂರ್ಣ ವರ್ಗ ಅಲ್ಲ.

**ಉದಾಹರಣೆ 6: 2352 ಪೂರ್ಣ ವರ್ಗವೇ?ಇಲ್ಲವಾದರೆ ಅದರ ಅಪವರ್ತ್ಯಗಳಲ್ಲಿ ಕನಿಷ್ಠ ಪೂರ್ಣ ವರ್ಗ ಸಂಖ್ಯೆಯನ್ನು ಕಂಡುಹಿಡಿಯಿರಿ ಮತ್ತು ಅದರ ವರ್ಗಮೂಲವನ್ನು ಕಂಡುಹಿಡಿಯಿರಿ.**

| **2** | **2352** |
|---|---|
| **2** | 1176 |
| **2** | 0588 |
| **2** | 0294 |
| **3** | 0147 |
| **7** | 0049 |
| **7** | 0007 |
| | 0001 |

2352

$= 2\times2\times2\times2\times3\times7\times7$

ಇಲ್ಲಿ 3 ಕ್ಕೆ ಜೋಡಿ ಇಲ್ಲ.

ಆದ್ದರಿಂದ ಇದು ಪೂರ್ಣವರ್ಗ ಅಲ್ಲ.

3ರಿಂದ ಗುಣಿಸಿ ಜೋಡಿ ಮಾಡಿದರೆ ಅದು ಪೂರ್ಣ ವರ್ಗವಾಗುತ್ತದೆ.

$2352\times3 = 2\times2\times2\times2\times3\times7\times7\times3$

7056 ಒಂದು ಪೂರ್ಣ ವರ್ಗ ಸಂಖ್ಯೆ

$7056 = \overline{2\times2}\times\overline{2\times2}\times\overline{3\times3}\times\overline{7\times7}$

$\sqrt{7056} = 2\times2\times3\times7$

$\sqrt{7056} = 84$

**ಉದಾಹರಣೆ 7: 9408 ನ್ನು ಯಾವ ಕನಿಷ್ಠ ಸಂಖ್ಯೆಯಿಂದ ಭಾಗಿಸಿದರೆ ಭಾಗಲಬ್ಧ ಒಂದು ಪೂರ್ಣ ವರ್ಗವಾಗುವುದು. ಆ ಭಾಗಲಬ್ಧದ ವರ್ಗಮೂಲವನ್ನು ಕಂಡುಹಿಡಿಯಿರಿ.**

| **2** | **9408** |
|---|---|
| **2** | 4704 |
| **2** | 2352 |
| **2** | 1176 |
| **2** | 0588 |
| **2** | 0294 |
| **3** | 0147 |
| **7** | 0049 |
| **7** | 0007 |
| **7** | 0001 |

9408

$= 2\times2\times2\times2\times2\times2\times3$

$\times7\times7$

ಇಲ್ಲಿ 3 ಕ್ಕೆ ಜೋಡಿ ಇಲ್ಲ.

ಆದ್ದರಿಂದ ಇದು ಪೂರ್ಣವರ್ಗ ಅಲ್ಲ.

3ರಿಂದ ಭಾಗಿಸಿದಾಗ ಬರುವ ಸಂಖ್ಯೆ ಪೂರ್ಣ ವರ್ಗವಾಗುತ್ತದೆ.

$9408 \div 3 = 2\times2\times2\times2\times2\times2\times7\times7$

$= 3136$

3136 ಒಂದು ಪೂರ್ಣ ವರ್ಗ ಸಂಖ್ಯೆ.

ಆದ್ದರಿಂದ 9408 ಪೂರ್ಣವರ್ಗವಾಗಲು ಭಾಗಿಸಬೇಕಾದ ಕನಿಷ್ಠ ಸಂಖ್ಯೆ 3

$3236 = \overline{2\times2}\times\overline{2\times2}\times\overline{2\times2}\times\overline{7\times7}$

$\sqrt{3136} = 2\times2\times2\times7$

$\sqrt{3136} = 56$

**ಉದಾಹರಣೆ 8: 6, 9, 15 ರಿಂದ ಭಾಗವಾಗುವ ಕನಿಷ್ಠ ವರ್ಗ ಸಂಖ್ಯೆಯನ್ನು ಕಂಡುಹಿಡಿಯಿರಿ.**

6,9,15 ರ ಲ.ಸಾ.ಅ.ವನ್ನು ಮೊದಲ ಹಂತದಲ್ಲಿ ಕಂಡುಹಿಡಯಬೇಕು.

| | 6 | 9 | 15 |
|---|---|---|---|
| 2 | 3 | 9 | 15 |
| 3 | 1 | 3 | 5 |
| 3 | 1 | 1 | 5 |
| 5 | 1 | 1 | 1 |

ಲ.ಸಾ.ಅ. $= 2\times3\times3\times5 = 90$

ಇಲ್ಲಿ 90ರ ಅಪವರ್ತನಗಳಲ್ಲಿ 2 ಮತ್ತು 5 ಕ್ಕೆ ಜೋಡಿ ಇಲ್ಲ. ಆದ್ದರಿಂದ 90ನ್ನು ಪೂರ್ಣವರ್ಗ ಮಾಡಲು ಅವುಗಳಿಗೆ ಜೋಡಿ ಮಾಡಬೇಕು.

ಆದ್ದರಿಂದ $2 \times 5 = 10$ ರಿಂದ 90ಕ್ಕೆ ಗುಣಿಸಬೇಕು.

$90 \times 10 = 900$

ಆದ್ದರಿಂದ 900 6,9 ಮತ್ತು 15ರಿಂದ ಭಾಗವಾಗುವ ಕನಿಷ್ಠ ವರ್ಗ ಸಂಖ್ಯೆ.

**ಭಾಗಾಕಾರ ವಿಧಾನದಿಂದ ವರ್ಗಮೂಲ ಕಂಡುಹಿಡಿಯುವುದು.**

4096ರ ವರ್ಗಮೂಲವನ್ನು ಅಪವರ್ತನ ವಿಧಾನದಿಂದ ಕಂಡುಹಿಡಿಯಿರಿ.

| | | |
|---|---|---|
| 6 | $\overline{40}$ $\overline{96}$ | 64 |
| +6 | 36 ↓ | |
| 124 | 04 96 | |
| | 04 96 | |
| | 0 | |

$\sqrt{4096} = 64$

**ಉದಾಹರಣೆ 9: ಇವುಗಳ ವರ್ಗಮೂಲಗಳನ್ನು ಕಂಡುಹಿಡಿಯಿರಿ. (i) 729 (ii) 1296**

**(i) 729**

| | | |
|---|---|---|
| 2 | $\overline{07}$ $\overline{29}$ | 27 |
| +2 | 04 ↓ | |
| 47 | 03 29 | |
| | 03 29 | |
| | 0 | |

$\sqrt{729} = 27$

**(ii) 1296**

| | | |
|---|---|---|
| 3 | $\overline{12}$ $\overline{96}$ | 36 |
| +3 | 09 ↓ | |
| 66 | 03 96 | |
| | 03 96 | |
| | 0 | |

$\sqrt{1296} = 36$

**ಉದಾಹರಣೆ 10: 5607ನ್ನು ಪೂರ್ಣವರ್ಗ ಮಾಡಲು ಕಳೆಯಬೇಕಾದ ಕನಿಷ್ಠ ಸಂಖ್ಯೆಯನ್ನು ಕಂಡುಹಿಡಯಿರಿ. ಮತ್ತು ಪೂರ್ಣವರ್ಗ ಸಂಖ್ಯೆಯ ವರ್ಗಮೂಲವನ್ನು ಕಂಡುಹಿಡಿಯಿರಿ.**

| | | |
|---|---|---|
| 7 | $\overline{56}$ $\overline{07}$ | 74 |
| +7 | 49 ↓ | |
| 144 | 07 07 | |
| | 05 76 | |
| | 1 31 | |

ಆದ್ದರಿಂದ ಶೇಷ 131 ನ್ನು 5607ರಿಂದ ಕಳೆದಾಗ ಅದು ಪೂರ್ಣ ವರ್ಗವಾಗುತ್ತದೆ.

**5607 – 131 = 5476**

$\sqrt{5607} = 74$

**ಉದಾಹರಣೆ 11: 4–ಅಂಕಿಗಳ ಗರಿಷ್ಠ ಪೂರ್ಣ ವರ್ಗವನ್ನು ಕಂಡುಹಿಡಿಯಿರಿ.**

4 ಅಂಕಿಗಳ ಗರಿಷ್ಠ ಸಂಖ್ಯೆ 9999

| | | |
|---|---|---|
| 9 | $\overline{99}$ $\overline{99}$ | 99 |
| +9 | 81 ↓ | |
| 189 | 18 99 | |
| | 17 01 | |
| | 1 98 | |

9999 – 198 = 9801 ಇದು 4 ಅಂಕಿಗಳ ಗರಿಷ್ಠ ಪೂರ್ಣ ವರ್ಗ ಸಂಖ್ಯೆ..

$\sqrt{9801} = 99$

**ಉದಾಹರಣೆ 12: 1300ನ್ನು ಪೂರ್ಣವರ್ಗ ಸಂಖ್ಯೆಯನ್ನಾಗಿ ಮಾಡಲು ಕೂಡಬೇಕಾದ ಕನಿಷ್ಠ ಸಂಖ್ಯೆಯನ್ನು ಕಂಡುಹಿಡಿಯಿರಿ ಮತ್ತು ಪೂರ್ಣ ವರ್ಗದ ವರ್ಗಮೂಲವನ್ನು ಕಂಡುಹಿಡಿಯಿರಿ.**

| | | |
|---|---|---|
| 3 | $\overline{13}$ $\overline{00}$ | 36 |
| +3 | 09 ↓ | |
| 66 | 04 00 | |
| | 03 96 | |
| | 04 | |

ಇಲ್ಲಿ ಶೇಷ 4 ಬಂದಿದೆ. ಆದ್ದರಿಂದ $36 < \sqrt{1300}$ ಆದ್ದರಿಂದ ಮುಂದಿನ ವರ್ಗಸಂಖ್ಯೆ $37^2 = 1369$ ಆಗಿದ್ದು, 1300ನ್ನು ಪೂರ್ಣವರ್ಗ ಮಾಡಲು ಕೂಡಿಸಬೇಕಾದ ಕನಿಷ್ಠ ಸಂಖ್ಯೆ 69. ಮತ್ತು

$\sqrt{1369} = 37$

ಗಮನಿಸಿ: ಒಂದು ಸಂಖ್ಯೆಯಲ್ಲಿ ಗುಂಪುಗಳಷ್ಟು (ಅಡ್ಡಗೆರೆ) ಸಂಖ್ಯೆಯ ಅಂಕಿಗಳು ಅದರ ವರ್ಗಮೂಲದಲ್ಲಿರುತ್ತದೆ.

**ದಶಮಾಂಶ ಸಂಖ್ಯೆಯ ವರ್ಗಮೂಲಗಳು:**

**ಉದಾಹರಣೆ 13:**

**12.25ರ ವರ್ಗಮೂಲವನ್ನು ಕಂಡುಹಿಡಿಯಿರಿ.**

| | | |
|---|---|---|
| 3 | $\overline{12}$. $\overline{25}$ | 3.5 |
| +3 | 09 ↓ | |
| 65 | 03 25 | |
| | 03 25 | |
| | 00 | |

$\sqrt{12.25} = 3.5$

**ಉದಾಹರಣೆ 14: ಒಂದು ಚೌಕಾಕಾರದ ಜಾಗದ ವಿಸ್ತೀರ್ಣ 2304 ಚ.ಮೀ. ಇದೆ.ಆ ಚೌಕಾಕಾರದ ಜಾಗದ ಬಾಹುವನ್ನು ಕಂಡುಹಿಡಿಯಿರಿ.**

ಚೌಕಾಕಾರದ ಜಾಗದ ಬಾಹುವಿನ ಅಳತೆಯು ವಿಸ್ತೀರ್ಣದ ವರ್ಗಮೂಲವಾಗಿರುತ್ತದೆ.

| 4 | 23 04 | 48 |
|---|---|---|
| +4 | 16 ↓ | |
| 88 | 07 04 | |
| | 07 04 | |
| | 00 | |

$\sqrt{2304} = 48$

∴ ಚೌಕಾಕಾರದ ಜಾಗದ ಬಾಹುವಿನ ಅಳತೆ= 48ಮೀ.

**ಉದಾಹರಣೆ 15: ಒಂದು ಶಾಲೆಯಲ್ಲಿ 2401 ವಿದ್ಯಾರ್ಥಿಗಳಿದ್ದಾರೆ. ಆ ವಿದ್ಯಾರ್ಥಿಗಳನ್ನು ಅಡ್ಡಸಾಲು ಮತ್ತು ಕಂಬಸಾಲುಗಳಲ್ಲಿ ನಿಲ್ಲಿಸಲು ದೈಹಿಕ ಶಿಕ್ಷಕರು ಬಯಸಿದ್ದಾರೆ ಮತ್ತು ಅಡ್ಡಸಾಲುಗಳ ಸಂಖ್ಯೆ ಕಂಬಸಾಲುಗಳ ಸಂಖ್ಯೆಗೆ ಸಮವಿರುವಂತೆ ನಿಲ್ಲಿಸಬೇಕಾಗಿದೆ. ಹಾಗಾದರೆ ಅಡ್ಡಸಾಲುಗಳ ಸಂಖ್ಯೆ ಕಂಡುಹಿಡಿಯಿರಿ.**

ಅಡ್ಡಸಾಲುಗಳ ಸಂಖ್ಯೆ = $x$ ಆಗಿರಲಿ

ಆದ್ದರಿಂದ ಕಂಬಸಾಲುಗಳ ಸಂಖ್ಯೆ = $x$

$x \times x = x^2$ = ಒಟ್ಟು ವಿದ್ಯಾರ್ಥಿಗಳ ಸಂಖ್ಯೆ

ಆದ್ದರಿಂದ, $x = \sqrt{2401}$

| 4 | 24 01 | 49 |
|---|---|---|
| +4 | 16 ↓ | |
| 89 | 08 01 | |
| | 08 01 | |
| | 00 | |

$\sqrt{2401} = 49$

ಒಟ್ಟು 49 ಅಡ್ಡಸಾಲುಗಳಿವೆ.

**ವರ್ಗಮೂಲವನ್ನು ಅಂದಾಜಿಸುವುದು:**

250 ಒಂದು ಪೂರ್ಣ ವರ್ಗ ಸಂಖ್ಯೆ ಅಲ್ಲ. ಆದರೆ ಅದರ ಅಂದಾಜು ವರ್ಗಮೂಲವನ್ನು ಹತ್ತಿರದ ಪೂರ್ಣಾಂಕಕ್ಕೆ ಊಹಿಸಬಹುದು.

250 ಇದು ಪೂರ್ಣ ವರ್ಗಸಂಖ್ಯೆಗಳಾದ 225 ಮತ್ತು 256 ರ ನಡುವೆ ಇದೆ.

$225 < 250 < 256$

ಹಾಗೂ ಇದು 256ಕ್ಕೆ ಹತ್ತಿರ ಇರುವುದರಿಂದ

$\sqrt{250}$ ರ ಸಮೀಪದ ಅಂದಾಜು ಬೆಲೆ = 16

## ಅಭ್ಯಾಸ 5

**1. ಈ ಕೆಳಗಿನ ಸಂಖ್ಯೆಗಳ ವರ್ಗಗಳ ಬಿಡಿಸ್ಥಾನದಲ್ಲಿರುವ ಅಂಕಿಗಳಾವುವು?**

**(i) 81 (ii) 272 (iii) 799 (iv) 3853 (v) 1234 (vi) 26387 (vii) 52698 (viii) 99880 (ix) 12796 (x) 55555**

**ಪರಿಹಾರ:**

| ಕ್ರ.ಸಂ | ಸಂಖ್ಯೆಗಳು | ಬಿಡಿಸ್ಥಾನದ ಅಂಕಿ | ವರ್ಗದ ಬಿಡಿಸ್ಥಾನದ ಅಂಕಿ |
|---|---|---|---|
| i. | 81 | 1 | 1 |
| ii. | 272 | 2 | 4 |
| iii. | 799 | 9 | 1 |
| iv. | 3853 | 3 | 9 |
| v. | 1234 | 4 | 6 |
| vi. | 26387 | 7 | 9 |
| vii | 52698 | 8 | 4 |
| viii | 99880 | 0 | 0 |
| ix | 12796 | 6 | 6 |
| x | 55555 | 5 | 5 |

**2. ಈ ಕೆಳಗಿನ ಸಂಖ್ಯೆಗಳು ಸ್ಪಷ್ಟವಾಗಿ ಪೂರ್ಣವರ್ಗಗಳಲ್ಲ. ಕಾರಣ ಕೊಡಿ.**

**(i) 1057 (ii) 23453 (iii) 7928 (iv) 22222 (v) 64000 (vi) 89722 (vii) 222000 (viii) 505050**

**ಪರಿಹಾರ:**

ಯಾವುದೇ ಪೂರ್ಣ ವರ್ಗಸಂಖ್ಯೆಯ ಬಿಡಿಸ್ಥಾನದಲ್ಲಿ 1, 4, 5, 6, 9 ಮತ್ತು ಕೊನೆಯಲ್ಲಿ ಸಮಸಂಖ್ಯೆಯ 0 ಗಳಿರಬೇಕು.

| ಕ್ರ.ಸಂ | ಸಂಖ್ಯೆಗಳು | ಪೂರ್ಣ ವರ್ಗವೇ? | ಕಾರಣ |
|---|---|---|---|
| i. | 1057 | ಅಲ್ಲ | ಬಿಡಿಸ್ಥಾನದಲ್ಲಿ 7 |
| ii. | 23453 | ಅಲ್ಲ | ಬಿಡಿಸ್ಥಾನದಲ್ಲಿ 3 |
| iii. | 7928 | ಅಲ್ಲ | ಬಿಡಿಸ್ಥಾನದಲ್ಲಿ 8 |
| iv. | 22222 | ಅಲ್ಲ | ಬಿಡಿಸ್ಥಾನದಲ್ಲಿ 2 |
| v. | 64000 | ಅಲ್ಲ | ಕೊನೆಯಲ್ಲಿ ಸೊನ್ನೆಗಳ ಸಂಖ್ಯೆ ಸಮಸಂಖ್ಯೆ ಅಲ್ಲ |
| vi. | 89722 | ಅಲ್ಲ | ಬಿಡಿಸ್ಥಾನದಲ್ಲಿ 2 |
| vii | 222000 | ಅಲ್ಲ | ಕೊನೆಯಲ್ಲಿ ಸೊನ್ನೆಗಳ ಸಂಖ್ಯೆ ಸಮಸಂಖ್ಯೆ ಅಲ್ಲ |
| viii | 505050 | ಅಲ್ಲ | ಕೊನೆಯಲ್ಲಿ ಸೊನ್ನೆಗಳ ಸಂಖ್ಯೆ ಸಮಸಂಖ್ಯೆ ಅಲ್ಲ |

**3. ಈ ಕೆಳಗಿನ ಯಾವ ಸಂಖ್ಯೆಗಳ ವರ್ಗಗಳು ಬೆಸಸಂಖ್ಯೆಗಳಾಗಿವೆ?**

**(i) 431 (ii) 2826 (iii) 7779 (iv) 82004**

**ಪರಿಹಾರ:**

ಬೆಸ ಸಂಖ್ಯೆಯ ವರ್ಗಗಳು ಬೆಸಸಂಖ್ಯೆಗಳಾಗಿರುತ್ತವೆ. ಆದ್ದರಿಂದ,

(i) 431 ಮತ್ತು (iii) 7779 ರ ವರ್ಗಗಳು ಬೆಸಸಂಖ್ಯೆಗಳಾಗಿವೆ.

**4. ಈ ಕೆಳಗಿನ ಮಾದರಿಗಳನ್ನು ಗಮನಿಸಿ ಬಿಟ್ಟ ಅಂಕಿಗಳನ್ನು ತುಂಬಿರಿ.**

**ಪರಿಹಾರ:**

$11^2 = 121$
$101^2 = 10201$
$1001^2 = 1002001$
$100001^2 = 1$ ----2----1
$10000001^2 =$ ---------------
$11^2 = 121$
$101^2 = 10201$
$1001^2 = 1002001$
$100001^2 =$ 1 **0000200001**
$10000001^2 =$ **100000020000001**

**5. ಈ ಕೆಳಗಿನ ಮಾದರಿಗಳನ್ನು ಗಮನಿಸಿ ಖಾಲಿ ಇರುವ ಜಾಗಗಳನ್ನು ಸೂಕ್ತ ಅಂಕಿಗಳನ್ನು ತುಂಬಿರಿ.**

$11^2 = 121$
$101^2 = 10201$
$10101^2 = 102030201$
$1010101^2 =$ **1020304030201**
**$101010101^2$** $= 10203040504030201$

**6. ಕೊಟ್ಟಿರುವ ಮಾದರಿಯನ್ನು ಉಪಯೋಗಿಸಿಕೊಂಡು ಬಿಟ್ಟಿರುವ ಸಂಖ್ಯೆಗಳನ್ನು ತುಂಬಿರಿ.**

**ಪರಿಹಾರ:**

| | | | | | | | | |
|---|---|---|---|---|---|---|---|---|
| $1^2$ | + | $2^2$ | + | $2^2$ | = | $3^2$ | | |
| $2^2$ | + | $3^2$ | + | $6^2$ | = | $7^2$ | | |
| $3^2$ | + | $4^2$ | + | $12^2$ | = | $13^2$ | | |
| $4^2$ | + | $5^2$ | + | $_^2$ | = | $21^2$ | | |
| $5^2$ | + | $_^2$ | + | $30^2$ | = | $31^2$ | | |
| $6^2$ | + | $7^2$ | + | $_^2$ | = | $_^2$ | | |

| | | | | | | |
|---|---|---|---|---|---|---|
| $1^2$ | + | $2^2$ | + | $2^2$ | = | $3^2$ |
| $2^2$ | + | $3^2$ | + | $6^2$ | = | $7^2$ |
| $3^2$ | + | $4^2$ | + | $12^2$ | = | $13^2$ |
| $4^2$ | + | $5^2$ | + | **$20^2$** | = | $21^2$ |
| $5^2$ | + | **$6^2$** | + | $30^2$ | = | $31^2$ |
| $6^2$ | + | $7^2$ | + | **$42^2$** | = | **$43^2$** |

**7. ಸಂಖ್ಯೆಗಳನ್ನು ಕೂಡಿಸದೆಯೇ ಮೊತ್ತವನ್ನು ಕಂಡುಹಿಡಿಯಿರಿ.**

**(i) 1+3+7+9**
**(ii) 1+3+7+9+11+13+15+17+19**
**(iii) 1+3+7+9+11+13+15+17+19+21+23**

**ಪರಿಹಾರ:**

(i) 1+3+5+ 7+9
$= 5^2 = 25$
(ii) 1+3+5+7+9+11+13+15+17+19
$= 10^2 = 100$
(iii)1+3+5+7+9+11+13+15+17+19+21+23
$= 12^2 = 144$

**8. 49ನ್ನು 7 ಬೆಸ ಸಂಖ್ಯೆಗಳ ಮೊತ್ತವನ್ನಾಗಿ ವ್ಯಕ್ತಪಡಿಸಿ.**

**ಪರಿಹಾರ:**

1 + 3 + 5 + 7 + 9 + 11 + 13 = 49

**9. ಈ ಕೆಳಗಿನ ಸಂಖ್ಯೆಗಳ ವರ್ಗಗಳ ನಡುವೆ ಎಷ್ಟು ಸಂಖ್ಯೆಗಳಿವೆ?**

**(i) 12 ಮತ್ತು 13 (ii) 25 ಮತ್ತು 26**
**(iii) 99 ಮತ್ತು 100**

**ಪರಿಹಾರ:**

$n^2$ ಮತ್ತು $(n+1)^2$ ಗಳ ಮಧ್ಯೆ ಪೂರ್ಣ ವರ್ಗ ಅಲ್ಲದ 2n ಸಂಖ್ಯೆಗಳಿರುತ್ತವೆ.

**(i) 12 ಮತ್ತು 13**

$n = 12 \Rightarrow 2n = 24$
ಆದ್ದರಿಂದ 12 ಮತ್ತು 13 ರ ವರ್ಗಗಳ ನಡುವೆ 24 ವರ್ಗ ಅಲ್ಲದ ಸಂಖ್ಯೆಗಳಿವೆ.

**(ii) 25 ಮತ್ತು 26**

$n = 25 \Rightarrow 2n = 50$
ಆದ್ದರಿಂದ 25 ಮತ್ತು 26 ರ ವರ್ಗಗಳ ನಡುವೆ 50 ವರ್ಗ ಅಲ್ಲದ ಸಂಖ್ಯೆಗಳಿವೆ.

**(iii) 99 ಮತ್ತು 100**

$n = 99 \Rightarrow 2n = 198$
ಆದ್ದರಿಂದ 99 ಮತ್ತು 100 ರ ವರ್ಗಗಳ ನಡುವೆ 198 ವರ್ಗ ಅಲ್ಲದ ಸಂಖ್ಯೆಗಳಿವೆ.

## ಅಭ್ಯಾಸ 5.2

**1. ಈ ಕೆಳಗಿನ ಸಂಖ್ಯೆಗಳ ವರ್ಗಗಳನ್ನು ಕಂಡುಹಿಡಿಯಿರಿ.**

**(i) 32 (ii) 35 (iii) 86 (iv) 93 (v) 71 (vi) 46**

**ಪರಿಹಾರ:**

**(i) 32**

$32^2 = (30 + 2)^2$
$30(30 + 2) + 2(30 + 2)$
$900 + 60 + 60 + 4$
$1024$

**(ii) 35**

$35^2 = (30 + 5)^2$
$30(30 + 5) + 5(30 + 5)$
$900 + 150 + 150 + 25$
$1225$

**(iii) 86**

$86^2 = (80 + 6)^2$
$80(80 + 6) + 6(80 + 6)$
$6400 + 480 + 480 + 36$
$7396$

**(iv) 93**

$93^2 = (90 + 3)^2$
$90(90 + 3) + 3(90 + 3)$
$8100 + 270 + 270 + 9$
$8649$

**(v) 71**

$71^2 = (70 + 1)^2$

$70(70 + 1) + 1(70 + 1)$

$4900 + 70 + 70 + 1$

5041

**(vi) 46**

$46^2 = (40 + 6)^2$

$40(40 + 6) + 6(40 + 6)$

$1600 + 240 + 240 + 36$

2116

**2. ಈ ಕೆಳಗಿನ ಸಂಖ್ಯೆಗಳನ್ನೊಳಗೊಂಡ ಪೈಥಾಗೊರಸ್‌ನ ತ್ರಿವಳಿಗಳನ್ನು ಬರೆಯಿರಿ.**

**(i) 6 (ii) 14 (iii) 16 (iv) 18**

**ಪರಿಹಾರ:**

**ಯಾವುದೇ ಸ್ವಾಭಾವಿಕ ಸಂಖ್ಯೆ $m > 1$ ಆದಾಗ,**

$$(2m)^2 + (m^2 - 1)^2 = (m^2 + 1)^2$$

**ಇಲ್ಲಿ $2m$, $(m^2 - 1)$ $(m^2 + 1)$ಗಳು ಪೈಥಾಗೊರಸ್‌ನ ತ್ರಿವಳಿಗಳು.**

**(i) 6**

$2m = 6$

$\Rightarrow m = 3$

$\therefore (m^2 - 1) = 3^2 - 1 = 9 - 1 = 8$

$m^2 + 1 = 3^2 + 1 = 9 + 1 = 10$

ಆದ್ದರಿಂದ ಪೈಥಾಗೋರಸ್‌ನ ತ್ರಿವಳಿಗಳು

6, 8, 10

**(ii) 14**

$2m = 14$

$\Rightarrow m = 7$

$\therefore (m^2 - 1) = 7^2 - 1 = 49 - 1 = 48$

$m^2 + 1 = 7^2 + 1 = 49 + 1 = 50$

ಆದ್ದರಿಂದ ಪೈಥಾಗೋರಸ್‌ನ ತ್ರಿವಳಿಗಳು

14, 48, 50

**(iii) 16**

$2m = 16$

$\Rightarrow m = 8$

$\therefore (m^2 - 1) = 8^2 - 1 = 64 - 1 = 63$

$m^2 + 1 = 8^2 + 1 = 64 + 1 = 65$

ಆದ್ದರಿಂದ ಪೈಥಾಗೋರಸ್‌ನ ತ್ರಿವಳಿಗಳು

16, 63, 65

**(iv) 18**

$2m = 18$

$\Rightarrow m = 9$

$\therefore (m^2 - 1) = 9^2 - 1 = 81 - 1 = 80$

$m^2 + 1 = 9^2 + 1 = 81 + 1 = 82$

ಆದ್ದರಿಂದ ಪೈಥಾಗೋರಸ್‌ನ ತ್ರಿವಳಿಗಳು

18, 80, 82

## ಅಭ್ಯಾಸ 5.3

**1. ಈ ಕೆಳಗಿನ ಸಂಖ್ಯೆಗಳ ವರ್ಗಮೂಲಗಳ ಬಿಡಿಸ್ಥಾನದಲ್ಲಿ ಇರಬಹುದಾದ ಅಂಕಿಗಳು ಯಾವುವು?**

**(i) 9801 (ii) 99856 (iii) 998001 (iv) 657666025**

**ಪರಿಹಾರ:**

(i) 9801 – 1 ಅಥವಾ 9

(ii) 99856 - 4 ಅಥವಾ 9

(iii) 998001 – 1 ಅಥವಾ 9

(iv) 657666025 – 5

**2. ಯಾವುದೇ ರೀತಿಯ ಲೆಕ್ಕಾಚಾರ ಮಾಡದೇ ಈ ಕೆಳಗಿನವುಗಳಲ್ಲಿ ಯಾವುವು ಪೂರ್ಣ ವರ್ಗವಲ್ಲ ಎಂದು ತಿಳಿಸಿ. (i) 153 (ii) 257 (iii) 408 (iv) 441**

**ಪರಿಹಾರ:**

ಪೂರ್ಣವರ್ಗ ಸಂಖ್ಯೆಯ ಕೊನೆಯಲ್ಲಿ 0,1,4,5,6 ಮತ್ತು 9 ಈ ಅಂಕಿಗಳು ಮಾತ್ರ ಬರುತ್ತದೆ.

ಆದ್ದರಿಂದ,

(i) 153 - ಪೂರ್ಣ ವರ್ಗ ಅಲ್ಲ

(ii) 257 - ಪೂರ್ಣ ವರ್ಗ ಅಲ್ಲ

(iii) 408 - ಪೂರ್ಣ ವರ್ಗ ಅಲ್ಲ

(iv) 441 - ಪೂರ್ಣ ವರ್ಗ

**3. ಪುನರಾವರ್ತಿತ ವ್ಯವಕಲನದ ಮೂಲಕ 100 ಮತ್ತು 169ರ ವರ್ಗಮೂಲಗಳನ್ನು ಕಂಡುಹಿಡಿಯಿರಿ.**

**ಪರಿಹಾರ:**

100

| | |
|---|---|
| 100 – 1 = 99 | 75 – 11 = 64 |
| 99 – 3 = 96 | 64 – 13 = 51 |
| 96 – 5 = 91 | 51 – 15 = 36 |
| 91 – 7 = 84 | 36 – 17 = 19 |
| 84 – 9 = 75 | 19 – 19 = 0 |

ಮೊದಲ 10 ಬೆಸ ಸಂಖ್ಯೆಗಳನ್ನು ಕಳೆದಾಗ 0 ಬಂದಿದೆ.

ಆದ್ದರಿಂದ 100 ರ ವರ್ಗಮೂಲ = 10

169

| | |
|---|---|
| 169 – 1 = 168 | 133 – 13 = 120 |
| 168 – 3 = 165 | 120 – 15 = 105 |
| 165 – 5 = 160 | 105 – 17 = 88 |
| 160 – 7 = 153 | 88 – 19 = 69 |
| 153 – 9 = 144 | 69 – 21 = 48 |
| 144 – 11 = 133 | 48 – 23 = 25 |
| | 23 – 25 = 0 |

ಮೊದಲ 13 ಬೆಸ ಸಂಖ್ಯೆಗಳನ್ನು ಕಳೆದಾಗ 0 ಬಂದಿದೆ.

ಆದ್ದರಿಂದ 169 ರ ವರ್ಗಮೂಲ = 13

**4. ಅವಿಭಾಜ್ಯ ಅಪವರ್ತನ ವಿಧಾನದಿಂದ ಈ ಕೆಳಗಿನ ಸಂಖ್ಯೆಗಳ ವರ್ಗಮೂಲಗಳನ್ನು ಕಂಡುಹಿಡಿಯಿರಿ.**

**(i) 729 (ii) 400 (iii) 1764 (iv) 4096 (v) 7744 (vi) 9604 (vii) 5929 (viii) 9216 (ix) 529 (x) 8100**

**ಪರಿಹಾರ:**

**(i) 729**

| | |
|---|---|
| 3 | **729** |
| 3 | 243 |
| 3 | 081 |
| 3 | 027 |
| 3 | 009 |
| 3 | 003 |
| | 001 |

$729 = 3\times3\times3\times3\times3\times3$

$= \overline{3\times3}\times\overline{3\times3}\times\overline{3\times3}$

$\sqrt{729} = 3\times3\times3$

$\sqrt{729} = 27$

**(ii) 400**

| | |
|---|---|
| 2 | **400** |
| 2 | 200 |
| 2 | 100 |
| 2 | 050 |
| 5 | 025 |
| 5 | 005 |
| | 001 |

$400 = 2\times2\times2\times2\times5\times5$

$= \overline{2\times2}\times\overline{2\times2}\times\overline{5\times5}$

$\sqrt{400} = 2\times2\times5$

$\sqrt{729} = 20$

**(iii) 1764**

| | |
|---|---|
| 2 | **1764** |
| 2 | 0882 |
| 3 | 0441 |
| 3 | 0147 |
| 7 | 0049 |
| 7 | 0007 |
| | 0007 |

$1764 = 2\times2\times3\times3\times7\times7$

$= \overline{2\times2}\times\overline{3\times3}\times\overline{7\times7}$

$\sqrt{1764} = 2\times3\times7$

$\sqrt{729} = 42$

**(iv) 4096**

| | |
|---|---|
| 2 | **4096** |
| 2 | 2048 |
| 2 | 1024 |
| 2 | 0512 |
| 2 | 0256 |
| 2 | 0128 |
| 2 | 0064 |
| 2 | 0032 |
| 2 | 0016 |
| 2 | 0008 |
| 2 | 0004 |
| 2 | 0002 |
| | 0001 |

$4096 = 2\times2\times2\times2\times2\times2\times2\times2\times2\times2\times2\times2$

$= \overline{2\times2}\times\overline{2\times2}\times\overline{2\times2}\times\overline{2\times2}\times\overline{2\times2}\times\overline{2\times2}$

$\sqrt{4096} = 2\times2\times2\times2\times2\times2$

$\sqrt{4096} = 64$

**(v) 7744**

| | |
|---|---|
| 2 | **7744** |
| 2 | 3872 |
| 2 | 1936 |
| 2 | 0968 |
| 2 | 0484 |
| 2 | 0242 |
| 11 | 0121 |
| 11 | 0011 |
| | 0001 |

$7744$

$= 2\times2\times2\times2\times2\times2\times3\times3\times3\times3$

$= \overline{2\times2}\times\overline{2\times2}\times\overline{2\times2}\times\overline{3\times3}\times\overline{3\times3}$

$\sqrt{7744}$

$= 2\times2\times2\times3\times3$

$\sqrt{7744} = 72$

**(vi) 9604**

| | |
|---|---|
| 2 | **9604** |
| 2 | 4802 |
| 7 | 2401 |
| 7 | 0343 |
| 7 | 0049 |
| 7 | 0007 |
| | 0001 |

$9604 = 2\times2\times7\times7\times7\times7$

$= \overline{2\times2}\times\overline{7\times7}\times\overline{7\times7}$

$\sqrt{9604} = 2\times7\times7$

$\sqrt{9604} = 98$

**(vii) 5929**

| | |
|---|---|
| 7 | **5929** |
| 7 | 0847 |
| 11 | 0121 |
| 11 | 0011 |

$5929 = 7\times7\times11\times11$

$= \overline{7\times7}\times\overline{11\times11}$

$\sqrt{5929} = 7\times11 \Rightarrow \sqrt{5929} = 77$

**(viii) 9216**

| | |
|---|---|
| 2 | **9216** |
| 2 | 4608 |
| 2 | 2304 |
| 2 | 1152 |
| 2 | 0576 |
| 2 | 0288 |
| 2 | 0144 |
| 2 | 0072 |
| 2 | 0036 |
| 2 | 0018 |
| 3 | 0009 |
| 3 | 0003 |
| | 0001 |

$9216$

$= 2\times2\times2\times2\times2\times2\times2\times2\times2\times2\times3\times3$

$= \overline{2\times2}\times\overline{2\times2}\times\overline{2\times2}\times\overline{2\times2}\times\overline{2\times2}\times\overline{3\times3}$

$\sqrt{9216}$

$= 2\times2\times2\times2\times2\times3$

$\sqrt{9216} = 96$

**(ix) 529**

| | |
|---|---|
| 23 | **529** |
| 23 | 023 |
| | 001 |

$529 = 23\times23$

$= \overline{23\times23}$

$\sqrt{529} = 23$

**(x) 8100**

| 2 | 8100 |
|---|---|
| 2 | 4050 |
| 3 | 2025 |
| 3 | 0675 |
| 3 | 0225 |
| 3 | 0075 |
| 5 | 0025 |
| 5 | 0005 |
| | 0001 |

8100

$= 2\times 2\times 3\times 3\times 3\times 3 \times 5\times 5$

$= \overline{2\times 2}\times\overline{3\times 3}\times\overline{3\times 3}\times\overline{5\times 5}$

$\sqrt{8100}$

$= 2\times 3\times 3\times 5$

$\sqrt{8100} = 90$

**5.ಕೆಳಗಿನ ಸಂಖ್ಯೆಗಳನ್ನು ಪೂರ್ಣ ವರ್ಗ ಸಂಖ್ಯೆಗಳನ್ನಾಗಿ ಮಾಡಲು ಕನಿಷ್ಠ ಯಾವ ಪೂರ್ಣ ಸಂಖ್ಯೆಯಿಂದ ಗುಣಿಸಬೇಕೆಂದು ಕಂಡುಹಿಡಿಯಿರಿ ಮತ್ತು ನಂತರ ಪಡೆದ ವರ್ಗಸಂಖ್ಯೆಯ ವರ್ಗಮೂಲವನ್ನು ಕಂಡುಹಿಡಿಯಿರಿ.**

**(i) 252 (ii) 180 (iii) 1008 (iv) 2028 (v) 1458 (vi) 768**

**ಪರಿಹಾರ:**

**(i) 252**

| 2 | 252 |
|---|---|
| 2 | 126 |
| 3 | 063 |
| 3 | 021 |
| 7 | 007 |
| | 001 |

$252 = 2\times 2\times 3\times 3\times 7$
ಇಲ್ಲಿ 7 ಕ್ಕೆ ಜೋಡಿ ಇಲ್ಲ.

∴ ಇದು ಪೂರ್ಣವರ್ಗ ಅಲ್ಲ.

∴ ಪೂರ್ಣ ವರ್ಗಮಾಡಲು ಗುಣಿಸಬೇಕಾದ ಕನಿಷ್ಠ ಸಂಖ್ಯೆ **7**

$252 \times 7 = 1764$

$\sqrt{1764} = 2\times 3\times 7 = 42$

**(ii) 180**

| 2 | 180 |
|---|---|
| 2 | 090 |
| 3 | 045 |
| 3 | 015 |
| 5 | 005 |
| | 001 |

$180 = 2\times 2\times 3\times 3\times 5$
ಇಲ್ಲಿ 5 ಕ್ಕೆ ಜೋಡಿ ಇಲ್ಲ.

∴ ಇದು ಪೂರ್ಣವರ್ಗ ಅಲ್ಲ.

∴ ಪೂರ್ಣ ವರ್ಗಮಾಡಲು ಗುಣಿಸಬೇಕಾದ ಕನಿಷ್ಠ ಸಂಖ್ಯೆ **5**

$180 \times 5 = 900$

$\sqrt{900} = 2\times 3\times 5 = 30$

**(iii) 1008**

| 2 | 1008 |
|---|---|
| 2 | 0504 |
| 2 | 0252 |
| 2 | 0126 |
| 3 | 0063 |
| 3 | 0021 |
| 7 | 0007 |
| | 0001 |

$1008 = 2\times 2\times 2\times 2\times 3 \times 3\times 7$
ಇಲ್ಲಿ 7 ಕ್ಕೆ ಜೋಡಿ ಇಲ್ಲ.

∴ ಇದು ಪೂರ್ಣವರ್ಗ ಅಲ್ಲ.

∴ ಪೂರ್ಣ ವರ್ಗಮಾಡಲು ಗುಣಿಸಬೇಕಾದ ಕನಿಷ್ಠ ಸಂಖ್ಯೆ **7**

$1008 \times 7 = 7056$

$\sqrt{7056} = 2\times 2\times 3\times 7 = 84$

**(iv) 2028**

| 2 | 2028 |
|---|---|
| 2 | 1014 |
| 3 | 0507 |
| 13 | 0169 |
| 13 | 0013 |
| | 0001 |

$2028 = 2\times 2\times 3\times 13\times 13$
ಇಲ್ಲಿ 3 ಕ್ಕೆ ಜೋಡಿ ಇಲ್ಲ.

∴ ಇದು ಪೂರ್ಣವರ್ಗ ಅಲ್ಲ.

∴ ಪೂರ್ಣ ವರ್ಗಮಾಡಲು ಗುಣಿಸಬೇಕಾದ ಕನಿಷ್ಠ ಸಂಖ್ಯೆ **3**

$2028 \times 3 = 6084$

$\sqrt{6084} = 2\times 3\times 13 = 78$

**(v) 1458**

| 2 | 1458 |
|---|---|
| 3 | 0729 |
| 3 | 0243 |
| 3 | 0081 |
| 3 | 0027 |
| 3 | 0009 |
| 3 | 0003 |
| | 0001 |

$1458 = 2\times 3\times 3\times 3\times 3 \times 3\times 3$
ಇಲ್ಲಿ 2 ಕ್ಕೆ ಜೋಡಿ ಇಲ್ಲ.

∴ ಇದು ಪೂರ್ಣವರ್ಗ ಅಲ್ಲ.

∴ ಪೂರ್ಣ ವರ್ಗಮಾಡಲು ಗುಣಿಸಬೇಕಾದ ಕನಿಷ್ಠ ಸಂಖ್ಯೆ **2**

$1458 \times 2 = 2916$

$\sqrt{2916} = 2\times 3\times 3\times 3 = 54$

**(vi) 768**

| 2 | 768 |
|---|---|
| 2 | 384 |
| 2 | 192 |
| 2 | 096 |
| 2 | 048 |
| 2 | 024 |
| 2 | 012 |
| 2 | 006 |
| 3 | 003 |
| | 001 |

$1008 = 2\times 2\times 2\times 2 \times 2\times 2\times 2\times 3$
ಇಲ್ಲಿ 3 ಕ್ಕೆ ಜೋಡಿ ಇಲ್ಲ.

∴ ಇದು ಪೂರ್ಣವರ್ಗ ಅಲ್ಲ.

∴ ಪೂರ್ಣ ವರ್ಗಮಾಡಲು ಗುಣಿಸಬೇಕಾದ ಕನಿಷ್ಠ ಸಂಖ್ಯೆ **3**

$768 \times 23 = 2304$

$\sqrt{2304} = 2\times 2\times 2\times 2\times 3 = 48$

**6. ಕೆಳಗಿನ ಪ್ರತಿಯೊಂದು ಸಂಖ್ಯೆಗಳನ್ನು ಪೂರ್ಣ ವರ್ಗ ಸಂಖ್ಯೆಗಳನ್ನಾಗಿ ಮಾಡಲು ಕನಿಷ್ಠ ಯಾವ ಪೂರ್ಣ ಸಂಖ್ಯೆಯಿಂದ ಭಾಗಿಸಬೇಕೆಂದು ಕಂಡುಹಿಡಿಯಿರಿ ಮತ್ತು ನಂತರ ಪಡೆದ ವರ್ಗಸಂಖ್ಯೆಯ ವರ್ಗಮೂಲವನ್ನು ಕಂಡುಹಿಡಿಯಿರಿ.**

**(i) 252 (ii) 2925 (iii) 396 (iv) 2645 (v) 2800 (vi) 1620**

ಪರಿಹಾರ:

**(i) 252**

| | |
|---|---|
| 2 | 252 |
| 2 | 126 |
| 3 | 063 |
| 3 | 021 |
| 7 | 007 |
| | 001 |

$252 = 2\times2\times3\times3\times7$
ಇಲ್ಲಿ 7 ಕ್ಕೆ ಜೋಡಿ ಇಲ್ಲ.
∴ ಇದು ಪೂರ್ಣವರ್ಗ ಅಲ್ಲ.
∴ ಪೂರ್ಣ ವರ್ಗಮಾಡಲು ಭಾಗಿಸಬೇಕಾದ ಕನಿಷ್ಠ ಸಂಖ್ಯೆ **7**

$252 \div 7 = 36$
$\sqrt{36} = 2 \times 3 = 6$

**(ii) 2925**

| | |
|---|---|
| 3 | 2925 |
| 3 | 0975 |
| 5 | 0325 |
| 5 | 0065 |
| 13 | 0013 |
| | 0001 |

$2925 = 3\times3\times5\times5\times13$
ಇಲ್ಲಿ 13 ಕ್ಕೆ ಜೋಡಿ ಇಲ್ಲ.
∴ ಇದು ಪೂರ್ಣವರ್ಗ ಅಲ್ಲ.
∴ ಪೂರ್ಣ ವರ್ಗಮಾಡಲು ಭಾಗಿಸಬೇಕಾದ ಕನಿಷ್ಠ ಸಂಖ್ಯೆ **13**

$2925 \div 13 = 225$
$\sqrt{225} = 3 \times 5 = 15$

**(iii) 396**

| | |
|---|---|
| 2 | 396 |
| 2 | 198 |
| 3 | 099 |
| 3 | 033 |
| 11 | 011 |
| | 001 |

$396 = 2\times2\times3\times3\times11$
ಇಲ್ಲಿ 11 ಕ್ಕೆ ಜೋಡಿ ಇಲ್ಲ.
∴ ಇದು ಪೂರ್ಣವರ್ಗ ಅಲ್ಲ.
∴ ಪೂರ್ಣ ವರ್ಗಮಾಡಲು ಭಾಗಿಸಬೇಕಾದ ಕನಿಷ್ಠ ಸಂಖ್ಯೆ **11**

$396 \div 11 = 36$
$\sqrt{36} = 2 \times 3 = 6$

**(iv) 2645**

| | |
|---|---|
| 5 | 2645 |
| 23 | 0529 |
| 23 | 0023 |
| | 0001 |

$2645 = 5\times23\times23$
ಇಲ್ಲಿ 5 ಕ್ಕೆ ಜೋಡಿ ಇಲ್ಲ.
∴ ಪೂರ್ಣ ವರ್ಗಮಾಡಲು ಭಾಗಿಸಬೇಕಾದ ಕನಿಷ್ಠ ಸಂಖ್ಯೆ **5**

$2645 \div 5 = 529$
$\sqrt{529} = 23$

**(v) 2800**

| | |
|---|---|
| 2 | 2800 |
| 2 | 1400 |
| 2 | 0700 |
| 2 | 0350 |
| 5 | 0175 |
| 5 | 0035 |
| 7 | 0007 |
| | 0001 |

2800
$= 2\times2\times2\times2\times5\times5\times7$
ಇಲ್ಲಿ 7 ಕ್ಕೆ ಜೋಡಿ ಇಲ್ಲ.
∴ ಇದು ಪೂರ್ಣವರ್ಗ ಅಲ್ಲ.
∴ ಪೂರ್ಣ ವರ್ಗಮಾಡಲು ಭಾಗಿಸಬೇಕಾದ ಕನಿಷ್ಠ ಸಂಖ್ಯೆ **7**

$2645 \div 7 = 400$
$\sqrt{400} = 2\times2\times5 = 20$

**(vi) 1620**

| | |
|---|---|
| 2 | 1620 |
| 2 | 0810 |
| 3 | 0405 |
| 3 | 0135 |
| 3 | 0045 |
| 3 | 0015 |
| 5 | 0005 |
| | 0001 |

1620
$= 2\times2\times3\times3\times3\times3\times5$
ಇಲ್ಲಿ 5 ಕ್ಕೆ ಜೋಡಿ ಇಲ್ಲ.
∴ ಇದು ಪೂರ್ಣವರ್ಗ ಅಲ್ಲ.
∴ ಪೂರ್ಣ ವರ್ಗಮಾಡಲು ಭಾಗಿಸಬೇಕಾದ ಕನಿಷ್ಠ ಸಂಖ್ಯೆ **5**

$1620 \div 5 = 324$
$\sqrt{324} = 2\times3\times3 = 18$

**7. ಒಂದು ಶಾಲೆಯ 8ನೇ ತರಗತಿಯ ವಿದ್ಯಾರ್ಥಿಗಳು ಪ್ರಧಾನ ಮಂತ್ರಿಯವರ ರಾಷ್ಟ್ರೀಯ ಪರಿಹಾರ ನಿಧಿಗೆ ಒಟ್ಟು ರೂ 2401ನ್ನು ದಾನ ನೀಡಿದರು. ಆ ತರಗತಿಯಲ್ಲಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯಷ್ಟು ರೂಪಾಯಿಗಳನ್ನು ಪ್ರತಿಯೊಬ್ಬ ವಿದ್ಯಾರ್ಥಿಯೂ ದಾನ ಮಾಡಿದನು. ಹಾಗಾದರೆ ಆ ತರಗತಿಯಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.**

ಪರಿಹಾರ:

| | |
|---|---|
| 7 | 2401 |
| 7 | 0343 |
| 7 | 0049 |
| 7 | 0007 |
| | 0001 |

ದೇಣಿಗೆ ನೀಡಿದ ಮೊತ್ತ = 2401ರೂ
ವಿದ್ಯಾರ್ಥಿಗಳ ಸಂಖ್ಯೆ = $x$ ಆಗಿರಲಿ
ಆದ್ದರಿಂದ ದೇಣಿಗೆ ಮೊತ್ತ$= x\times x = x^2$
$x^2 = 2401 \Rightarrow x = \sqrt{2401}$
$\sqrt{2401} = \sqrt{7\times7\times7\times7}$
$\sqrt{2401} = 7\times7 = 49$
ಆದ್ದರಿಂದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ = 49

**8. ಒಂದು ಉದ್ಯಾನವನದಲ್ಲಿ 2015 ಸಸಿಗಳನ್ನು ಅಡ್ಡಸಾಲು ಸಂಖ್ಯೆ ಎಷ್ಟಿವೆಯೋ ಅಷ್ಟೇ ಸಸಿಗಳನ್ನು ಪ್ರತಿಯೊಂದು ಅಡ್ಡಸಾಲಿನಲ್ಲಿ ಇರುವಂತೆ ನೆಡಬೇಕು. ಹಾಗದರೆ ಅಡ್ಡಸಾಲುಗಳ ಸಂಖ್ಯೆ ಹಾಗೂ ಪ್ರತಿ ಅಡ್ಡಸಾಲಿನಲ್ಲಿರುವ ಸಸಿಗಳ ಸಂಖ್ಯೆ ಕಂಡುಹಿಡಿಯಿರಿ.**

ಪರಿಹಾರ:

| | |
|---|---|
| 3 | 2025 |
| 3 | 0675 |
| 3 | 0225 |
| 3 | 0075 |
| 5 | 0025 |
| 5 | 0005 |
| | 0001 |

ಒಟ್ಟು ಸಸಿಗಳು = 2025
ಅಡ್ಡಸಾಲುಗಳ ಸಂಖ್ಯೆ = $x$ ಆಗಿರಲಿ
ಪ್ರತಿ ಅಡ್ಡಸಾಲಿನಲ್ಲಿರುವ ಸಸಿಗಳು= $x$
$x^2 = 2025$ $x = \sqrt{2025}$
$\sqrt{2025} = \sqrt{3\times3\times3\times3\times5\times5}$
$\sqrt{2025} = 3\times3\times5 = 45$
ಆದ್ದರಿಂದ ಒಟ್ಟು ಸಸಿಗಳ ಸಂಖ್ಯೆ = 45
ಪ್ರತಿ ಸಾಲಿನಲ್ಲಿರುವ ಸಸಿಗಳ ಸಂಖ್ಯೆ = 45

**9. 4, 9, 10 ರಿಂದ ಭಾಗವಾಗುವ ಕನಿಷ್ಠ ವರ್ಗ ಸಂಖ್ಯೆಯನ್ನು ಕಂಡುಹಿಡಿಯಿರಿ.**

**ಪರಿಹಾರ:**

4, 9, 10 ರ ಲ.ಸಾ.ಅ.ವನ್ನು ಮೊದಲ ಹಂತದಲ್ಲಿ ಕಂಡುಹಿಡಯಬೇಕು.

| | 4 | 9 | 10 |
|---|---|---|---|
| 2 | 2 | 9 | 5 |
| 2 | 1 | 9 | 5 |
| 3 | 1 | 3 | 5 |
| 3 | 1 | 1 | 5 |
| 5 | 1 | 1 | 1 |

ಲ.ಸಾ.ಅ. = $2 \times 2 \times 3 \times 3 \times 5 = 180$

ಇಲ್ಲಿ 180ರ ಅಪವರ್ತನಗಳಲ್ಲಿ 5 ಕ್ಕೆ ಜೋಡಿ ಇಲ್ಲ. ಆದ್ದರಿಂದ 180ನ್ನು ಪೂರ್ಣವರ್ಗ ಮಾಡಲು 5ಕ್ಕೆ ಜೋಡಿ ಮಾಡಬೇಕು.

ಆದ್ದರಿಂದ 5 ರಿಂದ 180ಕ್ಕೆ ಗುಣಿಸಬೇಕು.

$180 \times 5 = 900$

ಆದ್ದರಿಂದ 900 4, 9 ಮತ್ತು 10ರಿಂದ ಭಾಗವಾಗುವ ಕನಿಷ್ಠ ವರ್ಗ ಸಂಖ್ಯೆ.

**9. 8, 15, 20 ರಿಂದ ಭಾಗವಾಗುವ ಕನಿಷ್ಠ ವರ್ಗ ಸಂಖ್ಯೆಯನ್ನು ಕಂಡುಹಿಡಿಯಿರಿ.**

**ಪರಿಹಾರ:**

8, 15, 20 ರ ಲ.ಸಾ.ಅ.ವನ್ನು ಮೊದಲ ಹಂತದಲ್ಲಿ ಕಂಡುಹಿಡಯಬೇಕು.

| | 8 | 15 | 20 |
|---|---|---|---|
| 2 | 4 | 15 | 10 |
| 2 | 2 | 15 | 5 |
| 2 | 1 | 15 | 5 |
| 3 | 1 | 5 | 5 |
| 5 | 1 | 1 | 1 |

ಲ.ಸಾ.ಅ. = $2 \times 2 \times 2 \times 3 \times 5 = 120$

ಇಲ್ಲಿ 120ರ ಅಪವರ್ತನಗಳಲ್ಲಿ 2, 3 ಮತ್ತು 5 ಕ್ಕೆ ಜೋಡಿ ಇಲ್ಲ. ಆದ್ದರಿಂದ 120ನ್ನು ಪೂರ್ಣವರ್ಗ ಮಾಡಲು 2, 3 ಮತ್ತು 5 ಕ್ಕೆ ಜೋಡಿ ಮಾಡಬೇಕು.

ಆದ್ದರಿಂದ $2 \times 3 \times 5 = 30$ ರಿಂದ 120ಕ್ಕೆ ಗುಣಿಸಬೇಕು.

$120 \times 30 = 3600$

ಆದ್ದರಿಂದ 3600, 8, 15 ಮತ್ತು 20ರಿಂದ ಭಾಗವಾಗುವ ಕನಿಷ್ಠ ವರ್ಗ ಸಂಖ್ಯೆ.

## ಅಭ್ಯಾಸ 5.4

**1. ಈ ಕೆಳಗಿನ ಸಂಖ್ಯೆಗಳ ವರ್ಗಮೂಲಗಳನ್ನು ಭಾಗಕಾರ ವಿಧಾನದಿಂದ ಕಂಡುಹಿಡಿಯಿರಿ.**

**(i) 2304 (ii) 4489 (iii) 3481 (iv) 529 (v) 3249 (vi) 1369 (vii) 5776 (viii) 7921 (ix) 576 (x) 1024 (xi) 3136 (xii) 900**

**ಪರಿಹಾರ:**

**(i) 2304**

| 4 | $\overline{23}\ \overline{04}$ | 48 |
|---|---|---|
| +4 | 16 ↓ | |
| 88 | 07 04 | |
| | 07 04 | |
| | 0 | |

$\sqrt{2304} = 48$

**(ii) 4489**

| 6 | $\overline{44}\ \overline{89}$ | 67 |
|---|---|---|
| +6 | 36 ↓ | |
| 127 | 08 89 | |
ಮೇಲಿನ ಪ್ರತಿ ಘನಾಕೃತಿಯೂ ಅದರ ಮುಖಗಳೆಂದು ಕರೆಯುವ ಬಹುಭುಜಾಕೃತಿಯ ಪ್ರದೇಶಗಳಿಂದ ಮಾಡಲ್ಪಟ್ಟಿದೆ. ಈ ಮುಖಗಳು ಸರಳರೇಖಾಖಂಡಗಳಾದ ಅಂಚುಗಳಲ್ಲಿ ಸಂಧಿಸುತ್ತವೆ. ಅಂಚುಗಳು ಶೃಂಗಗಳೆಂಬ ಬಿಂದುಗಳಲ್ಲಿ ಸಂಧಿಸುತ್ತವೆ. ಇಂಥ ಘನಾಕೃತಿಗಳಿಗೆ ಬಹುಮುಖಿ (Polyhedron) ಗಳೆಂದು ಕರೆಯಲಾಗುತ್ತದೆ.



**ಇವುಗಳನ್ನು ಬಹುಮುಖಿ ಘನಗಳು**



ಇವುಗಳನ್ನು ಬಹುಮುಖಿ ಘನಗಳಲ್ಲ

**ಬಹುಮುಖಿ ಘನಗಳ ಆಯ್ಲರನ ಸೂತ್ರ:**

**F + V = E + 2**

F– ಮುಖಗಳ ಸಂಖ್ಯೆ. V – ಶೃಂಗಗಳ ಸಂಖ್ಯೆ

E – ಅಂಚುಗಳ ಸಂಖ್ಯೆ

**ಪೀನ(convex)ಬಹುಮುಖಿಗಳು:**



**ನಿಯಮಿತ ಬಹುಮುಖಿಗಳು**

**(Regular Polyhedron):**

ಒಂದು ಬಹುಮುಖಿಯ ಎಲ್ಲ ಮುಖಗಳೂ ಸಮವಾದ ಬಹುಭುಜಾಕೃತಿಗಳಾಗಿದ್ದು ಪ್ರತಿ ಶೃಂಗದಲ್ಲಿ ಒಂದೇ ಸಂಖ್ಯೆಯ ಮುಖಗಳು ಸಂಧಿಸಿದರೆ ಅದನ್ನು ಸಮ ಬಹುಮುಖಿ ಎನ್ನಲಾಗುತ್ತದೆ.



## ಅಭ್ಯಾಸ 7.1

**1. ಕೆಳಗಿನ ಘನಾಕೃತಿಯನ್ನು ಮೇಲಿನಿಂದ ಮತ್ತು ಪಕ್ಕದಿಂದ ನೋಡಿದಾಗ ಕಾಣುವ ರೀತಿಯ ಚಿತ್ರಗಳನ್ನು ನೀಡಲಾಗಿದೆ. ಪ್ರತಿ ಆಕೃತಿಯನ್ನು ಅದರ ಮೇಲಿನ ಮತ್ತು ಪಕ್ಕದ ನೋಟಗಳೊಂದಿಗೆ ಹೊಂದಿಸಿ. ಮೊದಲನೆಯದನ್ನು, ನಿಮಗಾಗಿ ಮಾಡಲಾಗಿದೆ.**







**ಪರಿಹಾರ:** ಡಬ್ಬಿ

(a) – (iii) – (iv)

(b) – (i) – (v)

(c) – (iv) – (ii)

(d) – (v) – (iii)

(e) – (ii) – (i)

**2. ಕೆಳಗಿನ ಪ್ರತಿ ಆಕೃತಿಗೂ ಮೂರೂ ಕಡೆಯಿಂದ ತೋರಿಸಲಾಗಿದೆ. ಮೇಲಿನ, ಮುಂದಿನ ಮತ್ತು ಪಕ್ಕದ ನೋಟಗಳಾವುವು ಎಂದು ಗುರುತಿಸಿ.**



**ಪರಿಹಾರ:**

(a) (i) ಮುಂದೆ (ii) ಪಕ್ಕ (iii) ಮೇಲೆ
(b) (i) ಪಕ್ಕ (ii) ಮುಂದೆ (iii) ಮೇಲೆ
(c) (i) ಮುಂದೆ (ii) ಪಕ್ಕ (iii) ಮೇಲೆ
(d) (i) ಮುಂದೆ (ii) ಪಕ್ಕ (iii) ಮೇಲೆ

**3. ಪ್ರತಿ ಆಕೃತಿಯ ಮೇಲಿನ, ಮುಂದಿನ ಮತ್ತು ಪಕ್ಕದ ನೋಟಗಳಾವುವು ಎಂದು ಗುರುತಿಸಿ.**

**(a)**




**(b)**




**(c)**




**(d)**




**(e)**




**ಪರಿಹಾರ:**

(a) (i) ಮೇಲೆ (ii) ಮುಂದೆ (iii) ಪಕ್ಕ
(b) (i) ಪಕ್ಕ (ii) ಮುಂದೆ (iii) ಮೇಲೆ
(c) (i) ಮೇಲೆ (ii) ಪಕ್ಕ (iii) ಮುಂದೆ
(d) (i) ಪಕ್ಕ (ii) ಮುಂದೆ (iii) ಮೇಲೆ
(e) (i) ಮುಂದೆ (ii) ಮೇಲೆ (iii) ಪಕ್ಕ

**4. ಈ ವಸ್ತುಗಳ ಮುಂಭಾಗದ ನೋಟ, ಪಕ್ಕದ ನೋಟ ಮತ್ತು ಮೇಲಿನ ನೋಟಗಳನ್ನು ಬರೆಯಿರಿ.**




**ಪರಿಹಾರ:** ಮುಂದೆ ಪಕ್ಕ ಮೇಲೆ



## ಅಭ್ಯಾಸ 7.2

1. ಒಂದು ನಗರದ ಕೆಳಗಿನ ನಕ್ಷೆಯನ್ನು ನೋಡಿ.




(a) ಕೆಳಗಿನಂತೆ ನಕ್ಷೆಗೆ ಬಣ್ಣ ಹಚ್ಚಿ:
ನೀಲಿ–ನೀರು, ಕೆಂಪು–ಅಗ್ನಿಶಾಮಕ ಠಾಣೆ, ಕೇಸರಿ ಗ್ರಂಥಾಲಯ, ಹಳದಿ–ಶಾಲೆಗಳು, ಹಸಿರು–ಉದ್ಯಾನಗಳು ಗುಲಾಬಿ–ಕಾಲೇಜು, ಸಮುದಾಯ–ಭವನ, ನೇರಳೆ–ಆಸ್ಪತ್ರೆ, ಕಂದು–ಸ್ಮಶಾನ.

(b) ರಸ್ತೆ `C' ಮತ್ತು ನೆಹರು ರಸ್ತೆ ಸಂಧಿಸುವಲ್ಲಿ ಹಸಿರು ಬಣ್ಣದಲ್ಲಿ 'X' ಗುರುತಿಸಿ, ಗಾಂಧಿ ರಸ್ತೆ ಮತ್ತು ರಸ್ತೆ `A' ಸಂಧಿಸುವಲ್ಲಿ ಹಸಿರು ಬಣ್ಣದಲ್ಲಿ 'Y' ಗುರುತಿಸಿ.

(c) ಕೆಂಪು ಬಣ್ಣದಲ್ಲಿ, ಗ್ರಂಥಾಲಯದಿಂದ ಬಸ್ ಡಿಪೋಗೆ ಹೋಗುವ ಹತ್ತಿರದ ರಸ್ತೆ ಮಾರ್ಗವನ್ನು ತೋರಿಸಿರಿ.

(d) ಯಾವುದು ಹೆಚ್ಚು ಪೂರ್ವಕ್ಕಿದೆ, ನಗರ ಉದ್ಯಾನ ಅಥವಾ ಮಾರುಕಟ್ಟೆ?

(e) ಯಾವುದು ಹೆಚ್ಚು ದಕ್ಷಿಣಕ್ಕಿದೆ, ಪ್ರಾಥಮಿಕ ಶಾಲೆ ಅಥವಾ ಹಿ.ಪ್ರಾ.ಶಾಲೆ?

**ಪರಿಹಾರ:**

ಇದು ಸೃಜನಾತ್ಮಕ ಚಟುವಟಿಕೆ – ನಿ ಮಾಡಿ

2. ಬೇರೆಬೇರೆ ವಸ್ತುಗಳಿಗೆ ಸೂಕ್ತವಾದ ಚಿಹ್ನೆಗಳನ್ನು ಬಳಸಿ ಅಳತೆಗೆ ಅನುಗುಣವಾಗಿ ನಿಮ್ಮ ತರಗತಿಯ ನಕ್ಷೆ ಬರೆಯಿರಿ.

**ಪರಿಹಾರ:**

ಇದು ಚಟುವಟಿಕೆ – ನೀವೇ ಮಾಡಿ

3. ಆಟದ ಮೈದಾನ, ಮುಖ್ಯ ಕಟ್ಟಡ, ಉದ್ಯಾನ ಇತ್ಯಾದಿಗಳಿಗೆ ಸೂಕ್ತ ಚಿಹ್ನೆಗಳನ್ನು ಬಳಸಿ ಅಳತೆಗೆ ಅನುಗುಣವಾಗಿ ನಿಮ್ಮ ಶಾಲಾ ಆವರಣದ ನಕ್ಷೆ ಬರೆಯಿರಿ.

**ಪರಿಹಾರ:**

ಇದು ಚಟುವಟಿಕೆ – ನೀವೇ ಮಾಡಿ

4. ನಿಮ್ಮ ಗೆಳತಿ ನಿಮ್ಮ ಮನೆಗೆ ದಾರಿ ತಪ್ಪದೆ ತಲುಪಲು ಸಹಾಯವಾಗುವಂತೆ ಅವರ ಮನೆಯಿಂದ ನಿಮ್ಮ ಮನೆಗೆ ಒಂದು ನಕ್ಷೆ ಬರೆದು ಕೊಡಿ.

**ಪರಿಹಾರ:**

ಇದು ಚಟುವಟಿಕೆ – ನೀವೇ ಮಾಡಿ

## ಅಭ್ಯಾಸ 7.3

1. ಒಂದು ಬಹುಮುಖಿ ತನ್ನ ಮುಖಗಳಾಗಿ ಇವನ್ನು ಹೊಂದಬಹುದೇ?

(i) ಮೂರು ತ್ರಿಕೋನಗಳು

(ii) ನಾಲ್ಕು ತ್ರಿಕೋನಗಳು

(iii) ಒಂದು ಚೌಕ ಮತ್ತು ನಾಲ್ಕು ತ್ರಿಕೋನಗಳು

**ಪರಿಹಾರ:**

(i) ಮೂರು ತ್ರಿಕೋನಗಳು – ಸಾಧ್ಯವಿಲ್ಲ

(ii) ನಾಲ್ಕು ತ್ರಿಕೋನಗಳು – ಸಾಧ್ಯ ಇದನ್ನು ತ್ರಿಕೋನ ಪಾದ ಪಟ್ಟಕ ಎನ್ನುವರು.

(iii) ಒಂದು ಚೌಕ ಮತ್ತು ನಾಲ್ಕು ತ್ರಿಕೋನಗಳು ಸಾಧ್ಯ – ವರ್ಗಪಾದ ಗೋಪುರ ಎನ್ನುವರು

2. ಯಾವುದೇ ಸಂಖ್ಯೆಯ ಮುಖಗಳನ್ನು ಹೊಂದಿರುವ ಬಹುಮುಖಿ ಇರಲು ಸಾಧ್ಯವೇ? (ಸೂಚನೆ ಗೋಪುರದ ಬಗ್ಗೆ ಯೋಚಿಸಿ).

**ಪರಿಹಾರ:**

ಮುಖಗಳ ಸಂಖ್ಯೆ 4 ಅಥವಾ 4ಕ್ಕಿಂತ ಹೆಚ್ಚು ಇದ್ದರೆ ಸಾಧ್ಯ

3. ಕೆಳಗಿನಲ್ಲಿ ಯಾವುವು ಪ್ರಿಸಮ್‌ಗಳು?

(i)



ಮೊಳೆ

(ii)



ಚೂಪು ಮಾಡಿಲ್ಲದ ಪೆನ್ಸಿಲ್

(iii)



ಪೇಪರ್ ವೈಟ್

(iv)



ಡಬ್ಬಿ

**ಪರಿಹಾರ:**

(ii) ಚೂಪು ಮಾಡದ ಪೆನ್ಸಿಲ್ ಮತ್ತು (iv) ಡಬ್ಬಿ ಇವು ಪ್ರಿಸಮ್‌ಗಳು

**4. (i) ಪಟ್ಟಕಗಳು ಮತ್ತು ಸಿಲಿಂಡರ್‌ಗಳು ಯಾವ ರೀತಿಯಲ್ಲಿ ಹೋಲುತ್ತವೆ?**

**(ii) ಗೋಪುರಗಳು ಮತ್ತು ಶಂಕುಗಳು ಯಾವ ರೀತಿಯಲ್ಲಿ ಹೋಲುತ್ತವೆ?**

**ಪರಿಹಾರ:**

**(i) ಪಟ್ಟಕಗಳು ಮತ್ತು ಸಿಲಿಂಡರ್‌ಗಳು ಯಾವ ರೀತಿಯಲ್ಲಿ ಹೋಲುತ್ತವೆ?**

ಎರಡೂ ಆಕೃತಿಗಳು ಘನಾಕೃತಿಗಳಾಗಿವೆ. ಪಟ್ಟಕದ ಪಾದದ ಬಾಹುಗಳು ಹೆಚ್ಚಾಗುತ್ತಾ ಹೋದಂತೆ ಅದು ಸಿಲಿಂಡರಿನಾಕಾರಕ್ಕೆ ಬರುತ್ತದೆ.

**(ii) ಗೋಪುರಗಳು ಮತ್ತು ಶಂಕುಗಳು ಯಾವ ರೀತಿಯಲ್ಲಿ ಹೋಲುತ್ತವೆ?**

ಎರಡೂ ಆಕೃತಿಗಳು ಘನಾಕೃತಿಗಳಾಗಿವೆ. ಗೋಪುರದ ಪಾದದ ಬಾಹುಗಳು ಹೆಚ್ಚಾಗುತ್ತಾ ಹೋದಂತೆ ಅದು ಶಂಕುವಿನಾಕಾರಕ್ಕೆ ಬರುತ್ತದೆ.

**5. ಚೌಕಾಕಾರದ ಪಟ್ಟಕ ಮತ್ತು ಘನ ಎರಡೂ ಒಂದೆಯೇ? ವಿವರಿಸಿ.**

**ಪರಿಹಾರ:**

ಚೌಕ ಪಟ್ಟಕವು ಆಯತಘನವೂ ಆಗಿರಬಹುದು. ಆದ್ದರಿಂದ ಅದು ಒಂದೇ ಆಗಿರಬೇಕಾಗಿಲ್ಲ.

**6. ಕೆಳಗಿನ ಆಕೃತಿಗಳಿಗೆ ಆಯ್ಲರ್ ಸೂತ್ರವನ್ನು ಪರಿಶೀಲಿಸಿ ನೋಡಿ.**




**ಪರಿಹಾರ:**

(i) F = 7 ; V = 10; E = 10
ಆಯ್ಲರನ ಸೂತ್ರ:

F + V = E + 2

F– ಮುಖಗಳ ಸಂಖ್ಯೆ. V – ಶೃಂಗಗಳ ಸಂಖ್ಯೆ

E – ಅಂಚುಗಳ ಸಂಖ್ಯೆ

7 + 10 = 15 + 2
17 = 17

ಆಯ್ಲರನ ಸೂತ್ರ ಸರಿಹೊಂದುತ್ತದೆ.

(i) F = 9 ; V = 9; E = 16
ಆಯ್ಲರನ ಸೂತ್ರ:

F + V = E + 2
9 + 9 = 16 + 2
18 = 18

ಆಯ್ಲರನ ಸೂತ್ರ ಸರಿಹೊಂದುತ್ತದೆ.

**7. ಆಯ್ಲರ್ ಸೂತ್ರವನ್ನು ಉಪಯೋಗಿಸಿ ಬಿಟ್ಟು ಹೋಗಿರುವ ಸಂಖ್ಯೆಗಳನ್ನು ತುಂಬಿ:**

| | | | |
|---|---|---|---|
| ಮುಖಗಳು | **?** | **5** | **20** |
| ಶೃಂಗಗಳು | **6** | **?** | **12** |
| ಅಂಚುಗಳು | **12** | **9** | **?** |

**ಪರಿಹಾರ:**

| | | | |
|---|---|---|---|
| ಮುಖಗಳು | 8 | 5 | 20 |
| ಶೃಂಗಗಳು | 6 | 6 | 12 |
| ಅಂಚುಗಳು | 12 | 9 | 30 |

F– ಮುಖಗಳ ಸಂಖ್ಯೆ. V – ಶೃಂಗಗಳ ಸಂಖ್ಯೆ

E – ಅಂಚುಗಳ ಸಂಖ್ಯೆ

**F + V = E + 2**
F + 6 = 12 + 2
F = 14 – 6

**F = 8**
**F + V = E + 2**
5 + V = 9 + 2
V = 11 – 5
**V = 6**
**F + V = E + 2**
20 + 12 = E + 2
32 = E + 2
**E = 32 – 2**
**E = 30**

**8. ಒಂದು ಪಾಲಿಹೆಡ್ರನ್ 10 ಮುಖಗಳು, 20 ಅಂಚುಗಳು, ಮತ್ತು 15 ಶೃಂಗಗಳನ್ನು ಹೊಂದಬಲ್ಲುದೇ?**

**ಪರಿಹಾರ:**

F– ಮುಖಗಳ ಸಂಖ್ಯೆ. V – ಶೃಂಗಗಳ ಸಂಖ್ಯೆ

E – ಅಂಚುಗಳ ಸಂಖ್ಯೆ

F + V = 10 + 15 = 25
E + 2 = 20 + 2 = 22
ಇಲ್ಲಿ F + V ≠ E + 2

ಆದ್ದರಿಂದ ಒಂದು ಪಾಲಿಹೆಡ್ರನ್ 10 ಮುಖಗಳು, 20 ಅಂಚುಗಳು, ಮತ್ತು 15 ಶೃಂಗಗಳನ್ನು ಹೊಂದಲು ಸಾಧ್ಯವಿಲ್ಲ.

YK

ಪರಿಷ್ಕೃತ ಪಠ್ಯ

Attractive Maths Solution

# ಗಣಿತ

# Mathematics

## ಕನ್ನಡ ಮಾಧ್ಯಮ

## ಭಾಗ–1

## ಅಧ್ಯಾಯ 1

## ಸಂಖ್ಯೆಗಳೊಂದಿಗೆ ಆಟ

## Playing with numbers

Copy rights reserved

# 8ನೇ ತರಗತಿ – ಅಧ್ಯಾಯ 1
# ಸಂಖ್ಯೆಗಳೊಂದಿಗೆ ಆಟ

**ಕಲಿಕಾಂಶಗಳು:**

- ಸಂಖ್ಯೆಗಳ ವಿಸ್ತೃತ ರೂಪ
- ಸಂಖ್ಯೆಗಳೊಂದಿಗೆ ಆಟ
  - ❖ ಎರಡಂಕಿಯ ಸಂಖ್ಯೆಗಳನ್ನು ಅದಲು ಬದಲು ಮಾಡುವುದು
  - ❖ ಮೂರಂಕಿಯ ಸಂಖ್ಯೆಯ ಅಂಕಿಗಳನ್ನು ವಿರುದ್ಧ ದಿಕ್ಕಿನಲ್ಲಿ ಬರೆಯುವುದು
  - ❖ ಕೊಟ್ಟ ಮೂರು ಅಂಕಿಗಳಿಗೆ ಮೂರು ಸಂಖ್ಯೆಗಳನ್ನು ರಚಿಸುವುದು.
- ಅಂಕಿಗಳ ಸ್ಥಾನದಲ್ಲಿ ಅಕ್ಷರಗಳು
- ಭಾಜ್ಯತೆಯ ಪರೀಕ್ಷೆಗಳು
  - ❖ 10 ರ ಭಾಜ್ಯತೆಯ ನಿಯಮ
  - ❖ 5ರ ಭಾಜ್ಯತೆಯ ನಿಯಮ
  - ❖ 2ರಭಾಜ್ಯತೆಯ ನಿಯಮ
  - ❖ 3 ಮತ್ತು 9ರ ಭಾಜ್ಯತೆಯ ನಿಯಮ

**ಸಂಖ್ಯೆಗಳ ವಿಸ್ತೃತ ರೂಪ**

**ಇವುಗಳನ್ನು ಪ್ರಯತ್ನಿಸಿ:**

**1 ಕೆಳಗಿನವುಗಳನ್ನು ವಿಸ್ತೃತ ರೂಪದಲ್ಲಿ ಬರೆಯಿರಿ.**

**(2) 25**

$25 = 10 \times 2 + 5$

**(ii) 73**

$73 = 10 \times 7 + 3$

**(iii) 129**

$129 = 100 \times 1 + 10 \times 2 + 3$

(iv) 302

$302 = 100 \times 3 + 10 \times 0 + 2$

**2.** ಈ ಕೆಳಗಿನವುಗಳನ್ನು ಸಾಮಾನ್ಯ ರೂಪದಲ್ಲಿ ಬರೆಯಿರಿ.

(i) $10 \times 5 + 6 = 56$

(ii) $100 \times 7 + 10 \times 1 + 8 = 718$

(iii) $100 \times a + 10 \times b + c = abc$

**ಸಂಖ್ಯೆಗಳೊಂದಿಗೆ ಆಟ:**

**ಎರಡಂಕಿಯ ಸಂಖ್ಯೆಯನ್ನು ಅದಲು ಬದಲು ಮಾಡುವುದು:**

**ಮೊತ್ತ ಕಂಡುಹಿಡಿಯುವುದು:**

ಇವುಗಳನ್ನು ಪ್ರಯತ್ನಿಸಿ:

ಸುಂದರಂ ಈ ಕೆಳಗಿನ ಸಂಖ್ಯೆಗಳನ್ನು ಆರಿಸುತ್ತಿದ್ದರೆ ಉತ್ತರ ಏನಾಗುತ್ತಿತ್ತು ಎಂದು ಪರೀಕ್ಷಿಸಿ.

**(i) 27**

$27 + 72 = 99 = 11 \times 9$

**(ii) 39**

$39 + 93 = 132 = 11 \times 12$

**(iii) 64**

$64 + 46 = 110 = 11 \times 10$

**(iv) 17**

$17 + 71 = 88 = 11 \times 8$

ಮೇಲಿನ ಎಲ್ಲಾ ಉದಾಹರಣೆಗಳಲ್ಲಿ ಮೊತ್ತವು 11ರಿಂದ ಭಾಗವಾಗುತ್ತದೆ.

**ವಿವರಣೆ:**

ಒಂದು ಎರಡಂಕಿಯ ಸಂಖ್ಯೆ – ab

ಸ್ಥಾನವನ್ನು ಅದಲು ಬದಲು ಮಾಡಿದಾಗ – bc

ವಿಸ್ತೃತ ರೂಪದಲ್ಲಿ ಬರೆದಾಗ,

$10 \times a + b$

$10 \times b + a$

ಇವುಗಳ ಮೊತ್ತ $11a + 11b = 11(a + b)$ ಇಲ್ಲಿ ಕೂಡಿದಾಗ ಬರುವ ಪ್ರತಿಯೊಂದು ಮೊತ್ತವು 11 ರ ಅಪವರ್ತನವಾಗಿರುವುದರಿಂದ 11 ರಿಂದ ನಿಶ್ಶೇಷವಾಗಿ ಭಾಗವಾಗಲೇ ಬೇಕು.

**ವ್ಯತ್ಯಾಸ ಕಂಡುಹಿಡಿಯುವುದು:**

**ಒಂದು ಎರಡಂಕಿಯ ಸಂಖ್ಯೆಯ ಅಂಕಿಗಳನ್ನು ಅದಲು ಬದಲು ಮಾಡಿ, ದೊಡ್ಡ ಸಂಖ್ಯೆಯಿಂದ ಚಿಕ್ಕ ಸಂಖ್ಯೆಯನ್ನು ಕಳೆದರೆ ವ್ಯತ್ಯಾಸವು 9ರಿಂದ ನಿಶ್ಶೇಷವಾಗಿ ಭಾಗವಾಗುವುದು.**

ಸುಂದರಂ ಈ ಕೆಳಗಿನ ಸಂಖ್ಯೆಗಳನ್ನು ಆರಿಸುತ್ತಿದ್ದರೆ ಉತ್ತರ ಏನಾಗುತ್ತಿತ್ತು ಎಂದು ಪರೀಕ್ಷಿಸಿ.

**(i) 17**

$71 - 17 = 54 = 9 \times 6$

**(ii) 21**

$21 - 12 = 9 = 9 \times 1$

**(iii) 96**

$96 - 69 = 27 = 9 \times 3$

**(iv) 37**

$73 - 37 = 36 = 9 \times 4$

ಮೇಲಿನ ಎಲ್ಲಾ ಉದಾಹರಣೆಗಳಲ್ಲಿ ವ್ಯತ್ಯಾಸವು 9 ರಿಂದ ಭಾಗವಾಗುತ್ತದೆ.

**ವಿವರಣೆ:**

ಒಂದು ಎರಡಂಕಿಯ ಸಂಖ್ಯೆ – ab

ಸ್ಥಾನವನ್ನು ಅದಲು ಬದಲು ಮಾಡಿದಾಗ – bc

ವಿಸ್ತೃತ ರೂಪದಲ್ಲಿ ಬರೆದಾಗ,

$10 \times a + b$

$10 \times b + a$

$10 \times a + b - (10 \times b + a) \quad (a > b)$

$10a - a + b - 10b$

$9a - 9b$

$9(a - b)$

**ಇದೇ ರೀತಿ $(b > a)$ ಆಗಿದ್ದರೆ $9(b - a)$ ಆಗುವುದು.**

ಇಲ್ಲಿ ದೊಡ್ಡ ಸಂಖ್ಯೆಯಿಂದ ಚಿಕ್ಕ ಸಂಖ್ಯೆಯನ್ನು ಕಳೆದಾಗ ಬರುವ ಪ್ರತಿಯೊಂದು ವ್ಯತ್ಯಾಸವೂ 9 ರ ಅಪವರ್ತನವಾಗಿರುವುದರಿಂದ 9 ರಿಂದ ನಿಶ್ಶೇಷವಾಗಿ ಭಾಗವಾಗಲೇ ಬೇಕು.

**ಮೂರಂಕಿಯ ಸಂಖ್ಯೆಯ ಅಂಕಿಗಳನ್ನು ವಿರುದ್ಧ ದಿಕ್ಕಿನಲ್ಲಿ ಬರೆಯುವುದು.**

**(i) 132**

$231 - 132 = 99 = 99 \times 1$

**(ii) 469**

$964 - 469 = 495 = 99 \times 5$

**(iii) 737**

$737 - 737 = 0 = 99 \times 0$

**(iv) 901**

$901 - 109 = 792 = 99 \times 8$

ಮೇಲಿನ ಎಲ್ಲಾ ಉದಾಹರಣೆಗಳಲ್ಲಿ ವ್ಯತ್ಯಾಸವು 99 ರಿಂದ ಭಾಗವಾಗುತ್ತದೆ.

**ವಿವರಣೆ:**

ಒಂದು ಎರಡಂಕಿಯ ಸಂಖ್ಯೆ – abc

ಸ್ಥಾನವನ್ನು ಅದಲು ಬದಲು ಮಾಡಿದಾಗ – cba

ವಿಸ್ತೃತ ರೂಪದಲ್ಲಿ ಬರೆದಾಗ,

$100 \times a + 10b + c$

$100 \times c + 10b + a$

$100a + 10b + c - (100c + 10b + a)$

$(a > c)$

$100a + 10b + c - 100c - 10b - a$

$99a - 99c$

$99(a - c)$

**ಇದೇ ರೀತಿ $(c > a)$ ಆಗಿದ್ದರೆ $99(c - a)$ ಆಗುವುದು.**

ಇಲ್ಲಿ ದೊಡ್ಡ ಸಂಖ್ಯೆಯಿಂದ ಚಿಕ್ಕ ಸಂಖ್ಯೆಯನ್ನು ಕಳೆದಾಗ ಬರುವ ಪ್ರತಿಯೊಂದು ವ್ಯತ್ಯಾಸವೂ 99 ರ ಅಪವರ್ತನವಾಗಿರುವುದರಿಂದ 99 ರಿಂದ ನಿಶ್ಶೇಷವಾಗಿ ಭಾಗವಾಗಲೇ ಬೇಕು.

**ಕೊಟ್ಟ ಮೂರು ಅಂಕಿಗಳಿಂದ ಮೂರು ಸಂಖ್ಯೆ ರಚಿಸುವುದು:**

ಗಮನಿಸಿ: ಇಲ್ಲಿ ಯಾವ ಅಂಕಿಯೂ ಒಂದು ಸ್ಥಾನದಲ್ಲಿ ಪುನರಾವರ್ತನೆ ಆಗಬಾರದು.

**ಇವುಗಳನ್ನು ಪ್ರಯತ್ನಿಸಿ:**

**(i) 417**

$417 + 174 + 741 = 1332 = 37 \times 36$

**(ii) 632**

$632 + 326 + 263 = 1221 = 37 \times 33$

**(iii) 117**

$117 + 711 + 171 = 999 = 37 \times 27$

**(iv) 937**

$937 + 793 + 379 = 2109 = 37 \times 57$

ಮೇಲಿನ ಎಲ್ಲಾ ಉದಾಹರಣೆಗಳಲ್ಲಿ ಮೊತ್ತವು 37 ರಿಂದ ಭಾಗವಾಗುತ್ತದೆ.

**ವಿವರಣೆ:**

ಒಂದು ಎರಡಂಕಿಯ ಸಂಖ್ಯೆ – abc

ಸ್ಥಾನವನ್ನು ಅದಲು ಬದಲು ಮಾಡಿದಾಗ – cba

ವಿಸ್ತೃತ ರೂಪದಲ್ಲಿ ಬರೆದಾಗ,

$100 \times a + 10 \times b + c$

$100 \times b + 10 \times c + a$

$100 \times c + 10 \times a + b$

$111 \times a + 111b + 111c$

$111(a + b + c)$

$37 \times 3(a + b + c)$

ಇಲ್ಲಿ ಎಲ್ಲಾ ಮೊತ್ತಗಳೂ 37 ನ್ನು ಸಾಮಾನ್ಯ ಅಪವರ್ತನವಾಗಿ ಹೊಂದಿರುವುದರಿಂದ ಅವು 37ರಿಂದ ನಿಶ್ಶೇಷವಾಗಿ ಭಾಗವಾಗಲೇಬೇಕು.

**ಅಂಕಿಗಳ ಸ್ಥಾನದಲ್ಲಿ ಅಕ್ಷರಗಳು:**

ಸಂಖ್ಯೆಯಲ್ಲಿ ಅಂಕಿಗಳ ಸ್ಥಾನದಲ್ಲಿ ಅಕ್ಷರಗಳನ್ನು ಬಳಸಿ, ಆ ಅಕ್ಷರಗಳ ಬೆಲೆಯನ್ನು ಕಂಡುಹಿಡಿಯುವುದು.

ಇಲ್ಲಿ ಎರಡು ನಿಯಮಗಳಿವೆ.

- ಒಂದು ಅಕ್ಷರ ಒಂದು ಅಂಕಿಯನ್ನು ಅಥವಾ ಒಂದು ಅಂಕಿ ಒಂದು ಅಕ್ಷರವನ್ನು ಮಾತ್ರ ಸೂಚಿಸಬೇಕು.
- ಯಾವುದೇ ಸಂಖ್ಯೆಯ ಮೊದಲ ಅಂಕಿ ಸೊನ್ನೆ ಬರೆಯಬಾರದು.

**ಉದಾಹರಣೆ 1: Q ಅಕ್ಷರದ ಬೆಲೆಯನ್ನು ಕಂಡುಹಿಡಿಯಿರಿ.**

| | | |
|---|---|---|
| 3 | 1 | Q |
| 1 | Q | 3 |
| 5 | 0 | 1 |

**ಪರಿಹಾರ:**

ಇಲ್ಲಿ ಬಿಡಿಸ್ಥಾನದಲ್ಲಿ Q + 3 ಮಾಡಿದಾಗ ಮೊತ್ತದ ಬಿಡಿಸ್ಥಾನದಲ್ಲಿ 1 ಬರಬೇಕು. 1 ಬರಬೇಕಾದರೆ Q = 8 ಆಗಿದ್ದರೆ ಮಾತ್ರ ಸಾಧ್ಯ. 8 + 3 = 11 ಆಗುತ್ತದೆ.

**ಉದಆಹರಣೆ 2: ಕೆಳಗಿನ ಮೊತ್ತದಲ್ಲಿ A ಮತ್ತು B ಗಳ ಬೆಲೆಯನ್ನು ಕಂಡುಹಿಡಿಯಿರಿ.**

| |
|---|
| A |
| +A |
| +A |
| BA |

**ಪರಿಹಾರ:**

ಇಲ್ಲಿ ಒಂದು ಅಂಕಿಯನ್ನು 3 ಬಾರಿ ಕೂಡಿಸಿದಾಗ ಅದೇ ಅಂಕಿ ಬರಬೇಕಾದರೆ ಅದು 5 ಅಥವಾ 0 ಮಾತ್ರ ಆಗಿರಲು ಸಾಧ್ಯ. ಆದರೆ ಈ ಲೆಕ್ಕದಲ್ಲಿ 0 ಸಾಧ್ಯವಿಲ್ಲ. ಏಕೆಂದರೆ A = 0 ಆದರೆ B = 0 ಆಗುತ್ತದೆ. ಆದರೆ ಒಂದು ಅಂಕಿಯು ಒಂದು ಅಕ್ಷರವನ್ನು ಮಾತ್ರ ಪ್ರತಿಸಿಧಿಸಬೇಕು. ಆದ್ದರಿಂದ 5 + 5 + 5 = 15 ಆಗಿದ್ದು A = 5 ಮತ್ತು B = 1 ಆಗಿದೆ.

**ಉದಾಹರಣೆ 3: A ಮತ್ತು B ಗಳ ಬೆಲೆ ಕಂಡುಹಿಡಿಯಿರಿ.**

| | | |
|---|---|---|
| | B | A |
| × | B | 3 |
| 5 | 7 | A |

**ಪರಿಹಾರ:**

ಇಲ್ಲಿ 3×A = A ಬರಬೇಕಾದರೆ A = 0 ಅಥವಾ A = 5 ಆಗಿದ್ದರೆ ಮಾತ್ರ ಸಾಧ್ಯ.

ಇನ್ನು B = 1 ಆಗಿದ್ದರೆ, ಗರಿಷ್ಠ ಸಂಖ್ಯೆ

19 × 13 = 247, ಆದರೆ ಗುಣಲಬ್ಧ 570ರಿಂದ 579ರ ಒಳಗಿರಬೇಕು.

B = 2 ಆದರೆ , ಗರಿಷ್ಠ 29 × 23 = 667 ಇರುವುದರಿಂದ ಇಲ್ಲಿ 25 × 23 = 575 ಆಗುತ್ತದೆ.

ಆದ್ದರಿಂದ A = 5 ಮತ್ತು B = 2 ಆಗಿದೆ.

ಅಭ್ಯಾಸ: 1.1

**ಭಾಜ್ಯತೆಯ ನಿಯಮ:**

**10ರ ಭಾಜ್ಯತೆ:**

ಯಾವುದೇ ಒಂದು ಸಂಖ್ಯೆಯ ಬಿಡಿಸ್ಥಾನದಲ್ಲಿ '0' ಬಂದರೆ ಮಾತ್ರ ಅದು 10ರಿಂದ ಭಾಗವಾಗುತ್ತದೆ.

**5ರ ಭಾಜ್ಯತೆಯ ನಿಯಮ:**

ಯಾವುದೇ ಒಂದು ಸಂಖ್ಯೆಯ ಬಿಡಿಸ್ಥಾನದಲ್ಲಿ 0 ಅಥವಾ 5 ಬಂದರೆ ಮಾತ್ರ ಅದು 5ರಿಂದ ಭಾಗವಾಗುತ್ತದೆ.

**2ರ ಭಾಜ್ಯತೆಯ ನಿಯಮ:**

ಯಾವುದೇ ಒಂದು ಸಂಖ್ಯೆಯ ಬಿಡಿಸ್ಥಾನದಲ್ಲಿ ಸಮಸಂಖ್ಯೆಗಳು ಬಂದರೆ ಮಾತ್ರ ಅದು 2ರಿಂದ ಭಾಗವಾಗುತ್ತದೆ.

**3 ಮತ್ತು 9ರ ಭಾಜ್ಯತೆಯ ನಿಯಮ:**

ಯಾವುದೇ ಸಂಖ್ಯೆಯ ಅಂಕಿಗಳ ಮೊತ್ತ 3ರಿಂದ ಭಾಗವಾದರೆ ಆ ಸಂಖ್ಯೆಯು 3ರಿಂದ ಭಾಗಿಸಲ್ಪಡುತ್ತದೆ.

**ಉದಹಾರಣೆ:**

14637 – 1 + 4 + 6 +3 +7 = 21 =2+1 = 3

ಮೊತ್ತ 3, 3ರಿಂದ ಭಾಗವಾಗುತ್ತದೆ. ಆದ್ದರಿಂದ ದತ್ತ ಸಂಖ್ಯೆಯು 3ರಿಂದ ಭಾಗವಾಗುತ್ತದೆ.

ಯಾವುದೇ ಸಂಖ್ಯೆಯ ಅಂಕಿಗಳ ಮೊತ್ತ 9ರಿಂದ ಭಾಗವಾದರೆ, ಆ ಸಂಖ್ಯೆಯು 9ರಿಂದ ಭಾಗಿಸಲ್ಪಡುತ್ತದೆ.

**ಉದಾಹರಣೆ:**

34623 – 3+4+6+2+3 = 18

ಇಲ್ಲಿ ಅಂಕಿಗಳ ಮೊತ್ತ 18, 9ರಿಂದ ಭಾಗವಾಗುತ್ತದೆ. ಆದ್ದರಿಂದ ದತ್ತ ಸಂಖ್ಯೆಯು 9ರಿಂದ ಭಾಗವಾಗುತ್ತದೆ.

**ಉದಾಹರಣೆ 4: 9ರಿಂದ 21436587ರ ಭಾಜ್ಯತೆಯನ್ನು ಪರೀಕ್ಷಿಸಿ.**

**ಪರಿಹಾರ:**

21436587–2+1+4+3+6+5+8+7 =36

ಇಲ್ಲಿ 36, 9ರಿಂದ ಭಾಗವಾಗುತ್ತದೆ. ಆದ್ದರಿಂದ ದತ್ತ ಸಂಖ್ಯೆಯು 9 ರಿಂದ ಭಾಗವಾಗುತ್ತದೆ.

**ಉದಾಹರಣೆ 5: 9ರಿಂದ 152875ರ ಭಾಜ್ಯತೆಯನ್ನು ಪರೀಕ್ಷಿಸಿ.**

**ಪರಿಹಾರ:**

152875 – 1+5+2+8+7+5 = 28

28, 9ರಿಂದ ಭಾಗವಾಗುವುದಿಲ್ಲ. ಆದ್ದರಿಂದ ದತ್ತ ಸಂಖ್ಯೆಯು 9ರಿಂದ ಭಾಗಿಸಲ್ಪಡುವುದಿಲ್ಲ.

**ಉದಾಹರಣೆ 6: ಒಂದು ಮೂರಂಕಿಯ ಸಂಖ್ಯೆ 24x ಎಂಬುವುದು 9ರಿಂದ ಭಾಗವಾದರೆ, x ಬೆಲೆಯನ್ನು ಕಂಡುಹಿಡಿಯಿರಿ.**

**ಪರಿಹಾರ:**

24x – 2 +4 + x = 9 ಆಗಿದ್ದರೆ ಮಾತ್ರ ಅದು 9ರಿಂದ ಭಾಗವಾಗುತ್ತದೆ.

ಆದ್ದರಿಂದ $2+4+x = 9 \Rightarrow 6+x = 9$

$\Rightarrow x = 3$

**ಉದಾಹರಣೆ 7: 3ರಿಂದ 2146587 ರ ಭಾಜ್ಯತೆಯನ್ನು ಪರೀಕ್ಷಿಸಿ.**

**ಪರಿಹಾರ:**

2146587–2+1+4+6+5+8+7 = 33

33, 3 ರಿಂದ ಭಾಗವಾಗುತ್ತದೆ. ಆದ್ದರಿಂದ ದತ್ತ ಸಂಖ್ಯೆಯು 3ರಿಂದ ಭಾಗವಾಗುತ್ತದೆ.

**ಉದಾಹರಣೆ 8: 3ರಿಂದ 15287 ರ ಭಾಜ್ಯತೆಯನ್ನು ಪರೀಕ್ಷಿಸಿ.**

**ಪರಿಹಾರ:**

15287 – 1+5+2+8+7 = 23

23, ಇದು 3ರಿಂದ ಭಾಗವಾಗುವುದಿಲ್ಲ. ಆದ್ದರಿಂದ ದತ್ತ ಸಂಖ್ಯೆಯ 3ರಿಂದ ಭಾಗವಾಗುವುದಿಲ್ಲ.

## ಅಭ್ಯಾಸ 1.1

ಕೆಳಗಿನವುಗಳಲ್ಲಿ ಇಂಗ್ಲೀಷ್ ಅಕ್ಷರಗಳಿಂದ ಸೂಚಿತವಾದ ಪ್ರತಿಯೊಂದು ಅಕ್ಷರದ ಬೆಲೆ ಕಂಡುಹಿಡಿಯಿರಿ. ಕಾರಣ ಸಹಿತ ವಿವರಣೆ ನೀಡಿ.

**1.**

| | | |
|---|---|---|
| | 3 | A |
| + | 2 | 5 |
| | B | 2 |

ಪರಿಹಾರ:

ಇಲ್ಲಿ 5 + 7 ಆದಾಗ ಮಾತ್ರ ಮೊತ್ತದ ಬಿಡಿಸ್ಥಾನದಲ್ಲಿ 2 ಬರಲು ಸಾಧ್ಯ.

ಆದ್ದರಿಂದ A = 7 ಮತ್ತು B = 6

**2.**

| | | |
|---|---|---|
| | 4 | A |
| + | 9 | 8 |
| C | B | 3 |

ಪರಿಹಾರ:

ಇಲ್ಲಿ 8 + 5 ಆದಾಗ ಮಾತ್ರ ಮೊತ್ತದ ಬಿಡಿಸ್ಥಾನದಲ್ಲಿ 3 ಬರಲು ಸಾಧ್ಯ.

ಆದ್ದರಿಂದ A = 8. ಮತ್ತು B = 4, C = 1

**3.**

| | |
|---|---|
| 1 | A |
| × | A |
| 9 | A |

ಪರಿಹಾರ:ಬಿಡಿ ಸ್ಥಾನದಲ್ಲಿ ಒಂದು ಸಂಖ್ಯೆಗೆ ಅದೇ ಸಂಖ್ಯೆಯಿಂದ ಗುಣಿಸಿ, ಗುಣಲಬ್ಧದ ಬಿಡಿಸ್ಥಾನದಲ್ಲಿ ಅದೇ ಸಂಖ್ಯೆ ಬರಬೇಕಾದರೆ, ಬಿಡಿ ಸ್ಥಾನದಲ್ಲಿ 1, 5 ಅಥವಾ 6 ಮಾತ್ರ ಸಾಧ್ಯ. ಗುಣಲಬ್ಧದ ಹತ್ತರ ಸ್ಥಾನದಲ್ಲಿ 9 ಬರಬೇಕಾದರೆ A = 6 ಆಗಬೇಕು.

**4.**

| | | |
|---|---|---|
| | A | B |
| + | 3 | 7 |
| | 6 | A |

**ಪರಿಹಾರ:**

ಇಲ್ಲಿ ಬಿಡಿಸ್ಥಾನದಲ್ಲಿ B = 5 ಇದ್ದರೆ 5 + 7 = 12 ಆಗುತ್ತದೆ. ಆಗ A = 2 ಆಗುತ್ತದೆ.

**5.**

| | | |
|---|---|---|
| | A | B |
| | × | 3 |
| C | A | B |

**ಪರಿಹಾರ:**

ಇಲ್ಲಿ ಬಿಡಿಸ್ಥಾನದಲ್ಲಿ B = 0 ಇದ್ದರೆ 0 × 3 = 0 ಆಗುತ್ತದೆ. ಆಗ A = 5 ಆದರೆ 50 × 3 = 150

ಆದ್ದರಿಂದ A = 5, B = 0, C = 1

**6.**

| | | |
|---|---|---|
| | A | B |
| | × | 5 |
| C | A | B |

**ಪರಿಹಾರ:**

ಇಲ್ಲಿ ಬಿಡಿಸ್ಥಾನದಲ್ಲಿ B = 0 ಇದ್ದರೆ 0 × 5 = 0 ಆಗುತ್ತದೆ. ಆಗ A = 5 ಆದರೆ 50 × 5 = 250

ಆದ್ದರಿಂದ A = 5, B = 0, C = 2

ಆದ್ದರಿಂದ A = 5, B = 0, C = 1

**7.**

| | | |
|---|---|---|
| | A | B |
| | × | 6 |
| B | B | B |

**ಪರಿಹಾರ:**

ಇಲ್ಲಿ ಬಿಡಿಸ್ಥಾನದಲ್ಲಿ B = 4 ಇದ್ದರೆ 4 × 6 = 24 ಆಗಿ ಗುಣಲಬ್ಧದ ಬಿಡಿಸ್ಥಾನದಲ್ಲೂ 4 ಬರುತ್ತದೆ. ಉಳಿದಂತೆ 6 × 7 = 42 ಹಾಗೂ ಬಿಡಿಸ್ಥಾನದಲ್ಲಿ ಉಳಿದ 2 ಸೇರಿ 44 ಆಗುತ್ತದೆ.

ಆದ್ದರಿಂದ A = 7, B = 4

**8.**

| | | |
|---|---|---|
| | A | 1 |
| + | 1 | B |
| | B | 0 |

**ಪರಿಹಾರ:**

ಇಲ್ಲಿ ಬಿಡಿಸ್ಥಾನದಲ್ಲಿ B = 9 ಇದ್ದರೆ ಮಾತ್ರ ಮೊತ್ತದ ಬಿಡಿಸ್ಥಾನದಲ್ಲಿ 0 ಬರುತ್ತದೆ. ಆಗ A = 7 ಆಗಲೇಬೇಕು.

ಆದ್ದರಿಂದ A = 7, B = 0

**9.**

| | | |
|---|---|---|
| 2 | A | B |
| +A | B | 1 |
| B | 1 | 8 |

**ಪರಿಹಾರ:**

ಇಲ್ಲಿ ಬಿಡಿಸ್ಥಾನದಲ್ಲಿ B = 7 ಇದ್ದರೆ 7+1 = 8 ಆಗಿ ಮೊತ್ತದ ಬಿಡಿಸ್ಥಾನದಲ್ಲಿ 8 ಬರುತ್ತದೆ. ಆಗ ಹತ್ತರ ಸ್ಥಾನದಲ್ಲಿ 6 × 7 = 42 ಹಾಗೂ ಬಿಡಿಸ್ಥಾನದಲ್ಲಿ ಉಳಿದ 2 ಸೇರಿ 44 ಆಗುತ್ತದೆ. B = 7 ಕ್ಕೆ 4 ಕೂಡಿದರೆ ಮೊತ್ತದ ಹತ್ತರ ಸ್ಥಾನದಲ್ಲಿ 1 ಬರುತ್ತದೆ.

ಆದ್ದರಿಂದ A = 4, B = 7

**10.**

| | | |
|---|---|---|
| 1 | 2 | A |
| +6 | A | B |
| A | 0 | 9 |

**ಪರಿಹಾರ:**

ಇಲ್ಲಿ ಹತ್ತರ ಸ್ಥಾನದಲ್ಲಿ ಮೊತ್ತದಲ್ಲಿ 0 ಬಂದಿದೆ. ಆದ್ದರಿಂದ A = 8 ಆಗಲೇಬೇಕು. ಆಗ B = 1 ಆಗುತ್ತದೆ.

ಆದ್ದರಿಂದ A = 8, B = 1

# ಅಭ್ಯಾಸ 1.2

**1. 21y5 ಎಂಬುವುದು 9ರ ಗುಣಕವಾಗಿದ್ದು y ಒಂದು ಅಂಕಿ ಆಗಿದ್ದರೆ y ಬೆಲೆ ಕಂಡುಹಿಡಿಯಿರಿ.**

**ಪರಿಹಾರ:**

21y5 ಎಂಬುವುದು 9ರ ಗುಣಕವಾಗಿದೆ

$2 + 1 + y + 5 = 8 + y$ ಮೊತ್ತವು 9ರಿಂದ ಭಾಗವಾಗಬೇಕಾದರೆ $8 + y = 9$ ಆಗಬೇಕು.

$8 + y = 9 \Rightarrow y = 9 - 8 = 1$

**2. 31y5 ಎಂಬುವುದು 9ರ ಗುಣಕವಾಗಿದ್ದು z ಒಂದು ಅಂಕಿ ಆಗಿದ್ದರೆ z ಬೆಲೆ ಕಂಡುಹಿಡಿಯಿರಿ.**

**ಪರಿಹಾರ:**

31y5 ಎಂಬುವುದು 9ರ ಗುಣಕವಾಗಿದೆ

$3 + 1 + z + 5 = 9 + z$ ಮೊತ್ತವು 9ರಿಂದ ಭಾಗವಾಗಬೇಕಾದರೆ $9 + z = 9$ ಅಥವಾ 18 ಆಗಬೇಕು.

$9 + z = 9 \Rightarrow z = 9 - 9 = 0$

$9 + z = 18 \Rightarrow z = 18 - 9 = 9$

ಆದ್ದರಿಂದ $z = 0$ ಅಥವಾ 9

**3. 24x ಎಂಬುವುದು 3 ರ ಗುಣಕವಾಗಿದ್ದು x ಒಂದು ಅಂಕಿ ಆಗಿದ್ದರೆ x ಬೆಲೆ ಕಂಡುಹಿಡಿಯಿರಿ.**

**ಪರಿಹಾರ:**

24x ಎಂಬುವುದು 3 ರ ಗುಣಕವಾಗಿದೆ

$2 + 4 + x = 6 + x$

ಮೊತ್ತವು 3 ರಿಂದ ಭಾಗವಾಗಬೇಕಾದರೆ

$6 + x = 6, 9, 12, 15$ ಆಗಬೇಕು.

$6 + x = 6 \Rightarrow x = 6 - 6 = 0$

$6 + x = 9 \Rightarrow x = 9 - 6 = 3$

$6 + x = 12 \Rightarrow x = 12 - 6 = 6$

$6 + x = 15 \Rightarrow x = 15 - 6 = 9$

ಆದ್ದರಿಂದ $x = 0$, $x=3$, $x=6$ ಅಥವಾ $x = 9$ ಆಗಿರುತ್ತದೆ.

**4. 31z5 ಎಂಬುವುದು 3ರ ಗುಣಕವಾಗಿದ್ದು z ಒಂದು ಅಂಕಿ ಆಗಿದ್ದರೆ z ಬೆಲೆ ಕಂಡುಹಿಡಿಯಿರಿ.**

**ಪರಿಹಾರ:**

31z5 ಎಂಬುವುದು 9ರ ಗುಣಕವಾಗಿದೆ

$3 + 1 + z + 5 = 9 + z$

ಮೊತ್ತವು 3ರಿಂದ ಭಾಗವಾಗಬೇಕಾದರೆ

$9 + z = 9, 12, 15,$ ಅಥವಾ 18 ಆಗಬೇಕು.

$9 + z = 9 \Rightarrow z = 9 - 9 = 0$

$9 + z = 12 \Rightarrow z = 12 - 9 = 3$

$9 + z = 15 \Rightarrow z = 15 - 9 = 6$

$9 + z = 18 \Rightarrow z = 18 - 9 = 9$

ಆದ್ದರಿಂದ $z = 0$, $z = 3$, $z = 6$ ಅಥವಾ $z = 9$ ಆಗಿರುತ್ತದೆ

YK

ಪರಿಷ್ಕೃತ ಪಠ್ಯ

# ಗಣಿತ

# Mathematics

## ಕನ್ನಡ ಮಾಧ್ಯಮ

## ಭಾಗ–1

## ಅಧ್ಯಾಯ 2

## ಭಾಗಲಬ್ಧ ಸಂಖ್ಯೆಗಳು

## Rational Numbers

Copy rights reserved

Attractive Maths Solution

# 8ನೇ ತರಗತಿ – ಅಧ್ಯಾಯ 2
# ಭಾಗಲಬ್ಧ ಸಂಖ್ಯೆಗಳು

**ಕಲಿಕಾಂಶಗಳು:**

- ಪೀಠಿಕೆ
- ಭಾಗಲಬ್ಧ ಸಂಖ್ಯೆಗಳ ಗುಣಲಕ್ಷಣಗಳು
  - ❖ ಆವೃತ್ತತೆ
    - ಪೂರ್ಣ ಸಂಖ್ಯೆಗಳು
    - ಪೂರ್ಣಾಂಕ ಸಂಖ್ಯೆಗಳು
    - ಭಾಗಲಬ್ಧ ಸಂಖ್ಯೆಗಳು
  - ❖ ಪರಿವರ್ತನೀಯತೆ
    - ಪೂರ್ಣ ಸಂಖ್ಯೆಗಳು
    - ಪೂರ್ಣಾಂಕ ಸಂಖ್ಯೆಗಳು
    - ಭಾಗಲಬ್ಧ ಸಂಖ್ಯೆಗಳು
  - ❖ ಸಹವರ್ತನೀಯತೆ
    - ಪೂರ್ಣ ಸಂಖ್ಯೆಗಳು
    - ಪೂರ್ಣಾಂಕ ಸಂಖ್ಯೆಗಳು
    - ಭಾಗಲಬ್ಧ ಸಂಖ್ಯೆಗಳು
  - ❖ ಸೊನ್ನೆಯ ಪಾತ್ರ
  - ❖ ಸಂಖ್ಯೆ 1ರ ಪಾತ್ರ
  - ❖ ಸಂಖ್ಯೆಗಳ ಋಣಾತ್ಮಕಗಳು
  - ❖ ವ್ಯುತ್ಕ್ರಮ
  - ❖ ಭಾಗಲಬ್ಧ ಸಂಖ್ಯೆಗಳ ವಿತರಣಾ ನಿಯಮ
- ಸಂಖ್ಯಾರೇಖೆಯ ಮೇಲೆ ಭಾಗಲಬ್ಧ ಸಂಖ್ಯೆಗಳನ್ನು ಗುರುತಿಸುವುದು.
- ಎರಡು ಸಂಖ್ಯೆಗಳ ನಡುವಿನ ಭಾಗಲಬ್ಧ ಸಂಖ್ಯೆಗಳನ್ನು ಕಂಡುಹಿಡಿಯುವುದು.
  - ❖ ನೇರ ವಿಧಾನ

**ಪೀಠಿಕೆ:**

**ಸಂಖ್ಯಾಗಣಗಳು:**

**ಸ್ವಾಭಾವಿಕ ಸಂಖ್ಯೆಗಳು N – { 1,2,3,4….}**

**ಪೂರ್ಣ ಸಂಖ್ಯೆಗಳು W – { 0,1,2,3,4 …}**

**ಪೂರ್ಣಾಂಕಗಳು Z – {…-2,-1,0,1,2,…}**

**ಭಾಗಲಬ್ಧ ಸಂಖ್ಯೆಗಳು: Q**

$\frac{p}{q}$ **ರೂಪದಲ್ಲಿ (q ≠0) ಇರುವ ಸಂಖ್ಯೆಗಳನ್ನು ಭಾಗಲಬ್ಧ ಸಂಖ್ಯೆಗಳು ಎನ್ನುವರು. p,q∈Z**

$= \{\ldots -3, -\frac{5}{2}, -2, -1, 0, 1, \frac{3}{2}, 2 \ldots\}$

**ಆವೃತ್ತತೆ:**

**ಒಂದು ಸಂಖ್ಯಾ ಗಣದಿಂದ ಯಾವುದಾದರೂ ಎರಡು ಗಣಾಂಶಗಳನ್ನು ತೆಗೆದು ಕೊಂಡು ಒಂದು ಮೂಲಕ್ರಿಯೆಯನ್ನು ಮಾಡಿದಾಗ ಫಲಿತಾಂಶವು ಅದೇ ಗಣದ ಗಣಾಂಶವಾಗಿದ್ದರೆ, ಆ ಕ್ರಿಯೆಯು ಗಣದಲ್ಲಿ ಆವೃತ್ತವಾಗಿದೆ ಎನ್ನುವರು.**

**ಪೂರ್ಣ ಸಂಖ್ಯೆಗಳು W – { 0,1,2,3,4 …}**

8 ∈ W ಮತ್ತು 13 ∈ W ಆಗಿದ್ದರೆ,

ಸಂಕಲನ: $8 + 13 = 21 \in W$

ವ್ಯವಕಲನ: $8 - 13 = -5 \notin W$

ಗುಣಾಕಾರ: $8 \times 13 = 104 \in W$

ಭಾಗಾಕಾರ: $8 \div 13 = \frac{8}{13} \notin W$

**ಗಮನಿಸಿದ ಅಂಶ:**

ಸಂಕಲನ ಮತ್ತು ಗುಣಾಕಾರ ಕ್ರಿಯೆಗಳು ಪೂರ್ಣಾ ಸಂಖ್ಯೆಗಳ ಗಣದಲ್ಲಿ ಆವೃತ್ತವಾಗಿದೆ. ಆದರೆ ವ್ಯವಕಲನ ಮತ್ತು ಭಾಗಾಕಾರ ಕ್ರಿಯೆಗಳು ಆವೃತ್ತವಾಗಿಲ್ಲ

**ಪೂರ್ಣಾಂಕ ಸಂಖ್ಯೆಗಳು**

**Z – {…-2,-1,0,1,2,…}**

–7 ∈ Z ಮತ್ತು 15 ∈ Z ಆಗಿದ್ದರೆ,

ಸಂಕಲನ: $-7 + 15 = 8 \in Z$

ವ್ಯವಕಲನ: $-7 - 15 = -22 \in Z$

ಗುಣಾಕಾರ: $-7 \times 15 = -105 \in Z$

ಭಾಗಾಕಾರ: $-7 \div 15 = \frac{-7}{15} \notin Z$

**ಗಮನಿಸಿದ ಅಂಶ:**ಸಂಕಲನ, ವ್ಯವಕಲನ ಮತ್ತು ಗುಣಾಕಾರ ಕ್ರಿಯೆಗಳು ಪೂರ್ಣಾಂಕ ಸಂಖ್ಯೆಗಳ ಗಣದಲ್ಲಿ ಆವೃತ್ತವಾಗಿದೆ. ಆದರೆ ಭಾಗಾಕಾರ ಕ್ರಿಯೆ ಆವೃತ್ತವಾಗಿಲ್ಲ.

**ಭಾಗಲಬ್ಧ ಸಂಖ್ಯೆಗಳು:**

$Q = \{\ldots -3, -\frac{5}{2}, -2, -1, 0, 1, \frac{3}{2}, 2 \ldots\}$

$-\frac{3}{2} \in Q$ ಮತ್ತು $\frac{1}{2} \in Q$ ಆಗಿದ್ದರೆ,

ಸಂಕಲನ: $-\frac{3}{2} + \frac{1}{2} = -1 \in Q$

ವ್ಯವಕಲನ: $-\frac{3}{2} - \frac{1}{2} = -2 \notin Q$

ಗುಣಾಕಾರ: $-\frac{3}{2} \times \frac{1}{2} = -\frac{3}{4} \in Q$

ಭಾಗಾಕಾರ: $-\frac{3}{2} \div \frac{1}{2} = -3 \notin Q$

**[ಇಲ್ಲಿ ಛೇದ ಸೊನ್ನೆಯಾದರೆ ಸಾಧ್ಯವಿಲ್ಲ]**

**ಗಮನಿಸಿದ ಅಂಶ:**

ಸಂಕಲನ, ವ್ಯವಕಲನ ಮತ್ತು ಗುಣಾಕಾರ ಕ್ರಿಯೆಗಳು ಭಾಗಲಬ್ಧ ಸಂಖ್ಯೆಗಳ ಗಣದಲ್ಲಿ ಆವೃತ್ತವಾಗಿದೆ. ಆದರೆ ಭಾಗಾಕಾರ ಕ್ರಿಯೆ ಆವೃತ್ತವಾಗಿಲ್ಲ. ಏಕೆಂದರೆ $q \neq 0$.

**ನೆನಪಿಡಿ: ಸೊನ್ನೆಯನ್ನು ಹೊರತು ಪಡಿಸಿದ ಭಾಗಲಬ್ಧ ಸಂಖ್ಯಾಗಣದಲ್ಲಿ ಭಾಗಾಕಾರವು ಆವೃತ್ತವಾಗಿದೆ.**

**ಪರಿವರ್ತನೀಯತೆ:**

**ಒಂದು ಸಂಖ್ಯಾ ಗಣದಿಂದ ಯಾವುದಾದರೂ ಎರಡು ಗಣಾಂಶಗಳನ್ನು ತೆಗೆದು ಕೊಂಡು ಅವುಗಳ ಸ್ಥಾನವನ್ನು ಅದಲು ಬದಲು ಮಾಡಿ ಮೂಲಕ್ರಿಯೆ ಮಾಡಿದಾಗ ಫಲಿತಾಂಶದಲ್ಲಿ ಯಾವುದೇ ಬದಲಾವಣೆ ಆಗದಿದ್ದರೆ ಅದನ್ನು ಆ ಕ್ರಿಯೆಯು ಪರೀಕ್ಷಿಸಿದ ಗಣದಲ್ಲಿ ಪರಿವರ್ತನೀಯತೆಯನ್ನು ಹೊಂದಿದೆ ಎನ್ನುವರು.**

**ಪೂರ್ಣ ಸಂಖ್ಯೆಗಳು W – { 0,1,2,3,4 …}**

$9 \in W$ ಮತ್ತು $12 \in W$ ಆಗಿದ್ದರೆ,

ಸಂಕಲನ:

$9 + 12 = 12 + 9 = 21$

ವ್ಯವಕಲನ:

$9 - 12 \neq 12 - 9$

ಗುಣಾಕಾರ:

$9 \times 12 = 12 \times 9$

ಭಾಗಾಕಾರ:

$9 \div 12 \neq 12 \div 9$

**ಗಮನಿಸಿದ ಅಂಶ:**

ಸಂಕಲನ ಮತ್ತು ಗುಣಾಕಾರ ಕ್ರಿಯೆಗಳು ಪೂರ್ಣಾ ಸಂಖ್ಯೆಗಳ ಗಣದಲ್ಲಿ ಪರಿವರ್ತನೀಯತೆ ಹೊಂದಿದೆ.

**ಪೂರ್ಣಾಂಕ ಸಂಖ್ಯೆಗಳು**

**Z – {…-2,-1,0,1,2,…}**

$-3 \in Z$ ಮತ್ತು $9 \in Z$ ಆಗಿದ್ದರೆ,

ಸಂಕಲನ:

$-3 + 9 = 9 + (-3)$

ವ್ಯವಕಲನ:

$-3 - 9 \neq 9 - (-3)$

ಗುಣಾಕಾರ:

$-3 \times 9 = 9 \times -3$

ಭಾಗಾಕಾರ:

$-3 \div 9 \neq 9 \div -3$

**ಗಮನಿಸಿದ ಅಂಶ:**

ಸಂಕಲನ ಮತ್ತು ಗುಣಾಕಾರ ಕ್ರಿಯೆಗಳು ಪೂರ್ಣಾಂಕ ಸಂಖ್ಯೆಗಳ ಗಣದಲ್ಲಿ ಪರಿವರ್ತನೀಯತೆ ಹೊಂದಿದೆ.

**ಭಾಗಲಬ್ಧ ಸಂಖ್ಯೆಗಳು:**

$\mathbf{Q = \{…-3, -\frac{5}{2}, -2, -1, 0, 1, \frac{3}{2}, 2…\}}$

$-\frac{5}{2} \in Q$ ಮತ್ತು $\frac{1}{2} \in Q$ ಆಗಿದ್ದರೆ,

ಸಂಕಲನ:

$-\frac{5}{2} + \frac{1}{2} = -2 = \frac{1}{2} + -\frac{5}{2}$

ವ್ಯವಕಲನ:

$-\frac{5}{2} - \frac{1}{2} = -3 \neq \frac{1}{2} - \left(-\frac{5}{2}\right) = 3$

ಗುಣಾಕಾರ:

$-\frac{5}{2} \times \frac{1}{2} = -\frac{5}{4} = \frac{1}{2} \times -\frac{5}{2}$

ಭಾಗಾಕಾರ:

$-\frac{5}{2} \div \frac{1}{2} = -5 \neq \frac{1}{2} \div -\frac{5}{2} = -\frac{1}{5}$

**ಗಮನಿಸಿದ ಅಂಶ:**

ಸಂಕಲನ ಮತ್ತು ಗುಣಾಕಾರ ಕ್ರಿಯೆಗಳು ಭಾಗಲಬ್ಧ ಸಂಖ್ಯೆಗಳ ಗಣದಲ್ಲಿ ಪರಿವರ್ತನೀಯವಾಗಿದೆ

**ಸಹವರ್ತನೀಯತೆ:**

**ಒಂದು ಸಂಖ್ಯಾ ಗಣದಿಂದ ಯಾವುದಾದರೂ ಮೂರು ಗಣಾಂಶಗಳನ್ನು ತೆಗೆದು ಕೊಂಡು ಅವುಗಳನ್ನು ಬೇರೆ ಬೇರೆ ಗುಂಪು ಮಾಡಿ ಮೂಲಕ್ರಿಯೆ ನಡೆಸಿದಾಗ ಫಲಿತಾಂಶದಲ್ಲಿ ಯಾವುದೇ ಬದಲಾವಣೆ ಆಗದಿದ್ದರೆ ಅದನ್ನು ಆ ಕ್ರಿಯೆಯು ಪರೀಕ್ಷಿಸಿದ ಗಣದಲ್ಲಿ ಸಹವರ್ತನೀಯತೆಯನ್ನು ಹೊಂದಿದೆ ಎನ್ನುವರು.**

**ಪೂರ್ಣ ಸಂಖ್ಯೆಗಳು W – { 0,1,2,3,4 …}**

2, 5 ಮತ್ತು $12 \in W$

ಸಂಕಲನ:

$2 + (5 + 12) = 2 + 17 = 19$

$(2 + 5) + 12 = 7 + 12 = 19$

$\therefore 2 + (5 + 12) = (2 + 5) + 12$

ವ್ಯವಕಲನ:

$2 - (5 - 12) = 2 + 7 = 9$

$(2 - 5) - 12 = -3 - 12 = -15$

$\therefore 2 - (5 - 12) \neq (2 + 5) + 12$

ಗುಣಾಕಾರ:

$2 \times (5 \times 12) = 2 \times 60 = 120$

$(2 \times 5) \times 12 = 10 \times 12 = 120$

$\therefore 2 \times (5 \times 12) = (2 \times 5) \times 12$

ಭಾಗಾಕಾರ:

$2 \div (5 \div 12) = 2 \div \frac{5}{12} = \frac{24}{5}$

$(2 \div 5) \div 12 = \frac{2}{5} \div 12 = \frac{1}{30}$

$\therefore 2 \div (5 \div 12) \neq (2 \div 5) \div 12$

**ಗಮನಿಸಿದ ಅಂಶ:**

ಸಂಕಲನ ಮತ್ತು ಗುಣಾಕಾರ ಕ್ರಿಯೆಗಳು ಪೂರ್ಣಾ ಸಂಖ್ಯೆಗಳ ಗಣದಲ್ಲಿ ಸಹವರ್ತನೀಯತೆ ಹೊಂದಿದೆ.

**ಪೂರ್ಣಾಂಕ ಸಂಖ್ಯೆಗಳು**

**Z – {…-2,-1,0,1,2,…}**

$3, -5$ ಮತ್ತು $9 \in Z$ ಆಗಿದ್ದರೆ,

ಸಂಕಲನ:

$3 + [(-5) + 9] = 3 + 4 = 7$

$[3 + (-5)] + 9 = -2 + 9 = 7$

$\therefore 3 + (-5 + 9) = (3 + -5) + 9$

ವ್ಯವಕಲನ:

$3 - [-5 - 9] = 3 - 14 = -11$

$[3 - (-5)] - 9 = 8 - 9 = -1$

$\therefore 3 + (-5 + 9) \neq (3 + -5) + 9$

ಗುಣಾಕಾರ:

$3 \times (-5 \times 9) = 3 \times -45 = -135$

$(3 \times -5) \times 9 = -15 \times 9 = 135$

$\therefore 3 \times (-5 \times 9) = (3 \times -5) \times 9$

ಭಾಗಾಕಾರ:

$3 \div (-5 \div 9) = 3 \div \frac{-5}{9} = -\frac{27}{-5}$

$(3 \div -5) \div 9 = -\frac{3}{5} \div 9 = -\frac{1}{15}$

$\therefore 2 \div (5 \div 12) \neq (2 \div 5) \div 12$

**ಗಮನಿಸಿದ ಅಂಶ:**

ಸಂಕಲನ ಮತ್ತು ಗುಣಾಕಾರ ಕ್ರಿಯೆಗಳು ಪೂರ್ಣಾಂಕಗಳ ಗಣದಲ್ಲಿ ಸಹವರ್ತನೀಯತೆ ಹೊಂದಿದೆ.

**ಭಾಗಲಬ್ಧ ಸಂಖ್ಯೆಗಳು:**

$Q = \{\ldots -3, -\frac{5}{2}, -2, -1, 0, 1, \frac{3}{2}, 2 \ldots\}$

$-\frac{1}{2}, \frac{3}{2}$ ಮತ್ತು $\frac{1}{2} \in Q$ ಆಗಿದ್ದರೆ,

ಸಂಕಲನ:

$-\frac{1}{2} + \left(\frac{3}{2} + \frac{1}{2}\right) = -\frac{1}{2} + 2 = \frac{3}{2}$

$\left(-\frac{1}{2} + \frac{3}{2}\right) + \frac{1}{2} = 1 + \frac{1}{2} = \frac{3}{2}$

$\therefore -\frac{1}{2} + \left(\frac{3}{2} + \frac{1}{2}\right) = \left(-\frac{1}{2} + \frac{3}{2}\right) + \frac{1}{2}$

ವ್ಯವಕಲನ:

$-\frac{1}{2} - \left(\frac{3}{2} - \frac{1}{2}\right) = -\frac{1}{2} + 1 = \frac{1}{2}$

$\left(-\frac{1}{2} - \frac{3}{2}\right) + \frac{1}{2} = -2 + \frac{1}{2} = -\frac{3}{2}$

$\therefore -\frac{1}{2} - \left(\frac{3}{2} - \frac{1}{2}\right) \neq \left(-\frac{1}{2} - \frac{3}{2}\right) - \frac{1}{2}$

ಗುಣಾಕಾರ:

$-\frac{1}{2} \times \left(\frac{3}{2} \times \frac{1}{2}\right) = -\frac{1}{2} \times \frac{3}{4} = -\frac{3}{8}$

$\left(-\frac{1}{2} \times \frac{3}{2}\right) \times \frac{1}{2} = -\frac{3}{4} \times \frac{1}{2} = -\frac{3}{8}$

$\therefore -\frac{1}{2} \times \left(\frac{3}{2} \times \frac{1}{2}\right) = \left(-\frac{1}{2} \times \frac{3}{2}\right) \times \frac{1}{2}$

ಭಾಗಾಕಾರ:

$-\frac{1}{2} \div \left(\frac{3}{2} \div \frac{1}{2}\right) = -\frac{1}{2} \div 3 = -\frac{1}{6}$

$\left(-\frac{1}{2} \div \frac{3}{2}\right) \div \frac{1}{2} = -\frac{1}{3} \div \frac{1}{2} = -\frac{2}{3}$

$\therefore -\frac{1}{2} \div \left(\frac{3}{2} \div \frac{1}{2}\right) \neq \left(-\frac{1}{2} \div \frac{3}{2}\right) \div \frac{1}{2}$

**ಗಮನಿಸಿದ ಅಂಶ:**

ಸಂಕಲನ ಮತ್ತು ಗುಣಾಕಾರ ಕ್ರಿಯೆಗಳು ಭಾಗಲಬ್ಧ ಸಂಖ್ಯೆಗಳ ಗಣದಲ್ಲಿ ಸಹವರ್ತನೀಯವಾಗಿದೆ.

[ಬೇರೆ ಬೇರೆ ಉದಾಹರಣೆಗಳನ್ನು ನೀಡಿ ಈ ಮೇಲಿನ ಗುಣಗಳನ್ನು ಪರಿಶೀಲನೆ ಮಾಡಲು ವಿದ್ಯಾರ್ಥಿಗಳಿಗೆ ತಿಳಿಸುವುದು]

ಉದಾಹರಣೆ 1: ಇದರ ಬೆಲೆ ಕಂಡುಹಿಡಿಯಿರಿ.

$\frac{3}{7} + \left(-\frac{6}{11}\right) + \left(-\frac{8}{21}\right) + \frac{5}{22}$

| ಲ.ಸಾ.ಅ.ಕಂಡುಹಿಡಿಯುವುದು | |
|---|---|
| 2 | 7, 11, 21, 22 |
| 3 | 7, 11, 21, 11 |
| 7 | 7, 11, 7, 11 |
| 11 | 1, 11, 1, 11 |
| | 1, 1, 1, 1 |

ಲ. ಸಾ.ಅ. = $2 \times 3 \times 7 \times 11 = 462$

$\frac{3\times66}{7\times66} + \left(-\frac{6\times42}{11\times42}\right) + \left(-\frac{8\times22}{21\times22}\right) + \frac{5\times21}{22\times21}$

$\frac{198}{462} + \left(-\frac{252}{462}\right) + \left(-\frac{176}{462}\right) + \frac{105}{462}$

$\frac{198-252-176+105}{462} = \frac{-125}{462}$

ಉದಾಹರಣೆ 2: ಇದರ ಬೆಲೆ ಕಂಡುಹಿಡಿಯಿರಿ.

$-\frac{4}{5} \times \frac{3}{7} \times \frac{15}{16} \times \left(\frac{-14}{9}\right)$

$-\frac{1}{1} \times \frac{1}{1} \times \frac{1}{2} \times \left(\frac{-1}{1}\right)$

$-1 \times 1 \times \frac{1}{2} \times (-1) = \frac{1}{2}$

**ಸೊನ್ನೆಯ ಪಾತ್ರ:**

ಸೊನ್ನೆಯನ್ನು ಯಾವುದೇ ಸಂಖ್ಯೆಗೆ (ಪೂರ್ಣ ಸಂಖ್ಯೆ, ಪೂರ್ಣಾಂಕ, ಭಾಗಲಬ್ಧ ಸಂಖ್ಯೆ)ಕೂಡಿದರೆ ಬೆಲೆಯಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ.

ಆದ್ದರಿಂದ ಸೊನ್ನೆ(0)ಯನ್ನು ಸಂಕಲನದ ಅನನ್ಯತಾಂಶ ಎನ್ನುವರು.

**ಸಂಖ್ಯೆ 1 ರ ಪಾತ್ರ:**

ಸಂಖ್ಯೆ 1 ನ್ನು ಯಾವುದೇ ಸಂಖ್ಯೆಗೆ (ಪೂರ್ಣ ಸಂಖ್ಯೆ, ಪೂರ್ಣಾಂಕ, ಭಾಗಲಬ್ಧ ಸಂಖ್ಯೆ) ಗುಣಿಸದರೂ ಬೆಲೆಯಲ್ಲಿ ಯಾವುದೇ ವ್ಯತ್ಯಾಸವಾಗುವುದಿಲ್ಲ. ಆದ್ದರಿಂದ ಒಂದನ್ನು(1) ಗುಣಾಕಾರದ ಅನನ್ಯತಾಂಶ ಎನ್ನುವರು.

**ಸಂಖ್ಯೆಗಳ ಋಣಾತ್ಮಕಗಳು:**

ಉದಾಹರಣೆ: $1 + (-1) = 0$

$4+(-4)= 0$; $\frac{1}{2} + \left(\frac{-1}{2}\right)=0$; $-2 + 2 = 0$

ಹೀಗೆ ಯಾವುದೇ ಸಂಖ್ಯೆಗೂ ಮೊತ್ತ ಸೊನ್ನೆ ಬರುವಂತೆ ಇನ್ನೊಂದು ಪೂರಕ ಸಂಖ್ಯೆ ಇರುತ್ತದೆ. ಆ ಸಂಖ್ಯೆಯನ್ನು ಮೊದಲ ಸಂಖ್ಯೆಯ ಋಣಾತ್ಮಕ ಸಂಖ್ಯೆ ಎನ್ನುವರು.

ಮೇಲಿನ ಉದಾಹರಣೆಗಳಲ್ಲಿ 1 ರ ಋಣಾತ್ಮಕ $-1$; 4 ರ ಋಣಾತ್ಮಕ $-4$; $\frac{1}{2}$ ದ ಋಣಾತ್ಮಕ $-\frac{1}{2}$ ಮತ್ತು $-2$ ರ ಋಣಾತ್ಮಕ 2. ಋಣಾತ್ಮಕ ಸಂಖ್ಯೆಗಳನ್ನು **'ವಿಲೋಮ ಸಂಖ್ಯೆಗಳು'** ಎಂದೂ ಕರೆಯುವರು.

a ಯು ಒಂದು ಸಂಖ್ಯೆಯಾದಾಗ

$a + (-a) = 0$ ಯಾದರೆ $-a$ ನ್ನು a ಯ ವಿಲೋಮ ಎನ್ನುವರು.

**ವ್ಯುತ್ಕ್ರಮ:**

ಯಾವುದೇ ಸಂಖ್ಯೆಗೆ ಇನ್ನೊಂದು ಸಂಖ್ಯೆಯಿಂದ ಗುಣಿಸಿದಾಗ ಗುಣಲಬ್ಧವು ಒಂದು(1) ಬಂದರೆ, ಆ ಸಂಖ್ಯೆಯನ್ನು ಮೊದಲ ಸಂಖ್ಯೆಯ ವ್ಯುತ್ಕ್ರಮ ಎನ್ನುವರು.

ಉದಾಹರಣೆ: $1 \times 1 = 1$; $2 \times \frac{1}{2} = 1$;

$\frac{-1}{4} \times -4 = 1$

ಈ ಮೇಲಿನ ಉದಾಹರಣೆಗಳಲ್ಲಿ 1 ರ ವ್ಯುತ್ಕ್ರಮ 1, 2 ರ ವ್ಯುತ್ಕ್ರಮ $\frac{1}{2}$, $\frac{-1}{4}$ ರ ವ್ಯುತ್ಕ್ರಮ $-4$ ಆಗಿದೆ.

ಒಂದು ಸಂಖ್ಯೆಯ ವ್ಯುತ್ಕ್ರಮವನ್ನು ಆ ಸಂಖ್ಯೆಯ **'ಗುಣಾಕಾರದ ವಿಲೋಮ'** ಎಂದೂ ಕರೆಯುತ್ತಾರೆ.

**ಭಾಗಲಬ್ಧ ಸಂಖ್ಯೆಗಳ ವಿತರಣಾ ನಿಯಮ:**

$\frac{5}{8}$ , $\frac{3}{14}$ ಮತ್ತು $\frac{1}{5}$ ಇವು ಮೂರು ಭಾಗಲಬ್ಧ ಸಂಖ್ಯೆಗಳಾಗಿರಲಿ.

$\frac{5}{8}\left(\frac{3}{14} + \frac{1}{5}\right) = \frac{5}{8} \times \frac{3}{14} + \frac{5}{8} \times \frac{1}{5}$

LHS: $\frac{5}{8}\left(\frac{3}{14} + \frac{1}{5}\right)$

$= \frac{5}{8} \times \frac{15+14}{70} = \frac{5}{8} \times \frac{29}{70} = \frac{29}{112}$

RHS: $\frac{5}{8} \times \frac{3}{14} + \frac{5}{8} \times \frac{1}{5}$

$= \frac{15}{112} + \frac{1}{8} = \frac{15+14}{112} = \frac{29}{112}$

ಆದ್ದರಿಂದ LHS = RHS

ಇದನ್ನು ಭಾಗಲಬ್ಧ ಸಂಖ್ಯೆಗಳ ವಿತರಣಾ ನಿಯಮ ಎನ್ನುವರು.

**ಉದಾಹರಣೆ 3: ಕೆಳಗಿನವುಗಳ ಸಂಕಲನದ ವಿಲೋಮಾಂಶಗಳನ್ನು ಬರೆಯಿರಿ.**

**(i) $-\frac{19}{7}$ (ii) $\frac{21}{112}$**

**ಪರಿಹಾರ:**

(i) $-\frac{19}{7} + x = 0$

$\Rightarrow x = \frac{19}{7}$

(ii) $\frac{21}{112} + x = 0$

$\Rightarrow x = -\frac{21}{112}$

**ಉದಾಹರಣೆ 4: -(-x) = x ಕೆಳಗಿನವುಗಳಲ್ಲಿ ರುಜುವಾತುಪಡಿಸಿ.**

**(i) $x = \frac{13}{17}$ (ii) $x = \frac{-21}{31}$**

**ಪರಿಹಾರ:**

**(i) $x = \frac{13}{17}$**

$x = \frac{13}{17}$ ರ ಸಂಕಲನದ ವಿಲೋಮ $-x = -\frac{13}{17}$

$-(-x) = -\left(-\frac{13}{17}\right) = \frac{13}{17} = x$

**(ii) $x = \frac{-21}{31}$**

$x = \frac{-21}{31}$ ರ ಸಂಕಲನದ ವಿಲೋಮ $-x = \frac{21}{31}$

$-(-x) = -\left(\frac{21}{31}\right) = -\frac{21}{31} = x$

**ಉದಾಹರಣೆ 5:**

**ಸಂಕ್ಷೇಪಿಸಿ. $\frac{2}{5} \times \frac{3}{7} - \frac{1}{14} - \frac{3}{7} \times \frac{3}{5}$**

**ಪರಿಹಾರ:**

$\frac{2}{5} \times \frac{-3}{7} - \frac{1}{14} - \frac{3}{7} \times \frac{3}{5}$

$\frac{-6}{35} - \frac{1}{14} - \frac{9}{35} = \frac{-12-5-18}{70} = \frac{-35}{70} = -\frac{1}{2}$

ಸಂಖ್ಯಾರೇಖೆಯ ಮೇಲೆ ಭಾಗಲಬ್ಧ ಸಂಖ್ಯೆಗಳನ್ನು ಗುರುತಿಸುವುದು:

ಸಂಖ್ಯೆಗಳನ್ನು ಒಂದು ಸರಳರೇಖೆಯ ಮೇಲೆ ಗುರುತಿಸುವುದನ್ನು ಸಂಖ್ಯಾರೇಖೆ ಎನ್ನುವರು.




ಸಂಖ್ಯಾರೇಖೆಯ ಮಧ್ಯದಲ್ಲಿ 0 ಇದ್ದು, ಬಲಭಾಗಕ್ಕೆ ಧನ ಸಂಖ್ಯೆಗಳು ಹಾಗೂ ಎಡ ಭಾಗಕ್ಕೆ ಋಣ ಸಂಖ್ಯೆಗಳು ಇರುತ್ತವೆ.

ಪ್ರತಿಯೊಂದ ಸಂಖ್ಯೆಗೂ ಸಂಖ್ಯಾರೇಖೆಯ ಮೇಲೆ ಒಂದು ಬಿಂದು ಇರುತ್ತದೆ ಅಥವಾ ಸಂಖ್ಯಾರೇಖೆಯ ಮೇಲಿನ ಪ್ರತಿಯೊಂದು ಬಿಂದುವಿಗೂ ಒಂದು ನಿರ್ದಿಷ್ಟ ಸಂಖ್ಯೆ ಇರುತ್ತದೆ.

ಉದಾಹರಣೆ: ನಾವು $\frac{3}{2}$ ನ್ನು ಸಂಖ್ಯಾರೇಖೆಯ ಮೇಲೆ ಗುರುತಿಸಬೇಕು.

[ಇಲ್ಲಿ ನಾವು ಅಂಶ ಮತ್ತು ಛೇದವನ್ನು ಹೋಲಿಕೆ ಮಾಡಬೇಕು. ಅಂಶವು ಛೇದಕ್ಕಿಂತ ಚಿಕ್ಕದಿದ್ದರೆ ಬಿಂದು 0 ಮತ್ತು 1ರ ಮಧ್ಯೆ ಇರುತ್ತದೆ. ಋಣ ಸಂಖ್ಯೆಗಳಾಗಿದ್ದರೆ ಹೋಲಿಕೆ ಮಾಡುವಾಗ ಚಿಹ್ನೆಯನ್ನು ಪರಿಗಣಿಸುವ ಅಗತ್ಯವಿಲ್ಲ. ಉದಾ: $\frac{-3}{4}$ ನ್ನು ಗುರುತಿಸುವಾಗ ಅಂಶ 3< ಛೇದ 4.]

$\frac{3}{2}$ ನ್ನು ಮಿಶ್ರ ಭಿನ್ನರಾಶಿ ಮಾಡಿದಾಗ = $1\frac{1}{2}$ ಆಗುತ್ತದೆ.
ಈ ಬಿಂದು 1 ಮತ್ತ 2ರ ಮಧ್ಯೆ ಬರುತ್ತದೆ.




ಎರಡು ಭಾಗಲಬ್ಧ ಸಂಖ್ಯೆಗಳ ನಡುವಿನ ಭಾಗಲಬ್ಧ ಸಂಖ್ಯೆಗಳು:

2 ಮತ್ತ 3 ರ ನಡುವಿನ 5 ಭಾಗಲಬ್ಧ ಸಂಖ್ಯೆಗಳನ್ನು ಕಂಡುಹಿಡಿಯಿರಿ.

ಇಲ್ಲಿ ನಾವು, 2 ಮತ್ತು 3ನ್ನು $\frac{2}{1}$ ಮತ್ತು $\frac{3}{1}$ ಎಂದು ಬರೆಯಬಹುದು.

$\frac{2}{1} = \frac{20}{10}$ ಮತು $\frac{3}{1} = \frac{30}{10}$

[ಛೇದ ಮತ್ತು ಅಂಶಕ್ಕೆ 10ರಿಂದ ಗುಣಿಸಿದಾಗ]

ಈಗ, $\frac{31}{10}, \frac{32}{10}, \frac{33}{10}$ – – – $\frac{39}{10}$ ಇವುಗಳಿಂದ ಯಾವುದೇ 5 ಭಾಗಲಬ್ಧ ಸಂಖ್ಯೆಗಳನ್ನು ಆರಿಸಬಹುದು.

**ಉದಾಹರಣೆ 6: –2 ಮತ್ತು 0 ಯ ನಡುವಿನ ಯಾವುದಾದರೂ 3 ಭಾಗಲಬ್ಧ ಸಂಖ್ಯೆಗಳನ್ನು ಬರೆಯಿರಿ.**

**ಪರಿಹಾರ:**

$\frac{-2}{1}$ ಮತ್ತು $\frac{0}{1}$

$\frac{-4}{2}$ ಮತ್ತು $\frac{0}{2}$

[ಛೇದ ಮತ್ತು ಅಂಶಕ್ಕೆ 2ರಿಂದ ಗುಣಿಸಿದಾಗ]

$\Rightarrow \frac{-3}{2}, \frac{-2}{2}, \frac{-1}{2}$

**ಉದಾಹರಣೆ 7: $\frac{-5}{6}$ ಮತ್ತು $\frac{5}{8}$ ರ ನಡುವಿನ 10 ಭಾಗಲಬ್ಧ ಸಂಖ್ಯೆಗಳನ್ನು ಕಂಡುಹಿಡಿಯಿರಿ.**

**ಪರಿಹಾರ:**

$\frac{-5}{6}$ ಮತ್ತು $\frac{5}{8}$ ಸಮಾನ ಛೇದ ಮಾಡಿದಾಗ,

$\frac{-20}{24}$ ಮತ್ತು $\frac{15}{24}$

ಈಗ, $\frac{-19}{24}$ , $\frac{-18}{24}$ . . . $\frac{14}{24}$ ಇವುಗಳಲ್ಲಿ ಯಾವುದಾದರೂ 10 ಸಂಖ್ಯೆಗಳನ್ನು ಆಯ್ಕೆ ಮಾಡಬಹುದು.

**ಉದಾಹರಣೆ 8: $\frac{1}{4}$ ಮತ್ತು $\frac{1}{2}$ ರ ನಡುವಿನ ಒಂದು ಭಾಗಲಬ್ಧ ಸಂಖ್ಯೆ ಕಂಡುಹಿಡಿಯಿರಿ.**

**ಪರಿಹಾರ:**

ಇಲ್ಲಿ ಇವುಗಳನ್ನು ಕೂಡಿಸಿ 2ರಿಂದ ಭಾಗಿಸಿದರೆ ಒಂದು ಭಾಗಲಬ್ಧ ಸಂಖ್ಯೆ ದೊರೆಯುತ್ತದೆ. ಇದನ್ನು ಸರಾಸರಿ ವಿಧಾನ ಎನ್ನುವರು.

$\frac{1}{4} + \frac{1}{2} = \frac{1+2}{4} = \frac{3}{4} \div 2 = \frac{3}{8}$

**ಉದಾಹರಣೆ 9: $\frac{1}{4}$ ಮತ್ತು $\frac{1}{2}$ ರ ನಡುವಿನ ಮೂರು ಭಾಗಲಬ್ಧ ಸಂಖ್ಯೆಗಳನ್ನು ಕಂಡುಹಿಡಿಯಿರಿ.**

**ಪರಿಹಾರ:**

$\frac{4}{16}$ ಮತ್ತು $\frac{4}{8}$

[ಛೇದ ಮತ್ತು ಅಂಶಕ್ಕೆ 3+1 =4 ರಿಂದ ಗುಣಿಸಿದಾಗ]

ಈಗ, $\frac{5}{16}, \frac{6}{16}, \frac{7}{16}$ ನಮಗೆ ಬೇಕಾಗಿರುವ 3 ಸಂಖ್ಯೆಗಳಾಗಿವೆ.

[ ಎರಡು ಸಂಖ್ಯೆಗಳ ನಡುವೆ ಅಪರಿಮಿತ ಭಾಗಲಬ್ಧ ಸಂಖ್ಯೆಗಳಿವೆ. ಆದ್ದರಿಂದ ಉತ್ತರವು ನಿರ್ದಿಷ್ಟವಿರಬೇಕಾಗಿಲ್ಲ]

## ಅಭ್ಯಾಸ 2.1

**1. ಸೂಕ್ತ ನಿಯಮಗಳನ್ನು ಬಳಸಿ ಬೆಲೆ ಕಂಡುಹಿಡಿಯಿರಿ.**

**(i)** $-\frac{2}{3} \times \frac{3}{5} + \frac{5}{2} - \frac{3}{5} \times \frac{1}{6}$

**(ii)** $\frac{2}{5} \times \left(\frac{3}{-7}\right) - \frac{1}{6} \times \frac{3}{2} + \frac{1}{14} \times \frac{2}{5}$

**ಪರಿಹಾರ:**

**(i)** $-\frac{2}{3} \times \frac{3}{5} + \frac{5}{2} - \frac{3}{5} \times \frac{1}{6}$

$= -\frac{2}{3} \times \frac{3}{5} - \frac{3}{5} \times \frac{1}{6} + \frac{5}{2}$

$= \frac{3}{5}\left(-\frac{2}{3} - \frac{1}{6}\right) + \frac{5}{2}$

$= \frac{3}{5}\left(\frac{-4-1}{6}\right) + \frac{5}{2}$

$= \frac{3}{5}\left(\frac{-5}{6}\right) + \frac{5}{2}$

$= \frac{-3}{6} + \frac{5}{2} = \frac{-3+15}{6}$

$= \frac{+12}{6} = 2$

**(ii)** $\frac{2}{5} \times \left(\frac{3}{-7}\right) - \frac{1}{6} \times \frac{3}{2} + \frac{1}{14} \times \frac{2}{5}$

$\frac{2}{5} \times \left(\frac{3}{-7} + \frac{1}{14}\right) - \frac{1}{6} \times \frac{3}{2}$

$= \frac{2}{5} \times \left(\frac{-6+1}{14}\right) - \frac{1}{6} \times \frac{3}{2}$

$= \frac{2}{5} \times \left(\frac{-5}{14}\right) - \frac{1}{4}$

$= \frac{-1}{7} - \frac{1}{4}$

$= \frac{-4-7}{28} = \frac{-11}{28}$

**2.ಕೆಳಗಿನವುಗಳಿಗೆ ಸಂಕಲನದ ವಿಲೋಮಾಂಶ ಗಳನ್ನು ಬರೆಯಿರಿ.**

**(i)** $\frac{2}{8}$ **(ii)** $\frac{-5}{9}$ **(iii)** $\frac{-6}{-5}$ **(iv)** $\frac{2}{-9}$ **(v)** $\frac{19}{-6}$

**ಪರಿಹಾರ:**

(i) $\frac{2}{8}$ ರ ಸಂಕಲನದ ವಿಲೋಮ $-\frac{2}{8}$

(ii) $\frac{-5}{9}$ ರ ಸಂಕಲನದ ವಿಲೋಮ $\frac{5}{9}$

(iii) $\frac{-6}{-5}$ ರ ಸಂಕಲನದ ವಿಲೋಮ $-\frac{6}{5}$

(iv) $\frac{2}{-9}$ ರ ಸಂಕಲನದ ವಿಲೋಮ $\frac{2}{9}$

(v) $\frac{19}{-6}$ ರ ಸಂಕಲನದ ವಿಲೋಮ $\frac{19}{6}$

**3. $-(-x) = x$ ಎಂದು ದೃಢೀಕರಿಸಿ.**

**(i)** $x = \frac{11}{15}$ **(ii)** $x = -\frac{13}{17}$

**ಪರಿಹಾರ:**

(i) $x = \frac{11}{15}$ ರ ಸಂಕಲನದ ವಿಲೋಮ $-x = -\frac{21}{31}$

$-(-x) = -\left(-\frac{11}{15}\right) = \frac{11}{15} = x$

(ii) $x = -\frac{13}{17}$ ರ ಸಂಕಲನದ ವಿಲೋಮ $-x = \frac{13}{17}$

$-(-x) = -\left(\frac{13}{17}\right) = -\frac{13}{17} = x$

**4. ಕೆಳಗಿನವುಗಳ ಗುಣಾಕಾರದ ವಿಲೋಮಾಂಶ ಗಳನ್ನು ಬರೆಯಿರಿ.**

**(i) -13 (ii)** $\frac{-13}{19}$ **(iii)** $\frac{1}{5}$ **(iv)** $\frac{-5}{8} \times \frac{-3}{7}$

**(v)** $-1 \times \frac{-2}{5}$ **(vi) -1**

**ಪರಿಹಾರ:**

(i) $-13$ ರ ಗುಣಾಕಾರದ ವಿಲೋಮ $= \frac{-1}{13}$

(ii) $\frac{-13}{19}$ ರ ಗುಣಾಕಾರದ ವಿಲೋಮ $= \frac{-19}{13}$

(iii) $\frac{1}{5}$ ರ ಗುಣಾಕಾರದ ವಿಲೋಮ $= 5$

(iv) $\frac{-5}{8} \times \frac{-3}{7} = \frac{15}{56}$ ವಿಲೋಮಾಂಶ $= \frac{56}{15}$

(v) $-1 \times \frac{-2}{5} = \frac{2}{5}$ ವಿಲೋಮಾಂಶ $= \frac{5}{2}$

(vi) $-1$ ರ ಗುಣಾಕಾರದ ವಿಲೋಮ $= -1$

**5. ಇವುಗಳಲ್ಲಿ ಬಳಸಲಾಗಿರುವ ಗುಣಾಕಾರದ ಗುಣಲಕ್ಷಣಗಳನ್ನು ತಿಳಿಸಿ.**

**(i)** $\frac{-4}{5} \times 1 = 1 \times \frac{-4}{5}$

**(ii)** $-\frac{13}{17} \times \frac{-2}{7} = \frac{-2}{7} \times -\frac{13}{17}$

**(iii)** $\frac{-19}{29} \times \frac{29}{-19} = 1$

**ಪರಿಹಾರ:**

(i) $\frac{-4}{5} \times 1 = 1 \times \frac{-4}{5}$

– ಗುಣಾಕಾರದ ಅನನ್ಯತಾಂಶ

(ii) $-\frac{13}{17} \times \frac{-2}{7} = \frac{-2}{7} \times -\frac{13}{17}$

– ಗುಣಾಕಾರದ ಪರಿವರ್ತನೀಯತೆ

(iii) $\frac{-19}{29} \times \frac{29}{-19}$

– ಗುಣಾಕಾರದ ವ್ಯುತ್ಕ್ರಮ

**6. $\frac{6}{13}$ ನ್ನು $\frac{-7}{16}$ ರ ವ್ಯುತ್ಕ್ರಮದಿಂದ ಗುಣಿಸಿ.**

**ಪರಿಹಾರ:**

$\frac{6}{13} \times \frac{-7}{16}$ ರ ವ್ಯುತ್ಕ್ರಮ

$\frac{6}{13} \times \frac{-16}{7} = \frac{-96}{91}$

7. $\frac{1}{3} \times \left(6 \times \frac{3}{4}\right)$ ನ್ನು $\left(\frac{1}{3} \times 6\right) \times \frac{3}{4}$ ಎಂದು ಬರೆಯಲು ಯಾವ ಗುಣಲಕ್ಷಣದಿಂದ ಸಾಧ್ಯವಾಗಿದೆ?

ಪರಿಹಾರ:

ಗುಣಾಕಾರದ ಸಹವರ್ತನೀಯ ನಿಯಮ

**8. $-1\frac{1}{8}$ ನ ಗುಣಾಕಾರದ ವಿಲೋಮಾಂಶ $\frac{8}{9}$ ಹೌದೇ: ಹೌದು ಅಥವಾ ಅಲ್ಲ ಎಂಬುವುದನ್ನು ಕಾರಣ ಸಹಿತ ತಿಳಿಸಿ.**

**ಪರಿಹಾರ:**

$-1\frac{1}{8}$ ನ್ನು ವಿಷಮ ಮಾಡಿದಾಗ $-\frac{9}{8}$

$-\frac{9}{8} \times \frac{8}{9} = -1 \neq 1$

ಆದ್ದರಿಂದ $-1\frac{1}{8}$ ನ ಗುಣಾಕಾರದ ವಿಲೋಮಾಂಶ $\frac{8}{9}$ ಅಲ್ಲ

**9. $3\frac{1}{3}$ ನ ಗುಣಾಕಾರದ ವಿಲೋಮಾಂಶ 0.3 ಹೌದೇ? ಹೌದು ಅಥವಾ ಅಲ್ಲ ಎಂಬುವುದನ್ನು ಕಾರಣ ಸಹಿತ ತಿಳಿಸಿ.**

**ಪರಿಹಾರ:**

$3\frac{1}{3} = \frac{10}{3}$ ಮತ್ತು $0.3 = \frac{10}{3}$

$\frac{10}{3} \times \frac{10}{3} = 1$ ಆದ್ದರಿಂದ $3\frac{1}{3}$ ನ ಗುಣಾಕಾರದ ವಿಲೋಮಾಂಶ 0.3

**10. ಕೆಳಿರುವುದನ್ನು ಬರೆಯಿರಿ.**

**(i) ವ್ಯುತ್ಕ್ರಮ ಇಲ್ಲದ ಭಾಗಲಬ್ಧ ಸಂಖ್ಯೆ**

**(ii) ತಮ್ಮ ವ್ಯುತ್ಕ್ರಮಕ್ಕೆ ತಾವೇ ಸಮನಾಗಿರುವ ಭಾಗಲಬ್ಧ ಸಂಖ್ಯೆಗಳು**

**(iii) ತನ್ನ ಋಣಾತ್ಮಕಕ್ಕೆ ತಾನೇ ಸಮನಾಗಿರುವ ಸಂಖ್ಯೆ**

**ಪರಿಹಾರ:**

(i) 0

(ii) 1 ಮತ್ತು –1

(iii) 0

**11. ಖಾಲಿ ಜಾಗಗಳನ್ನು ತುಂಬಿರಿ.**

(i) ಸೊನ್ನೆಗೆ ವ್ಯುತ್ಕ್ರಮ ______

(ii) ಸಂಖ್ಯೆಗಳಾದ ____ ಮತ್ತು ____ ಗಳಿಗೆ ತಾವೇ ವ್ಯುತ್ಕ್ರಮಗಳು.

(iii) -5 ರ ವ್ಯುತ್ಕ್ರಮವು_____

(iv) $\frac{1}{x}$ $(x \neq 0)$ ನ ವ್ಯುತ್ಕ್ರಮವು_____

(v) ಎರಡು ಭಾಗಲಬ್ಧ ಸಂಖ್ಯೆಗಳ ಗುಣಲಬ್ಧವು ಯಾವಾಗಲೂ _____

(vi) ಧನ ಭಾಗಲಬ್ಧ ಸಂಖ್ಯೆಯ ವ್ಯುತ್ಕ್ರಮವು___

**ಉತ್ತರಗಳು:**

(i) 0 (ii) 1, -1 (iii) $\frac{-1}{5}$ (iv) $x$

(v) ಭಾಗಲಬ್ಧ ಸಂಖ್ಯೆ (vi) ಧನ ಭಾಗಲಬ್ಧ ಸಂಖ್ಯೆ

## ಅಭ್ಯಾಸ 2.2

**1. ಈ ಸಂಖ್ಯೆಗಳನ್ನು ಸಂಖ್ಯಾರೇಖೆಯ ಮೇಲೆ ಗುರುತಿಸಿ.**

**(i) $\frac{7}{4}$ (ii) $\frac{-5}{6}$**

**ಪರಿಹಾರ:**

i) $\frac{7}{4} = 1\frac{3}{4}$




(ii) $\frac{-5}{6}$




**2. $\frac{-2}{11}$ , $\frac{-5}{11}$ ಮತ್ತು $\frac{-9}{11}$ ಇವುಗಳನ್ನು ಸಂಖ್ಯಾರೇಖೆಯ ಮೇಲೆ ಗುರುತಿಸಿ.**

**ಪರಿಹಾರ:**




**3. 2 ಕ್ಕಿಂತ ಸಣ್ಣದಾದ 5 ಭಾಗಲಬ್ಧ ಸಂಖ್ಯೆಗಳನ್ನು ಬರೆಯಿರಿ.**

[ಯಾವುದೂ ಬರೆಯಬಹುದು.ನಿರ್ದಿಷ್ಟ ಉತ್ತರವಿಲ್ಲ]

1, 0, –1, –2, –3

**4. $\frac{-2}{5}$ ಮತ್ತು $\frac{1}{2}$ ರ ನಡುವಿನ ಹತ್ತು ಭಾಗಲಬ್ಧ ಸಂಖ್ಯೆಗಳನ್ನು ಬರೆಯಿರಿ.**

**ಪರಿಹಾರ:**

$\frac{-2}{5}$ ಮತ್ತು $\frac{1}{2}$ ಛೇದಗಳ ಲ.ಸಾ.ಅ. = 10

$\frac{-4}{10}$ ಮತ್ತು $\frac{5}{10}$ ಛೇದ ಮತ್ತು ಅಂಶಗಳಿಗೆ 2ರಿಂದ ಗುಣಿಸೋಣ

$\frac{-8}{20}$ ಮತ್ತು $\frac{10}{20}$

$\frac{-7}{20}, \frac{-6}{20}, \frac{-5}{20}, \frac{-4}{20}, \frac{-3}{20}, \frac{-2}{20}, \frac{-1}{20}, \frac{0}{20}, \frac{1}{20}, \frac{2}{20}, \frac{3}{20}, \frac{4}{20}, \frac{5}{20}, \frac{6}{20}, \frac{7}{20}, \frac{8}{20}, \frac{9}{20}$, ಇವುಗಳಿಂದ ಯಾವುದಾದರೂ 10ನ್ನು ಆರಿಸಿ.

**5.ಈ ಕೆಳಗೆ ಕೊಟ್ಟಿರುವ ಪ್ರತಿ ಜೋಡಿ ಸಂಖ್ಯೆಗಳ ನಡುವಿನ 5 ಭಾಗಲಬ್ಧ ಸಂಖ್ಯೆಗಳನ್ನು ಕಂಡುಹಿಡಿಯಿರಿ.**

**(i) $\frac{2}{3}$ ಮತ್ತು $\frac{4}{5}$ (ii) $\frac{-3}{2}$ ಮತ್ತು $\frac{5}{3}$**

**(iii) $\frac{1}{4}$ ಮತ್ತು $\frac{1}{2}$**

**ಪರಿಹಾರ:**

(i) $\frac{2}{3}$ ಮತ್ತು $\frac{4}{5}$ ಸಮಾನ ಛೇದ ಮಾಡಿದಾಗ,
$\frac{10}{15}$ ಮತ್ತು $\frac{12}{15}$ ಛೇದ ಮತ್ತು ಅಂಶಕ್ಕೆ 3 ಅಥವಾ 3ಕ್ಕಿಂತ ದೊಡ್ಡ ಸಂಖ್ಯೆಯಿಂದ ಗುಣಿಸಿದರೆ ನಮಗೆ ಬೇಕಾದ ಭಾಗಲಬ್ಧ ಸಂಖ್ಯೆಗಳನ್ನು ಪಡೆಯಬಹುದು.

$\frac{30}{45}$ ಮತ್ತು $\frac{36}{45}$ [ ಎರಡೂ ಸಂಖ್ಯೆಯ ಛೇದ ಮತ್ತು ಅಂಶಗಳಿಗೆ 3 ರಿಂದ ಗುಣಿಸಿದಾಗ]

5 ಭಾಗಲಬ್ಧ ಸಂಖ್ಯೆಗಳು:

$\frac{31}{45}, \frac{32}{45}, \frac{33}{45}, \frac{34}{45}, \frac{35}{45}$

(ii) $\frac{-3}{2}$ ಮತ್ತು $\frac{5}{3}$

$\frac{-3}{2}$ ಮತ್ತು $\frac{5}{3}$ ಸಮಾನ ಛೇದ ಮಾಡಿದಾಗ,
$\frac{-9}{6}$ ಮತ್ತು $\frac{10}{6}$
5 ಭಾಗಲಬ್ಧ ಸಂಖ್ಯೆಗಳು:

$\frac{-8}{6}, \frac{-7}{6}, \frac{-6}{6}, \frac{-5}{6}, \frac{-4}{6} \ldots \frac{9}{6}$ ಇವುಗಳಿಂದ ಯಾವುದಾದರೂ 5 ಸಂಖ್ಯೆ ಆರಿಸಿ.

(iii) $\frac{1}{4}$ ಮತ್ತು $\frac{1}{2}$

$\frac{1}{4}$ ಮತ್ತು $\frac{1}{2}$ ಸಮಾನ ಛೇದ ಮಾಡಿದಾಗ,

$\frac{1}{4}$ ಮತ್ತು $\frac{2}{4}$
ಛೇದ ಮತ್ತು ಅಂಶಗಳಿಗೆ (ಎರಡೂ ಸಂಖ್ಯೆಗಳ) 6ರಿಂದ ಗುಣಿಸಿದಾಗ,

$\frac{6}{24}$ ಮತ್ತು $\frac{12}{24}$
5 ಭಾಗಲಬ್ಧ ಸಂಖ್ಯೆಗಳು:

$\frac{7}{24}, \frac{8}{24}, \frac{9}{24}, \frac{10}{24}, \frac{11}{24}$ ಇವುಗಳಿಂದ ಯಾವುದಾದರೂ 5 ಸಂಖ್ಯೆ ಆರಿಸಿ.

**6. −2 ಕ್ಕಿಂತ ದೊಡ್ಡದಾದ ಐದು ಭಾಗಲಬ್ಧ ಸಂಖ್ಯೆಗಳನ್ನು ಬರೆಯಿರಿ.**

**ಪರಿಹಾರ:**

−1, 0, 1, 2, 3, 4 ... ಇವುಗಳಲ್ಲಿ ಯಾವುದಾದರೂ ಐದು ಬರೆಯಿರಿ.

**7. $\frac{3}{5}$ ಮತ್ತು $\frac{3}{4}$ ರ ನಡುವಿನ ಹತ್ತು ಭಾಗಲಬ್ಧ ಸಂಖ್ಯೆಗಳನ್ನು ಬರೆಯಿರಿ.**

**ಪರಿಹಾರ:**

$\frac{3}{5}$ ಮತ್ತು $\frac{3}{4}$ ಛೇದಗಳ ಲ.ಸಾ.ಅ. = 10
$\frac{12}{20}$ ಮತ್ತು $\frac{15}{20}$
ಛೇದ ಮತ್ತು ಅಂಶಗಳಿಗೆ 5 ರಿಂದ ಗುಣಿಸೋಣ

$\frac{60}{100}$ ಮತ್ತು $\frac{75}{100}$
$\frac{61}{100}, \frac{62}{100}, \frac{63}{100}, \frac{64}{100}, \frac{65}{100}, \frac{66}{100}, \frac{67}{100}, \frac{68}{100}, \frac{69}{100}, \frac{70}{100}, \frac{71}{100}, \frac{72}{100}, \frac{73}{100}, \frac{74}{100}$
ಇವುಗಳಿಂದ ಯಾವುದಾದರೂ 10ನ್ನು ಆರಿಸಿ.

YK

ಪರಿಷ್ಕೃತ ಪಠ್ಯ

# ಗಣಿತ

# Mathematics

## ಕನ್ನಡ ಮಾಧ್ಯಮ

## ಭಾಗ–1

## ಅಧ್ಯಾಯ 3

## ಒಂದು ಚರಾಕ್ಷರವುಳ್ಳ ರೇಖಾತ್ಮಕ ಸಮೀಕರಣಗಳು

Linear equations of one Variable

Copy rights reserved

Attractive Maths Solution

# 8ನೇ ತರಗತಿ: ಅಧ್ಯಾಯ 3
# ಒಂದು ಚರಾಕ್ಷರವುಳ್ಳ ರೇಖಾತ್ಮಕ ಸಮೀಕರಣಗಳು

- ಕಲಿಕಾಂಶಗಳು:
- ಪದೋಕ್ತಿಗಳು ಮತ್ತು ಸಮೀಕರಣಗಳಿಗಿರುವ ವ್ಯತ್ಯಾಸ
- ಒಂದು ಚರಾಕ್ಷರವಿರುವ ರೇಖಾತ್ಮಕ ಸಮೀಕರಣ
- ಒಂದು ಕಡೆ ರೇಖಾತ್ಮಕ ಬಹುಪದೋಕ್ತಿ ಇನ್ನೊಂದು ಕಡೆ ಸಂಖ್ಯೆಗಳಿರುವ ಸಮೀಕರಣಗಳನ್ನು ಬಿಡಿಸುವುದು.
- ಮೇಲಿನ ವಿಷಯಕ್ಕೆ ಸಂಬಂಧಿಸಿದ ಅನ್ವಯ ಪ್ರಶ್ನೆಗಳು
- ಎರಡೂ ಕಡೆ ಚರಾಕ್ಷರವಿರುವ ಸಮೀಕರಣಗಳನ್ನು ಬಿಡಿಸುವುದು
- ಇವುಗಳಿಗೆ ಸಂಬಂಧಿಸಿದ ಅನ್ವಯ ಪ್ರಶ್ನೆಗಳು
- ಸಮೀಕರಣವನ್ನು ಸುಲಭರೂಪಕ್ಕೆ ತರುವುದು
- ರೇಖಾತ್ಮಕ ರೂಪಕ್ಕೆ ತರಬಹುದಾದ ಸಮೀಕರಣಗಳು

**ಪೀಠಿಕೆ:**

2x + 3, x – 6, 2y + 3 ಇವುಗಳು ಕೇವಲ ಪದೋಕ್ತಿಗಳು. ಏಕೆಂದರೆ ಇವುಗಳಲ್ಲಿ ಸಮತೆಯ ಚಿಹ್ನೆ ಇಲ್ಲ. ಆದರೆ

3x = 5, 2y + 3 = 7, z +6 = 9 ಈ ವಾಕ್ಯಗಳು ಸಮತೆಯ ಚಿಹ್ನೆಯನ್ನು ಹೊಂದಿವೆ. ಆದ್ದರಿಂದ ಇವುಗಳನ್ನು ಸಮೀಕರಣಗಳು ಎನ್ನುವರು.

**ಒಂದು ಚರಾಕ್ಷರವಿರುವ ರೇಖಾತ್ಮಕ ಸಮೀಕರಣ:**

ಒಂದು ಸಮೀಕರಣದಲ್ಲಿ ಒಂದೇ ಒಂದು ಚರಾಕ್ಷರವಿದ್ದು, ಚರಾಕ್ಷರದ ಗರಿಷ್ಠ ಘಾತ 1 ಆಗಿದ್ದರೆ ಅದನ್ನು ಒಂದು ಚರಾಕ್ಷರವಿರುವ ರೇಖಾತ್ಮಕ ಸಮೀಕರಣ ಎನ್ನುವರು.

x + 6 = 3, 2y – 9 = 12

**ಸಮೀಕರಣಗಳಿಗೆ ಪರಿಹಾರ:**

ಒಂದು ಸಮೀಕರಣದಲ್ಲಿರುವ ಕೆಲವು ಬೆಲೆಗಳಿಗೆ ಮಾತ್ರ ಸಮೀಕರಣದ ಎಡಭಾಗ ಮತ್ತು ಬಲಭಾಗಗಳಲ್ಲಿರುವ ಪದೋಕ್ತಿಗಳು ಸಮವಾಗಿರುವುದು. ಅಂತಹ ಬೆಲೆಗಳನ್ನು ಸಮೀಕರಣದ ಪರಿಹಾರ ಎನ್ನುವರು.

**ಒಂದು ಕಡೆ ರೇಖಾತ್ಮಕ ಬಹುಪದೋಕ್ತಿ ಇನ್ನೊಂದು ಕಡೆ ಸಂಖ್ಯೆಗಳಿರುವ ಸಮೀಕರಣಗಳನ್ನು ಬಿಡಿಸುವುದು.**

**ಉದಾಹರಣೆ 1: ಬಿಡಿಸಿರಿ 2x – 3 = 7**

**ಪರಿಹಾರ:**

2x – 3 = 7 ಎರಡೂ ಕಡೆ 3ನ್ನು ಕೂಡಿಸಿ

2x – 3 + 3 = 7 + 3

2x = 10 ಎರಡೂ ಕಡೆ 2 ರಿಂದ ಭಾಗಿಸಿ

$\frac{2x}{2} = \frac{10}{2}$

$\Rightarrow x = 5$

**ಉದಾಹರಣೆ 2: ಬಿಡಿಸಿರಿ. 2y + 9 = 4**

**ಪರಿಹಾರ:**

2y + 9 = 4 ಎರಡೂ ಕಡೆ 9 ನ್ನು ಕಳೆದಾಗ

2y + 9 – 9 = 4 – 9

2y = - 5 ಎರಡೂ ಕಡೆ 2 ರಿಂದ ಭಾಗಿಸಿ

$\frac{2y}{2} = \frac{-5}{2}$

$\Rightarrow y = \frac{-5}{2}$

**ಉದಾಹರಣೆ 3: ಬಿಡಿಸಿರಿ. $\frac{x}{3} + \frac{5}{2} = -\frac{3}{2}$**

**ಪರಿಹಾರ:**

$\frac{x}{3} + \frac{5}{2} = -\frac{3}{2}$ ಎರಡೂ ಕಡೆ $\frac{5}{2}$ ನ್ನು ಕಳೆದಾಗ

$\frac{x}{3} + \frac{5}{2} - \frac{5}{2} = -\frac{3}{2} - \frac{5}{2}$

$\frac{x}{3} = \frac{-3-5}{2}$

$\frac{x}{3} = \frac{-8}{2}$ ಎರಡೂ ಕಡೆ 3 ರಿಂದ ಗುಣಿಸಿ.

$x = -4 \times 3$

$x = -12$

**ಉದಾಹರಣೆ 4: ಬಿಡಿಸಿರಿ. $\frac{15}{4} - 7x = 9$**

**ಪರಿಹಾರ:**

$\frac{15}{4} - 7x = 9$ ಎರಡೂ ಕಡೆ $\frac{15}{4}$ನ್ನು ಕಳೆಯಿರಿ.

$\frac{15}{4} - \frac{15}{4} - 7x = 9 - \frac{15}{4}$

$-7x = \frac{36-15}{4}$ ಎರಡೂ ಕಡೆ −7 ರಿಂದ ಭಾಗಿಸಿ

$\frac{-7x}{-7} = \frac{21}{4\times -7}$

$x = -\frac{21}{28}$

$x = -\frac{3}{4}$

**ಮೇಲಿನ ವಿಷಯಕ್ಕೆ ಸಂಬಂಧಿಸಿದ ಅನ್ವಯ ಪ್ರಶ್ನೆಗಳು**

**ಉದಾಹರಣೆ 5: ಭಾಗಲಬ್ಧ ಸಂಖ್ಯೆ $\frac{-7}{3}$ ರ ಎರಡರಷ್ಟು ಸಂಖ್ಯೆಗೆ ಯಾವ ಸಂಖ್ಯೆ ಸೇರಿಸಿದರೆ, $\frac{3}{7}$ ಬರುತ್ತದೆ?**

**ಪರಿಹಾರ:**

ಸೇರಿಸಿದ ಸಂಖ್ಯೆ x ಆಗಿರಲಿ

$2\times \frac{-7}{3} + x = \frac{3}{7}$

$\frac{-14}{3} + x = \frac{3}{7}$ ಎರಡೂ ಕಡೆ $\frac{-14}{3}$ನ್ನು ಕೂಡಿಸಿ.

$-\frac{14}{3} + \frac{14}{3} + x = \frac{3}{7} + \frac{14}{3}$

$x = \frac{9+98}{21}$

$x = \frac{107}{21}$

ಆದ್ದರಿಂದ $\frac{-7}{3}$ ರ ಎರಡರಷ್ಟು ಸಂಖ್ಯೆಗೆ $\frac{107}{21}$ ಸೇರಿಸಿದರೆ $\frac{3}{7}$ ಬರುತ್ತದೆ

**ಉದಾಹರಣೆ 6: ಒಂಧು ಆಯತದ ಸುತ್ತಳತೆಯು 13ಸೆಂ.ಮೀ. ಅದರ ಅಗಲವು $2\frac{3}{4}$ ಸೆಂ.ಮೀ. ಹಾಗಾದರೆ ಅದರ ಉದ್ದವನ್ನು ಕಂಡುಹಿಡಿಯಿರಿ.**

**ಪರಿಹಾರ:**

ಆಯತದ ಉದ್ದ = x ಆಗಿರಲಿ

ಸುತ್ತಳತೆ = 2(ಉದ್ದ + ಅಗಲ)

$13 = 2(x + 2\frac{3}{4})$

$13 = 2x + \frac{22}{4}$

$13 = 2x + \frac{11}{2}$ ಎರಡೂ ಕಡೆ $\frac{11}{2}$ನ್ನು ಕಳೆಯಿರಿ

$13 - \frac{11}{2} = 2x + \frac{11}{2} - \frac{11}{2}$

$\frac{26-11}{2} = 2x$

$\frac{15}{2} = 2x$ ಎರಡೂ ಕಡೆ 2 ರಿಂದ ಭಾಗಿಸಿ

$\frac{15}{2\times2} = \frac{2x}{2}$

$\frac{15}{4} = x \Rightarrow x = 3\frac{3}{4}$

ಆದ್ದರಿಂದ ಆಯತದ ಉದ್ದ = $3\frac{3}{4}$ ಸೆಂ.ಮೀ.

**ಉದಾಹರಣೆ 7: ಸಾಹಿಲನ ತಾಯಿಯ ಈಗಿನ ವಯಸ್ಸು ಸಾಹಿಲನ ಈಗಿನ ವಯಸ್ಸಿನ ಮೂರರಷ್ಟಿದೆ. 5 ವರ್ಷಗಳ ನಂತರ ಅವರಿಬ್ಬರ ವಯಸ್ಸಿನ ಮೊತ್ತ 66 ವರ್ಷಗಳಾಗುವುವು. ಹಾಗಾದರೆ ಅವರ ಈಗಿನ ವಯಸ್ಸುಗಳನ್ನು ಕಂಡುಹಿಡಿಯಿರಿ.**

**ಪರಿಹಾರ:**

ಸಾಹಿಲನ ಈಗಿನ ವಯಸ್ಸು x ವರ್ಷಗಳು ಆಗಿರಲಿ.

ಸಾಹಿಲನ ತಾಯಿಯ ವಯಸ್ಸು 3x ವರ್ಷಗಳು

ಪ್ರಶ್ನೆ ಪ್ರಕಾರ,

$(x + 5) + (3x + 5) = 66$

$x + 5 + 3x + 5 = 66$

$4x + 10 = 66$ ಎರಡೂ ಕಡೆ 10 ನ್ನು ಕಳೆಯಿರಿ

$4x + 10 - 10 = 66 - 10$

$4x = 56$ ಎರಡೂ ಕಡೆ 4 ರಿಂದ ಭಾಗಿಸಿ

$\frac{4x}{4} = \frac{56}{4}$

$x = 14$

ಆದ್ದರಿಂದ ಸಾಹಿಲನ ಈಗಿನ ವಯಸ್ಸು = 9 ವರ್ಷಗಳು. ಅವನ ತಾಯಿಯ ಈಗಿನ ವಯಸ್ಸು

= 14 × 3 = 42 ವರ್ಷಗಳು.

**ಉದಾಹರಣೆ 8: ಬನ್ನಿಯ ಹತ್ತಿರ 5 ರೂ ನಾಣ್ಯಗಳೆಷ್ಟು ಇರುವುದೋ ಅದರ ಮೂರರಷ್ಟು 2 ರೂ ನಾಣ್ಯಗಳಿವೆ. ಅವುಗಳ ಒಟ್ಟು ಮೌಲ್ಯ 77 ರೂಗಳು. ಹಾಗಾದರೆ ಅವನ ಬಳಿ ಇರುವ 5ರೂ ನಾಣ್ಯಗಳೆಷ್ಟು? 2ರೂ ನಾಣ್ಯಗಳೆಷ್ಟು?**

**ಪರಿಹಾರ:**

ಬನ್ನಿಯ ಬಳಿ ಇರುವ 5ರೂ ನಾಣ್ಯಗಳು = x ಆಗಿರಲಿ

ಅವನ ಬಳಿ ಇರುವ 2ರೂ ನಾಣ್ಯಗಳು = 3x

ಪ್ರಶ್ನೆ ಪ್ರಕಾರ,

$5 \times x + 3x \times 2 = 77$

$5x + 6x = 77$

$11x = 77$ ಎರಡೂ ಕಡೆ 11 ರಿಂದ ಭಾಗಿಸಿ

$\frac{11x}{11} = \frac{77}{11}$

$x = 7$

ಆದ್ದರಿಂದ ಬನ್ನಿಯ ಬಳಿ ಇರುವ 5ರೂ ನಾಣ್ಯಗಳು = 7 ಮತ್ತು 2ರೂ ನಾಣ್ಯಗಳು = 3 × 7 = 21

**ಉದಾಹರಣೆ 9: 11ರ ಮೂರು ಅನುಕ್ರಮ ಗುಣಕಗಳ ಮೊತ್ತ 363 ಆದರೆ ಆ ಗುಣಕಗಳನ್ನು ಕಂಡುಹಿಡಿಯಿರಿ.**

**ಪರಿಹಾರ:**

ಪ್ರಶ್ನೆ ಪ್ರಕಾರ,

$x + x + 11 + x + 22 = 363$

$3x + 33 = 363$ ಎರಡೂ ಕಡೆ 33ನ್ನು ಕಳೆಯಿರಿ

$3x + 33 - 33 = 363 - 33$

$3x = 330$ ಎರಡೂ ಕಡೆ 3 ರಿಂದ ಭಾಗಿಸಿ

$\frac{3x}{3} = \frac{330}{3}$

$x = 110$

ಆದ್ದರಿಂದ ಆ ಸಂಖ್ಯೆಗಳು 110, 110+11, 110+22 = 110, 121, 132

**ಉದಾಹರಣೆ 10: ಎರಡು ಸಂಖ್ಯೆಗಳ ವ್ಯತ್ಯಾಸ 66 ಮತ್ತು ಅವುಗಳ ಅನುಪಾತ 2 : 5 ಆ ಸಂಖ್ಯೆಗಳು ಯಾವುವು?**

**ಪರಿಹಾರ:**

ಸಂಖ್ಯೆಗಳು 2x ಮತ್ತು 5x ಆಗಿರಲಿ.

ಪ್ರಶ್ನೆ ಪ್ರಕಾರ,

$5x - 2x = 66$

$3x = 66$ ಎರಡೂ ಕಡೆ 3 ರಿಂದ ಭಾಗಿಸಿ

$\frac{3x}{3} = \frac{66}{3}$

x = 22

ಆದ್ದರಿಂದ ಆ ಸಂಖ್ಯೆಗಳು 2 × 22 = 44 ಮತ್ತು 5× 22 = 110

**ಉದಾಹರಣೆ 11: ದೇವೇಶಿಯ ಹತ್ತಿರ ರೂ 50, ರೂ 20 ಮತ್ತು 10 ರೂ ಮೌಲ್ಯಗಳ ಒಟ್ಟು 590 ರೂಪಾಯಿ ಬೆಲೆಯ ನೋಟುಗಳಿವೆ. ಅವುಗಳಲ್ಲಿ 50ರೂ, 20 ರೂ ಮೌಲ್ಯಗಳ ನೋಟುಗಳ ಸಂಖ್ಯೆಗಳು 3 : 5 ರ ಅನುಪಾತದಲ್ಲಿವೆ. ಅವನ ಬಳಿ ಒಟ್ಟು 25 ನೋಟುಗಳಿದ್ದರೆ, ಪ್ರತಿ ಮೌಲ್ಯದ ನೋಟುಗಳು ಎಷ್ಟು ಇವೆ?**

**ಪರಿಹಾರ:**

ದೇವೇಶಿಯ ಬಳಿ ಇರುವ 50ರೂ ನೋಟುಗಳ ಸಂಖ್ಯೆ = 3x ಆಗಿರಲಿ

ಅವನ ಬಳಿ ಇರುವ 20ರೂ ನೋಟುಗಳ ಸಂಖ್ಯೆ = 5x

ಅವನ ಬಳಿ ಇರುವ 10 ರೂ ನೋಟುಗಳ ಸಂಖ್ಯೆ = 25 – (3x + 5x) = 25 – 8x

ಪ್ರಶ್ನೆ ಪ್ರಕಾರ,

3x × 50 + 5x × 20 + (25 – 8x)×10 = 590

150x + 100x + 250 – 80x = 590

170x + 250 = 590 ಎರಡೂ ಕಡೆ 250 ನ್ನು ಕಳೆಯಿರಿ

170x + 250 – 250 = 590 – 250

170x = 340 ಎರಡೂ ಕಡೆ 170 ರಿಂದ ಭಾಗಿಸಿ

$\frac{170x}{170} = \frac{340}{170}$

$x$ = 2

ಆದ್ದರಿಂದ 50ರೂ ನೋಟುಗಳ ಸಂಖ್ಯೆ = 3× 2 = 6

20ರೂ ನೋಟುಗಳ ಸಂಖ್ಯೆ = 5 × 2 = 10 ಮತ್ತು

10ರೂ ನೋಟುಗಳ ಸಂಖ್ಯೆ = 25 – 16 = 9

**ಎರಡೂ ಕಡೆ ಚರಾಕ್ಷರವಿರುವ ಸಮೀಕರಣಗಳನ್ನು ಬಿಡಿಸುವುದು**

**ಉದಾಹರಣೆ 12:ಬಿಡಿಸಿರಿ. 2x – 3 = x + 2**

**ಪರಿಹಾರ:**

2x – 3 = x + 2 ಎರಡೂ ಕಡೆ 3ನ್ನು ಕೂಡಿಸಿ.

2x – 3 + 3 = x + 2 + 3

2x = x + 5 ಎರಡೂ ಕಡೆ x ನ್ನು ಕಳೆಯಿರಿ.

2x – x = x + 5 – x

x = 5

**ಉದಾಹರಣೆ 13:ಬಿಡಿಸಿರಿ. 5x + $\frac{7}{2}$ = $\frac{3}{2}$x - 14**

**ಪರಿಹಾರ:**

5x + $\frac{7}{2}$ = $\frac{3}{2}$x - 14 ಎರಡೂ ಕಡೆ 2 ರಿಂದ ಗುಣಿಸಿ.

5x × 2 + $\frac{7}{2}$ × 2 = $\frac{3}{2}$x × 2 - 14 × 2

10x + 7 = 3x – 28

10x – 3x = - 28 - 7

7x = -35

x = - 5

**ಇವುಗಳಿಗೆ ಸಂಬಂಧಿಸಿದ ಅನ್ವಯ ಪ್ರಶ್ನೆಗಳು**

**ಉದಾಹರಣೆ 14: 2 – ಅಂಕಿ ಸಂಖ್ಯೆಯೊಂದರ ಅಂಕಿಗಳ ವ್ಯತ್ಯಾಸವು 3. ಈ ಅಂಕಿಗಳನ್ನು ಅದಲು ಬದಲು ಮಾಡಿದಾಗ ಬರುವ ಸಂಖ್ಯೆ ಮತ್ತು ಮೊದಲ ಸಂಖ್ಯೆಗಳ ಮೊತ್ತ 143. ಹಾಗಾದರೆ ಮೂಲ ಸಂಖ್ಯೆ ಯಾವುದು?**

**ಪರಿಹಾರ:**

2– ಅಂಕಿಯ ಸಂಖ್ಯೆಯ ಬಿಡಿಸ್ಥಾನದಲ್ಲಿರುವ ಅಂಕಿ = x ಆಗಿರಲಿ.

ಆದ್ದರಿಂದ ಹತ್ತರ ಸ್ಥಾನದಲ್ಲಿರುವ ಸಂಖ್ಯೆ x + 3

ಪ್ರಶ್ನೆ ಪ್ರಕಾರ,

10× (x + 3) + x × 1 + 10 × x + (x + 3) ×1 = 143

10x + 30 + x + 10x + x + 3 = 143

22x + 33 = 143

22x = 143 – 33

22x = 110

x = 5

ಆದ್ದರಿಂದ ಎರಡಂಕಿಯ ಸಂಖ್ಯೆ = 85

**ಉದಾಹರಣೆ 15: ಅರ್ಜುನನು ಶ್ರಿಯಾಳ ಎರಡರಷ್ಟು ದೊಡ್ಡವನು. 5 ವರ್ಷಗಳ ಹಿಂದೆ ಅರ್ಜುನನು ಶ್ರಿಯಾಳ ಮೂರರಷ್ಟು ದೊಡ್ಡವನಿದ್ದನು. ಹಾಗಾದರೆ ಅವರಿಬ್ಬರ ವಯಸ್ಸುಗಳೆಷ್ಟು?**

**ಪರಿಹಾರ:**

ಶ್ರಿಯಾಳ ವಯಸ್ಸು = x ವರ್ಷಗಳು ಆಗಿರಲಿ.

ಅರ್ಜುನನ ವಯಸ್ಸು = 2x ವರ್ಷಗಳು

ಪ್ರಶ್ನೆ ಪ್ರಕಾರ,

3(x – 5) = 2x – 5

3x – 15 = 2x – 5

3x – 2x = -5 + 15

x = 10

ಆದ್ದರಿಂದ ಶ್ರಿಯಾಳ ವಯಸ್ಸು = 10ವರ್ಷಗಳು.

ಅರ್ಜುನನ ವಯಸ್ಸು = 2×10 =20ವರ್ಷಗಳು

**ಸಮೀಕರಣವನ್ನು ಸುಲಭರೂಪಕ್ಕೆ ತರುವುದು.**

**ಉದಾಹರಣೆ 16: ಬಿಡಿಸಿರಿ.** $\frac{6x+1}{3} + 1 = \frac{x-3}{6}$

**ಪರಿಹಾರ:**

$\frac{6x+1}{3} + 1 = \frac{x-3}{6}$

$\frac{6x+1}{3} - \frac{x-3}{6} = -1$

$\frac{2(6x+1)-(x-3)}{6} = -1$

$\frac{12x+2 \ -x+3}{6} = -1$

$\frac{11x+5}{6} = -1$

$11x + 5 = -6$

$11x = -6 - 5$

11x = -11

x = $\frac{-11}{11}$

x = −1

**ಉದಾಹರಣೆ 17: ಬಿಡಿಸಿರಿ.**

$5x - 2(2x - 7) = 2(3x - 1) + \frac{7}{2}$

**ಪರಿಹಾರ:**

$5x - 2(2x - 7) = 2(3x - 1) + \frac{7}{2}$

$5x - 4x + 14 = 6x - 2 + \frac{7}{2}$

$x - 6x = -2 + \frac{7}{2} - 14$

$-5x = \frac{7}{2} - 16$

$-5x = \frac{7-32}{2}$

$-5x = \frac{-25}{2}$

$x = \frac{-25}{2\times -5}$

$x = \frac{5}{2}$

**ರೇಖಾತ್ಮಕ ರೂಪಕ್ಕೆ ತರಬಹುದಾದ ಸಮೀಕರಣಗಳು**

**ಉದಾಹರಣೆ 18: ಬಿಡಿಸಿರಿ.** $\frac{x+1}{2x+3} = \frac{3}{8}$

**ಪರಿಹಾರ:**

$\frac{x+1}{2x+3} = \frac{3}{8}$

8(x + 1) = 3(2x + 3)

8x + 8 = 6x + 9

8x – 6x = 9 – 8

2x = 1

x = $\frac{1}{2}$

**ಉದಾಹರಣೆ 19: ಅನು ಮತ್ತು ರಾಜ್‌ರ ವಯಸ್ಸುಗಳು 4 : 5 ರ ಅನುಪಾತದಲ್ಲಿದೆ. 8 ವರ್ಷಗಳ ನಂತರ ಅವ ವಯಸ್ಸಿನ ಅನುಪಾತ 5 : 6 ಆದರೆ ಅವರ ಈಗಿನ ವಯಸ್ಸುಗಳೆಷ್ಟು?**

**ಪರಿಹಾರ:**

ಅನುವಿನ ವಯಸ್ಸು =4x ಆಗಿರಲಿ

ರಾಜ್‌ನ ವಯಸ್ಸು = 5x

ಪ್ರಶ್ನೆ ಪ್ರಕಾರ,

$\frac{4x+8}{5x+8} = \frac{5}{6}$

6 (4x + 8) = 5(5x+8)

24x + 48 = 25x + 40

24x- 25x = 40 – 48

-x = - 8

x = 8

ಆದ್ದರಿಂದ ಅನುವಿನ ವಯಸ್ಸು = 4× 8 = 32ವರ್ಷಗಳು

ರಾಜ್‌ನ ವಯಸ್ಸು = 5 × 8 = 40 ವರ್ಷಗಳು

## ಅಭ್ಯಾಸ 3.1

**ಕೆಳಗಿನ ಸಮೀಕರಣಗಳನ್ನು ಬಿಡಿಸಿ.**

**1. x – 2 = 7**

**Answer:**

x – 2 = 7

x – 2 + 2 = 7 + 2

[2ನ್ನು ಎರಡೂ ಬದಿಗೆ ಕೂಡಿದಾಗ]

x = 9

**2. y + 3 = 10**

**Answer:**

y + 3 = 10

y + 3 – 3 = 10 – 3

[3ನ್ನು ಎರಡೂ ಬದಿಯಿಂದ ಕಳೆದಾಗ]

y = 7

**3. 6 = z + 2**

**Answer:**

6 = z + 2

6 – 2 = z + 2 – 2

4 = z ⇒ z = 4

**[2ನ್ನು ಎರಡೂ ಬದಿಯಿಂದ ಕಳೆದಾಗ]**

**4.** $\frac{3}{7} + x = \frac{17}{7}$

**Answer:**

$\frac{3}{7} + x = \frac{17}{7}$

$\frac{3}{7} + x - \frac{3}{7} = \frac{17}{7} - \frac{3}{7}$

[$\frac{3}{7}$ ನ್ನು ಎರಡೂ ಬದಿಯಿಂದ ಕಳೆದಾಗ]

$x = \frac{17-3}{7}$

$x = \frac{14}{7}$

**5. 6x = 12**

**Answer:**

6x = 12

$\frac{6x}{6} = \frac{12}{6}$

[6ರಿಂದ ಎರಡೂ ಬದಿಗೆ ಭಾಗಿಸಿದಾಗ]

$x = 2$

**6. $\frac{t}{5} = 10$**

**Answer:**

$\frac{t}{5} = 10$

$\frac{t}{5} \times 5 = 10 \times 5$

[5 ನ್ನು ಎರಡೂ ಬದಿಗೆ ಗುಣಿಸಿದಾಗ]

$t = 50$

**7. $\frac{2x}{3} = 18$**

**Answer:**

$\frac{2x}{3} \times 3 = 18 \times 3$

[3 ನ್ನು ಎರಡೂ ಬದಿಗೆ ಗುಣಿಸಿದಾಗ]

2x = 54

$\frac{2x}{2} = \frac{54}{2}$

[6ರಿಂದ ಎರಡೂ ಬದಿಗೆ ಭಾಗಿಸಿದಾಗ]

x = 27

**8. $1.6 = \frac{x}{1.5}$**

**Answer:**

$1.6 = \frac{x}{1.5}$

$1.6 \times 1.5 = \frac{x}{1.5} \times 1.5$

$2.4 = x \Rightarrow x = 2.4$

**9. 7x – 9 = 16**

**Answer:**

7x – 9 = 16

7x – 9 + 9 = 16 + 9

[9 ನ್ನು ಎರಡೂ ಬದಿಗೆ ಕೂಡಿದಾಗ]

7x = 25

$\frac{7x}{7} = \frac{25}{7}$

[7 ರಿಂದ ಎರಡೂ ಬದಿಗೆ ಭಾಗಿಸಿದಾಗ]

$x = \frac{25}{7}$

**10. 14y – 8 = 13**

**Answer:**

14y – 8 = 13

14y – 8 + 8 = 13 + 8

14y = 21

$\frac{14y}{14} = \frac{21}{14}$

[14 ರಿಂದ ಎರಡೂ ಬದಿಗೆ ಭಾಗಿಸಿದಾಗ]

$y = \frac{3}{2}$

**11. 17 + 6p = 9**

**Answer:**

17 + 6p = 9

17 + 6p – 17 = 9 – 17

[ 17 ನ್ನು ಎರಡೂ ಬದಿಯಿಂದ ಕಳೆದಾಗ]

6p = - 8

$\frac{6p}{6} = \frac{-8}{6}$

[6 ರಿಂದ ಎರಡೂ ಬದಿಗೆ ಭಾಗಿಸಿದಾಗ]

$p = \frac{-4}{3}$

**12. $\frac{x}{3} + 1 = \frac{7}{15}$**

**Answer:**

$\frac{x}{3} + 1 = \frac{7}{15}$

$\frac{x}{3} + 1 - 1 = \frac{7}{15} - 1$

[ 1 ನ್ನು ಎರಡೂ ಬದಿಯಿಂದ ಕಳೆದಾಗ]

$\frac{x}{3} = \frac{7-15}{15}$

$\frac{x}{3} \times 3 = \frac{-8}{15} \times 3$ [3 ನ್ನು ಎರಡೂ ಬದಿಗೆ ಗುಣಿಸಿದಾಗ]

$x = \frac{-8}{5}$

# ಅಭ್ಯಾಸ 3.2

**1. ಒಂದು ಸಂಖ್ಯೆಯಿಂದ $\frac{1}{2}$ ವನ್ನು ಕಳೆದು ಬಂದ ವ್ಯತ್ಯಾಸವನ್ನು $\frac{1}{2}$ ದಿಂದ ಗುಣಿಸಿದರೆ, $\frac{1}{8}$ ಬರುವುದು. ಆ ಸಂಖ್ಯೆ ಯಾವುದು?**

**Answer:**

ಸಂಖ್ಯೆ 'x' ಆಗಿರಲಿ

ಪ್ರಶ್ನೆ ಪ್ರಕಾರ, $\left(x - \frac{1}{2}\right)\frac{1}{2} = \frac{1}{8}$

$2\times\left(x - \frac{1}{2}\right)\frac{1}{2} = \frac{1}{8} \times 2$

[2ನ್ನು ಎರಡೂ ಬದಿಗೆ ಗುಣಿಸಿದಾಗ]

$x - \frac{1}{2} = \frac{1}{4}$

